
ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ



ಗಾಂಧೀಜಿ ಮತ್ತು ಹಿಂದೂ-ಮುಸ್ಲಿಂರ ಸೌಹಾರ್ದತೆ

ಕನ್ನಡಾನುವಾದ : ಪ್ರೊ. ಷಾಕಿರ ಖಾನಂ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಬೆಂಗಳೂರು

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ

ಗಾಂಧೀಜಿ
ಮತ್ತು
ಹಿಂದೂ–ಮುಸ್ಲಿಂರ ಸೌಹಾರ್ದತೆ


ಮೂಲ ಹಿಂದಿ :
ವಿಶ್ವಂಭರನಾಥ ಪಾಂಡೆ

ಕನ್ನಡಾನುವಾದ :
ಡಾ. ಷಾಕಿರ ಖಾನಂ

ಪ್ರಕಾಶಕರು
ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560001, ದೂರವಾಣಿ : 080–22261967
ಇಮೇಲ್ : gandhibhavanabengaluru@gmail.com

ಗಾಂಧೀಜಿ ಮತ್ತು ಹಿಂದೂ–ಮುಸ್ಲಿಂರ ಸೌಹಾರ್ದತೆ
ಲೇಖಕರು : ಹಿಂದಿ ಆವೃತ್ತಿ – ವಿಶ್ವಂಭರನಾಥ ಪಾಂಡೆ
ಕನ್ನಡಾನುವಾದ : ಡಾ. ಷಾಕಿರ ಖಾನಂ
ಪ್ರಕಾಶಕರು : ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560001, ದೂರವಾಣಿ : 080–22261967

ಮೊದಲ ಮುದ್ರಣ	:	2022
ಪ್ರತಿಗಳು	:	500
ಪುಟಗಳು	:	XX + 68
ಬೆಲೆ	:	ರೂ. 90/–
ಒಳ ಪುಟ ಕಾಗದ	:	58 ಜಿ.ಎಸ್.ಎಂ. ಮ್ಯಾಫ್‌ಲಿತೋ
ಮುಖ ಪುಟ	:	300 ಜಿ.ಎಸ್.ಎಂ. ಆರ್ಟ್ ಕಾರ್ಡ್
ISBN No	:	978-81-950785-2-3
ಸಹಕಾರ	:	ರಾಷ್ಟ್ರೀಯ ಸೇವಾ ಯೋಜನೆ
ಮುದ್ರಕರು	:	ಕ್ರಿಯೇಟಿವ್‌ಗೀಕ್ಸ್ ಯಾದವ ಕಾಲೇಜು ರಸ್ತೆ ಮಾಧವನಗರ, ಬೆಂಗಳೂರು–560001 ದೂರವಾಣಿ : 080 40927049



ಅರ್ಪಣೆ

ಸ್ವಾತಂತ್ರ್ಯ ಹೋರಾಟಗಾರರು, ಗಾಂಧಿ ಅನುಯಾಯಿ

ದಿ. ಎಂ. ವೆಲ್ಲೂರಿ

ಅವರಿಗೆ ಗೌರವಪೂರ್ವಕವಾಗಿ



ರಕ್ತವಿಲ್ಲದೆ ದೇಹವು ಹೇಗೆ ಬದುಕಲು ಸಾಧ್ಯವಿಲ್ಲವೋ
ಹಾಗೆಯೇ ಶ್ರದ್ಧೆ ಮತ್ತು ಪ್ರಾರ್ಥನೆಗಳಿಲ್ಲದೆ
ಆತ್ಮವೂ ಕೂಡ ಬದುಕಲು ಸಾಧ್ಯವಿಲ್ಲ !

- ಮಹಾತ್ಮ ಗಾಂಧೀಜಿ

ನಿವ್ಮೊಡನೆ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧಿ ಭವನವು, ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ಹಾಕಿಕೊಂಡಿರುವ ಹಲವಾರು ಕಾರ್ಯ ಯೋಜನೆಗಳಲ್ಲಿ, ಗಾಂಧೀಜಿ ಅವರ ಚಿಂತನೆಗಳು ಮತ್ತು ತತ್ವ ಸಿದ್ಧಾಂತಗಳುಳ್ಳ ಸಾಹಿತ್ಯವನ್ನು ಪ್ರಕಟಿಸುವುದು, ಪ್ರದರ್ಶಿಸುವುದು ಮತ್ತು ವಿತರಿಸುವುದೂ ಪ್ರಮುಖವಾದುದಾಗಿದೆ. ಸ್ವಾತಂತ್ರ್ಯೋತ್ಸವ 75ರ ವರ್ಷಾಚರಣೆ ಸಂದರ್ಭದಲ್ಲಿ ಡಾ. ಷಾಕೀರ ಖಾನಂ ಅವರ ಕನ್ನಡಾನುವಾದದ ಕೃತಿ "ಗಾಂಧೀಜಿ ಮತ್ತು ಹಿಂದೂ-ಮುಸ್ಲಿಂರ ಸೌಹಾರ್ದತೆ" ಪ್ರಕಟಿಸಲು ಹೆಮ್ಮೆ ಎನಿಸುತ್ತದೆ.

"ಗಾಂಧಿ ಮತ್ತು ಹಿಂದು ಮುಸ್ಲಿಂ" ಕೃತಿಯನ್ನು ರಚಿಸಿ, ಗಾಂಧಿ ಭವನದಿಂದ ಪ್ರಕಟಣೆಯಾಗಲಿ ಎಂದು ಆಶಿಸಿ, ನಮಗೆ ಹಸ್ತಪ್ರತಿಯನ್ನು ಕೊಟ್ಟಿರುವ ಡಾ. ಷಾಕೀರಾ ಖಾನಂ ಇವರಿಗೆ ನಾನು ಕೃತಜ್ಞತೆಗಳನ್ನು ತಿಳಿಸುತ್ತೇನೆ. ವರ್ತಮಾನದ ಭಾರತದಲ್ಲಿ ನಡೆಯುತ್ತಿರುವ ಸಾಮಾಜಿಕ – ಸಾಂಸ್ಕೃತಿಕ – ರಾಜಕೀಯ ತಲ್ಲಣಕ್ಕೆ ಉಪಶಮನದ ರೂಪದಲ್ಲಿ ಈ ಕೃತಿ ಇದೆ. ಮಹಾತ್ಮಾಜಿ ಅವರು ಅಜೀವ ಪರ್ಯಂತ, ಹಿಂದೂ-ಮುಸ್ಲಿಂ-ಸಿಖ್-ಪಾರ್ಸಿ ಹಾಗೂ ಎಲ್ಲಾ ಸಮುದಾಯದವರ ಒಗ್ಗಟ್ಟಿಗಾಗಿ ಶ್ರಮಿಸಿದರು. ಗಾಂಧೀಜಿ ಅವರು ಪಾಲಿಸುತ್ತಿದ್ದ ಸತ್ಯ-ಅಹಿಂಸೆ-ಸಮಾನತೆಯ ತತ್ವಗಳ ತಾಯಿಬೇರು, ಹಿಂದು-ಮುಸ್ಲಿಂರ ಐಕ್ಯತೆ ಎಂದು ನಂಬಿದ್ದರು. ಭಾರತದಲ್ಲಿನ ಎಲ್ಲಾ ಸಮುದಾಯದವರ ಒಗ್ಗಟ್ಟಿನಿಂದ ಮಾತ್ರ ಭಾರತ ರಾಷ್ಟ್ರವಾಗಿ ಹೊರಹೊಮ್ಮುವುದು ಎಂದು ಪ್ರತಿಪಾದಿಸುತ್ತಿದರು. ಆದ್ದರಿಂದಲೇ ಅವರು, ಭಾರತೀಯತೆಯನ್ನು ಜನರಲ್ಲಿ ಮೂಡಿಸಲು, ತಮ್ಮ ಪತ್ರಿಕೆಗಳ ಮೂಲಕ, ಬರಹಗಳ ಮೂಲಕ, ಸತ್ಯಾಗ್ರಹದ ಮೂಲಕ, ಭಾಷಣ-ಸಂವಾದ-ಚರ್ಚೆಗಳ ಮೂಲಕ, ಒಗ್ಗಟ್ಟು, ಕೋಮು ಸೌಹಾರ್ದತೆಯನ್ನು ಬಿತ್ತುತ್ತಾ ಸಾಗಿದ್ದರು.

ಅವರು ಕೋಮು ಸೌಹಾರ್ದತೆಗಾಗಿ ದುಡಿದ ಪರಿಯನ್ನು ಹಿಂದಿ ಭಾಷೆಯಲ್ಲಿ ಕೃತಿ ರೂಪದಲ್ಲಿ ಶ್ರೀ ವಿಶ್ವಂಭರನಾಥ ಪಾಂಡೆ ಅವರು ಹೊರತಂದಿದ್ದಾರೆ. ಅದರ ಕನ್ನಡಾನುವಾದವನ್ನು ಸ್ಪಷ್ಟವಾಗಿ, ಸರಳವಾಗಿ ಮಾಡಿರುವ ಡಾ. ಷಾಕೀರ ಖಾನಂ ಇವರಿಗೆ ಅಭಿನಂದನೆಗಳನ್ನು ತಿಳಿಸುತ್ತೇನೆ. ಅಂಥಹ ಕೃತಿ ಇರುವುದರ ಬಗ್ಗೆ, ಮಾಹಿತಿ ಕೊಟ್ಟು, ಅದರ ಮಹತ್ವವನ್ನು ತಿಳಿಸಿ, ಭಾಷಾಂತರ ಮಾಡಿಕೊಡಲು ಒಪ್ಪಿ, ಪುಸ್ತಕ

ರೂಪದಲ್ಲಿ ಹೊರತರಲು ಸಕಲ ನೆರವು ನೀಡಿದ ಡಾ. ಷಾಕೀರಾ ಖಾನಂ ಅವರಿಗೆ ಕೃತಜ್ಞತೆಗಳನ್ನು ತಿಳಿಸುತ್ತೇನೆ. ಗಾಂಧೀಜಿ ಮತ್ತು ಹಿಂದು-ಮುಸ್ಲಿಂರ ಸೌಹಾರ್ದತೆ ಬಗ್ಗೆ ಅಪಾರ ಪ್ರೀತಿ ವಿಶ್ವಾಸ ಮತ್ತು ಕಾಳಜಿ ಇರುವುದರಿಂದ ಅವರು ಈ ಪ್ರಯತ್ನಕ್ಕೆ ತೊಡಗಿರುವುದು ಕಂಡುಬರುತ್ತದೆ. ಇವರ ನಿರಂತರ ಓದಿನ ಫಲಶ್ರುತಿಯನ್ನು ಸಾಮಾಜಿಕ ಸ್ವಾಸ್ಥ್ಯಕ್ಕಾಗಿ ಹಂಚಿಕೊಳ್ಳುವ ಮನೋಭೂಮಿಕೆ ಹೊಂದಿರುವುದರಿಂದ ಈ ಕೃತಿ ಪ್ರಕಟಗೊಳ್ಳಲು ಸಾಧ್ಯವಾಯಿತೆನ್ನಬಹುದು.

ಒಡಿಸ್ಸಾದ ರಾಜ್ಯಪಾಲರಾಗಿ ಸೇವೆ ಸಲ್ಲಿಸುತ್ತಾ ಬಿಡುವಿಲ್ಲದ ಹೊಣೆಗಾರಿಕೆ ಹೊತ್ತಿದ್ದರೂ, ಗಾಂಧೀಜಿ ಅವರ ಹಿಂದು-ಮುಸ್ಲಿಂ ಸೌಹಾರ್ದತೆಯ ವಿಚಾರವನ್ನು ಜನರಿಗೆ ತಿಳಿಸುವಂತಹ ಕಾರ್ಯ ಕೈಗೊಂಡ ಶ್ರೀ ವಿಶ್ವಂಭರನಾಥ ಪಾಂಡೆ ಅವರಿಗೆ ನಾನು ಋಣಿಯಾಗಿದ್ದೇನೆ. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ, ಗಾಂಧಿ ಅವರ ಅನುಯಾಯಿಯಾಗಿ ಅವರೊಂದಿಗೆ ಭಾರತೀಯರ ಒಗ್ಗಟ್ಟಿಗಾಗಿ ಶ್ರಮಿಸಿದವರಾಗಿದ್ದಾರೆ. ಸಾಹಿತಿ, ಹೋರಾಟಗಾರರಾಗಿ ಇವರು ಬರೆದ ಅನೇಕ ಕೃತಿಗಳಲ್ಲಿ "ಭಾರತ ಮತ್ತು ಮಾನವ ಸಂಸ್ಕೃತಿ" ಪ್ರಮುಖವಾದುದಾಗಿದೆ. ಪಾಟ್ನಾದ ಗಂಗಾ ನದಿಯ ತಟದಲ್ಲಿರುವ ಖುದಾ ಬಕ್ಷ ಓರಿಯಂಟಲ್ ಲೈಬ್ರರಿಯ ನಿರ್ದೇಶಕಿ ಆಗಿರುವ ಷಾಯಿಸ್ತಾ ಬೇದಾರ್ ಅವರು, ಗ್ರಂಥಾಲಯಕ್ಕಾಗಿ ಹಿಂದಿಯಲ್ಲಿ ಈ ಕೃತಿಯನ್ನು ಮರುಮುದ್ರಿಸಿರುವುದು, ಅತ್ಯಂತ ಶ್ಲಾಘನೀಯವಾದ ವಿಚಾರವಾಗಿದೆ. ದೆಹಲಿಯ ಸಾಂಪ್ರದಾಯಿಕತಾ ವಿರೋಧಿ ಸಮಿತಿಯ ಸುಭದ್ರಾ ಜೋಷಿ ಅವರು, ಗಾಂಧಿ ಅವರ ಸಂಸ್ಮರಣೆಯ 1999 ರಂದು ಮೂಲ ಕೃತಿಯನ್ನು ಪ್ರಕಟಿಸಿರುವುದಕ್ಕಾಗಿ ಅವರಿಗೆ ಗೌರವ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಗಾಂಧಿ ಅವರ ರಾಷ್ಟ್ರೀಯತೆ, ಒಗ್ಗಟ್ಟು, ದೇಶಪ್ರೇಮದ ಮೂಲತತ್ವಗಳಿಗೆ ಬುನಾದಿ, ಹಿಂದೂ-ಮುಸ್ಲಿಂರ ಐಕ್ಯತೆಯೆಂಬುದನ್ನು ಕನ್ನಡ ನಾಡಿನ ಪ್ರಖ್ಯಾತ ಸಾಹಿತಿಗಳು, ಜನಪರ ಚಿಂತಕರು ಆದ ಡಾ. ಕೆ. ಮರುಳಸಿದ್ದಪ್ಪ ಅವರು ಈ ಕೃತಿಯ ಮುನ್ನುಡಿಯಲ್ಲಿ ವಿವರವಾಗಿ ಬರೆದಿರುವುದು ಕೃತಿಯ ವಿಶಿಷ್ಟತೆಯನ್ನು ಹೆಚ್ಚಿಸಿದೆ. ಅವರಿಗೆ ನಮನಗಳನ್ನು ಸಲ್ಲಿಸುತ್ತೇನೆ.

ಈ ಕೃತಿಯನ್ನು ಲೋಕಾರ್ಪಣೆ ಮಾಡಲು ಸಿದ್ಧಗೊಳಿಸಿದ ಗಾಂಧಿ ಭವನದ ಗೌ. ಕಾರ್ಯದರ್ಶಿ, ಶ್ರೀಮತಿ ಇಂದಿರಾ ಕೃಷ್ಣಪ್ಪ ಅವರಿಗೆ ನನ್ನ ಅಭಿನಂದನೆಗಳು ಸಲ್ಲುತ್ತವೆ. ಈ ಕೃತಿಯನ್ನು ಪ್ರಕಟಿಸಲು ಸಹಕರಿಸಿದ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಎಲ್ಲಾ ಸದಸ್ಯರುಗಳಿಗೂ ಕೃತಜ್ಞತೆಗಳು ಸಲ್ಲುತ್ತವೆ. ಇದನ್ನು ಅಂದವಾಗಿ ಮುದ್ರಿಸಿದ ಕ್ರಿಯೇಟಿವ್‌ಗೀಕ್ಸ್‌ನ ಮಹೇಶ್ ಮತ್ತು ತಂಡಕ್ಕೆ ಆತ್ಮೀಯ ನಮನಗಳು.

ನಾಡೋಜ ಡಾ. ವೂಡೇ ಪಿ. ಕೃಷ್ಣ
ಅಧ್ಯಕ್ಷರು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ನಮ್ಮ ನಮ್ಮಲ್ಲಿ

ಬಾ ಮತ್ತು ಬಾಪು ಅವರ 150ನೇ ವರ್ಷಾಚರಣೆ ಮಾಲಿಕೆ ಮತ್ತು ಇದೀಗ ಸ್ವಾತಂತ್ರ್ಯೋತ್ಸವ - 75ರ ವರ್ಷಾಚರಣೆಯ ಸಂದರ್ಭದಲ್ಲಿ ಈ ಕೃತಿಯನ್ನು ಲೋಕಾರ್ಪಣೆ ಮಾಡಲು ಹರ್ಷವಾಗುತ್ತಿದೆ.

ಡಾ. ಪಾಕೀರಾ ಖಾನಂ ಅವರು ಅತ್ಯಂತ ಆಸಕ್ತಿಯಿಂದ ಮೂಲ ಹಿಂದಿ ಕೃತಿಯನ್ನು ತರಿಸಿ, ಕನ್ನಡಾನುವಾದವನ್ನು ಮುತುವರ್ಜಿಯಿಂದ ಮಾಡಿ, ಗಾಂಧಿ ಭವನದಿಂದ ಪ್ರಕಟಿಸಲು ಹಸ್ತಾಂತರಿಸಿದ್ದಾರೆ. ಗಾಂಧೀಜಿ ಅವರ ಬಗ್ಗೆ ಅವರಿಗಿರುವ ಶ್ರದ್ಧಾಭಕ್ತಿ ಈ ಕಷ್ಟದ ಕೆಲಸವನ್ನು ಇಷ್ಟವಾಗಿ ಮಾಡುವಂತೆ ಪ್ರೇರೇಪಿಸಿದೆ.

ಗಾಂಧಿ ಅನುಯಾಯಿಯಾಗಿ, ಭಾರತ ಸ್ವಾತಂತ್ರ್ಯ ಹೋರಾಟದ ಅನೇಕ ಚಳುವಳಿಯಲ್ಲಿ ಗಾಂಧಿ ಅವರೊಂದಿಗೆ ಭಾಗವಹಿಸಿ, ಜೈಲುಶಿಕ್ಷೆ ಅನುಭವಿಸಿದ ಮಹಾನ್ ವ್ಯಕ್ತಿತ್ವದ ವಿಶ್ವಂಬರನಾಥ ಪಾಂಡೆ ಅವರಿಗೆ ನಾವೆಲ್ಲ ಋಣಿಗಳಾಗಿದ್ದೇವೆ. ಹದಿಮೂರು ವರ್ಷ ಜೈಲಿನಲ್ಲಿ ಕಳೆದಾಗ, ಜ್ಞಾನ, ವಿವೇಕಗಳು ಇವರ ಹೃದಯದಲ್ಲಿ ಮುಪ್ಪರಿಗೊಂಡು, ಸ್ವಾತಂತ್ರ ನಂತರ ಗಾಂಧಿ ಅವರ ರಚನಾತ್ಮಕ ಕಾರ್ಯದಲ್ಲಿ ತೊಡಗಿಕೊಂಡ ಇವರ ಘನವ್ಯಕ್ತಿತ್ವ ದೇಶವಾಸಿಗಳಿಗೆ ತಿಳಿಯಲೇ ಬೇಕೆಂದು ಗಾಂಧಿ ಭವನ ಈ ಕೃತಿಯನ್ನು ಪ್ರಕಟಿಸಿದೆ. ಗಾಂಧಿ ಅವರ ಸರ್ವಧರ್ಮ ಸಮಭಾವದ ಚಿಂತನೆಯನ್ನು ಮೈಗೂಡಿಸಿಕೊಂಡ ಪಾಂಡೆ ಅವರು ಅಜೀವ ಪರ್ಯಂತ ಅದಕ್ಕಾಗಿ ಶ್ರಮಿಸಿದರು. ಕೋಮು ಸೌಹಾರ್ದತೆಯೇ ಭಾರತದ ಭದ್ರ ತಳಪಾಯ ಎಂಬುದನ್ನು ಈ ಕೃತಿಯಲ್ಲಿ ನಿರೂಪಿಸಿದ್ದಾರೆ. "ವಿಶ್ವವಾಣಿ" ಮಾಸ ಪತ್ರಿಕಾ ಸಂಪಾದಕರಾಗಿ, 'ನಹಿ ಹಿಂದಿ' ಮತ್ತು 'ಹಿಂದೂಸ್ತಾನಿ' ಕಲ್ಚರಲ್ ಸೊಸೈಟಿಯ ಪ್ರಕಾಶಕರಾಗಿ, ತಾನು ನಂಬಿದ ಸಿದ್ಧಾಂತವನ್ನು ಪ್ರತಿಪಾದಿಸಿದರು. ಹಿಂದು, ಮುಸ್ಲಿಂ, ಸಿಖ್, ಪಾರ್ಸಿ ಜನರ ಐಕ್ಯತೆಗಾಗಿ ಆ ಧರ್ಮಗಳ ಗ್ರಂಥಗಳನ್ನು ಓದಿ, ಮೂಲ ಸಿದ್ಧಾಂತಗಳನ್ನು ಅರ್ವಿಭವಿಸಿಕೊಂಡು ಕಾಯಾ ವಾಚ ಮನಸಾ, ದುಡಿದರು. ಪತ್ರಿಕೆ, ಸಂವಾದ, ಚರ್ಚೆ, ಜನ ಸಂಘಟನೆ ಮೂಲಕ ಒಗ್ಗಟ್ಟಿನ ಬಾವುಟ ಹಾರಿಸುತ್ತಾ ಸಾಗಿದರು. ಹಾಗೆಯೇ ಸರ್ವಧರ್ಮ ಸಮನ್ವಯದ ತತ್ವಾದರ್ಶಗಳನ್ನು ಹಿಡಿದೆತ್ತಿಕೊಂಡು, ಭಾರತದ ಜನಸಮುದಾಯವನ್ನು ಒಗ್ಗೂಡಿಸಿದ ಮಹಾತ್ಮಾಜೀ ಅವರ ಒಡನಾಟದ ಅನುಭವ ಕಥನವೇನೋ ಎಂಬಂತೆ ಈ ಕೃತಿ ಇದೆ. ವೇದ ಉಪನಿಷತ್, ಗೀತೆ, ಕುರಾನ್, ಬೈಬಲ್, ಗ್ರಂಥ ಸಾಹೀಬ್ ಎಲ್ಲಾ

ಧರ್ಮಗ್ರಂಥಗಳು “ದೇವನೊಬ್ಬ ನಾಮ ಹಲವು” ಎಂಬಂತಿರುವುದನ್ನು ಹೇಳುತ್ತಾ, ಹಿಂದು ಮುಸ್ಲಿಂ ಐಕ್ಯತೆಯ ಬಹುದೊಡ್ಡ ಧ್ವನಿ ಮೊಳಗಿಸಿದ್ದಾರೆ, ಪಾಂಡೆ ಅವರು.

ಇಂಥಹ ಕೃತಿಯನ್ನು ಪ್ರಕಟಿಸಿದ, ಎಂ.ಆರ್. ಬೇದಾರ್ ನಿರ್ದೇಶಕರು ಖುದಾ ಭಕ್ಷ ಓರಿಯಂಟಲ್ ಲೈಬ್ರರಿ ಪಾಟ್ನಾ ಇವರಿಗೂ, ಮೂಲ ಕೃತಿಗೆ ಅರ್ಥಪೂರ್ಣ ಮುನ್ನುಡಿ ಬರೆದ ಸಾಂಪ್ರದಾಯಿಕತೆ ವಿರೋಧಿ ಸಮಿತಿಯ, ಸುಭದ್ರ ಜೋಷಿ ಅವರಿಗೆ ಹೃತ್ಪೂರ್ವಕವಾಗಿ ಕೃತಜ್ಞತೆಗಳನ್ನು ತಿಳಿಸುತ್ತೇನೆ. ಅದರಂತೆ ಈ ಕೃತಿಯನ್ನು ಸದಾಶಯದಿಂದ ಸಮಗ್ರವಾಗಿ ಓದಿ, ತನ್ನ ಶಿಷ್ಯೆ ಪಾಕೀರಾ ಖಾನಂ ಅವರ ಶ್ರಮಕ್ಕೆ ‘ಶಹಬಾಷ್’ ಹೇಳುತ್ತಾ ವೈಚಾರಿಕವಾಗಿ, ವಿಶ್ಲೇಷಣಾ ಪೂರಕವಾಗಿ ಮುನ್ನುಡಿ ಬರೆದಿರುವ ಕನ್ನಡ ನಾಡಿನ ಪ್ರಖ್ಯಾತ ಸಾಹಿತಿಗಳಾದ ಡಾ. ಕೆ. ಮರುಳಸಿದ್ದಪ್ಪ ಅವರಿಗೆ ಅಭಿನಂದನೆಗಳನ್ನು ತಿಳಿಸುತ್ತೇನೆ. ಇಂಥಹದ್ದೊಂದು ಕೃತಿ ಇರುವುದಾಗಿ ಮಾಹಿತಿ ಸಂಗ್ರಹಿಸಿ ನನ್ನೊಡನೆ ಚರ್ಚಿಸಿ, ಅನುವಾದ ಮಾಡಿ, ಗಾಂಧಿ ಭವನದಿಂದ ಪ್ರಕಟಣೆಗೆ ಅನುವು ಮಾಡಿಕೊಟ್ಟ ಡಾ. ಪಾಕೀರಾ ಖಾನಂ ಅವರಿಗೆ ಅಭಿನಂದನೆಗಳನ್ನು ಮತ್ತು ಕೃತಜ್ಞತೆಗಳನ್ನು ತಿಳಿಸುತ್ತೇನೆ. ವರ್ತಮಾನದ ಭಾರತ ಹಾಗೂ ಕರ್ನಾಟಕದ ತಲ್ಲಣಗಳಿಗೆ, ಈ ಕೃತಿ ಉತ್ತರವಾಗಿ ನಿಲ್ಲುತ್ತದೆ. ದೇಶಪ್ರೇಮ, ಗಾಂಧೀಜಿ ಅವರ ಸರ್ವೋದಯ ತತ್ವಗಳು– ‘ಸಬ್ ಕೊ ಸನ್ಮತಿ ದೇ ಭಗವಾನ್’– ಪ್ರಾರ್ಥನೆ, ಧರ್ಮದ ಅಂತಸತ್ವವನ್ನು ಎಳೆಎಳೆಯಾಗಿ ವಿವರಿಸುತ್ತಾ, ದಾರಿದೀಪವಾಗಿ ನಮ್ಮೊಡನೆ ಸಾಗುತ್ತದೆ. ಇಂಥಹ ಕೃತಿಯ ಮಾಹಿತಿ ಕೊಟ್ಟು ಪ್ರಕಟಣೆ ಕೆಲಸದಲ್ಲಿ ಸಹಕಾರ ನೀಡಿರುವ ಡಾ. ಪಾಕೀರಾ ಖಾನಂ ಅವರಿಗೆ ಗಾಂಧಿ ಭವನದ ಪರವಾಗಿ ಕೃತಜ್ಞತೆಗಳನ್ನು ತಿಳಿಸುತ್ತೇನೆ. ಇದರಲ್ಲಿ ವಿಶ್ವಕವಿ ರವೀಂದ್ರನಾಥ ಠಾಗೂರ್ ಅವರ ಕವನಗಳು ಮತ್ತು ಅದರ ಕನ್ನಡಾನುವಾದವನ್ನು ಮಾಡಿರುವುದು ಕೃತಿಯ ಘನತೆಯನ್ನು ಔನ್ನತ್ಯಕ್ಕೇರಿಸಿದೆ. ಇದನ್ನು ಆಗು ಮಾಡಿದ ಡಾ. ಪಾಕಿರಾ ಅವರಿಗೆ ಧನ್ಯವಾದಗಳು.

ಈ ಕೃತಿಯನ್ನು ಪ್ರಕಟಿಸಲು ಸಹಕರಿಸಿದ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಎಲ್ಲಾ ಸದಸ್ಯರುಗಳಿಗೂ ಕೃತಜ್ಞತೆಗಳು ಸಲ್ಲುತ್ತವೆ. ಇಂತಹ ಅಪೂರ್ವ ಕೃತಿಗಳನ್ನು ಈ ವರ್ಷಾಚರಣೆಯಲ್ಲಿ ಪ್ರಕಟಿಸಲು ಸದಾ ಉತ್ಸುಕರಾಗಿರುವ ಗಾಂಧಿ ಭವನದ ಅಧ್ಯಕ್ಷರಾಗಿರುವ ಡಾ. ವೂಡೇ ಪಿ. ಕೃಷ್ಣ ಅವರಿಗೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಹಾಗೂ ಇದನ್ನು ಅಂದವಾಗಿ ಮುದ್ರಿಸಿದ ಕ್ರಿಯೇಟಿವ್‌ಗೀಕ್ಸ್‌ನ ಮಹೇಶ್ ಮತ್ತು ತಂಡದವರಿಗೆ ಆತ್ಮೀಯ ನಮನಗಳು.

ಇಂದಿರಾ ಕೃಷ್ಣಪ್ಪ
ಗೌ॥ ಕಾರ್ಯದರ್ಶಿ

ಮುನ್ನುಡಿ

"ಒಂದು ದೇಶವನ್ನು ನಾಶಪಡಿಸಲು ಅಲ್ಲಿ ಧರ್ಮದ ಹೆಸರಿನಲ್ಲಿ ಸಂಘರ್ಷವನ್ನು ಬಿತ್ತಬೇಕು. ಆಗ ಅಂತಹ ದೇಶ ತನ್ನಿಂದತಾನೆ ನಾಶವಾಗುತ್ತದೆ". ಎಂದು ರಷ್ಯಾದ ಮಹಾಲೇಖಕ ಟಾಲ್‌ಸ್ಟಾಯ್ ಒಂದೆಡೆ ಹೇಳಿದ್ದಾರೆ. ಈ ತಂತ್ರವನ್ನು ಬ್ರಿಟಿಷರು ನಮ್ಮ ದೇಶದ ಬಗೆಗೆ ಅನುಸರಿಸಿದರು. ಅವರು ಬಿತ್ತಿದ ಬೀಜ ಮೊಳಕೆಯೊಡೆದು ಬೆಳೆದು ಈಗ ಹೆಮ್ಮರವಾಗಿನಿಂತಿದೆ. ಸ್ವತಂತ್ರ ಭಾರತದಲ್ಲಿ ಈ ನೀತಿ ಅನುಸರಿಸಿ ಅಲ್ಪಸಂಖ್ಯಾತರ ಮೇಲೆ ದ್ವೇಷ ಕಾರುತ್ತಿರುವ ಶಕ್ತಿಗಳಿಗೆ ಇದು ದೇಶಕ್ಕೆ ಗಂಡಾಂತರ ಉಂಟು ಮಾಡಬಹುದೆನ್ನುವ ಸತ್ಯ ಗೊತ್ತಾಗುವ ವೇಳೆಗೆ ಕಾಲ ಮಿಂಚಿರಬಹುದು.

ಇವರು ನಮ್ಮ ದೇಶದ ಮಹಾಕವಿಗಳಾದ ಠಾಗೂರರು, ಕುವೆಂಪು ಅವರು ಸಹ ಜೊತೆಗೆ ದನಿಗೂಡಿಸುವಂತೆ ಬರೆದಿದ್ದಾರೆ. ರಾಷ್ಟ್ರಪ್ರೇಮದ ಹೆಸರಿನಲ್ಲಿ ಜಾತಿ ಧರ್ಮಗಳ ನೆಲೆಯಲ್ಲಿ ಮೇಲು–ಕೀಳೆಂದು ಕಿತ್ತಾಡುವುದಕ್ಕೆ ಪರ್ಯಾಯವಾಗಿ ವಿಶ್ವಮಾನವತೆಯನ್ನು ಅವರು ಪ್ರತಿಪಾದಿಸಿದ್ದಾರೆ.

"ಹಿಂಸಿಸುವುದು ನೋಯಿಸುವುದು, ಪೀಡಿಸುವುದು, ಬಲತ್ಕಾರ ಇವು ಮನುಷ್ಯರ ಗುಣಗಳಲ್ಲ; ಇವು ಮೃಗೀಯ ಗುಣಗಳು". ಎಂದು ನಂಬಿದ್ದ ಮಹಾತ್ಮ ಗಾಂಧೀಜಿ "ಎಲ್ಲಾ ಧರ್ಮಗಳ ಮೂಲ ಕ್ಷಮೆ ಮತ್ತು ದಯೆ" ಎಂದಿದ್ದಾರೆ. ಹನ್ನೆರಡನೆಯ ಶತಮಾನದ ವಚನಕಾರ ಬಸವಣ್ಣ ದಯವಿಲ್ಲದ ಧರ್ಮ ಯಾವುದಯ್ಯ? ದಯವೇ ಬೇಕು ಸಕಲ ಪ್ರಾಣಿಗಳಲ್ಲಿ" ಎಂದರು.ಇಂತಹ ಶ್ರೇಷ್ಠ ಪರಂಪರೆಯಲ್ಲಿಯೇ ಹುಟ್ಟಿ ಬಂದಿರುವ ಕೆಲವರು ಧರ್ಮದ ಮೂಲ ಗುಣಕ್ಕೆ ಸಂಚಕಾರ ತರುವಂತೆ ವರ್ತಿಸುತ್ತಿದ್ದಾರೆ.

ಪ್ರಸ್ತುತ ಡಾ. ಷಾಕಿರಾ ಖಾನಂ ಹಿಂದಿಯಿಂದ ಅನುವಾದಿಸಿರುವ ವಿಶ್ವನಾಥ್ ಪಾಂಡೆಯವರ ಗಾಂಧೀಜಿ ಮತ್ತು ಹಿಂದೂ–ಮುಸಲ್ಮಾನರ ಸೌಹಾರ್ದತೆ ಎಂಬ ಪುಸ್ತಕದಲ್ಲಿ ಪ್ರಸ್ತಾಪಿಸಲಾಗಿರುವ ಸಂಗತಿಗಳನ್ನು ಗಾಂಧೀಜಿ ಅವರ ಬದುಕು ಮತ್ತು ಸಿದ್ಧಾಂತಗಳ ಹಿನ್ನೆಲೆಯಲ್ಲಿ ಪರಿಣಾಮಕಾರಿಯಾಗಿ ನಿರೂಪಿಸಲಾಗಿದೆ.

ವಿಶ್ವಕವಿ ರವೀಂದ್ರನಾಥ ಠಾಗೂರರ ಕವಿತೆಯ ಉಲ್ಲೇಖದೊಂದಿಗೆ ಆರಂಭವಾಗುವ ಈ ಕೃತಿ ಗಾಂಧೀಜಿ ಅವರ ಸರ್ವಧರ್ಮ ಸಮನ್ವಯದತ್ತ

ಪಕ್ಷಿನೋಟ ಬೀರಿ ಭಾರತೀಯ ಹಾಗೂ ಜಗತ್ತಿನ ಧಾರ್ಮಿಕ ಪರಂಪರೆಗಳಲ್ಲಿ ಧರ್ಮವನ್ನು ಹೇಗೆ ವ್ಯಾಖ್ಯಾನಿಸಲಾಗಿದೆ ಎಂಬುದನ್ನು ಸಮಗ್ರವಾಗಿ ಸಮೀಕ್ಷಿಸುತ್ತದೆ. ಇದು ಪ್ರಥಮ ಅಧ್ಯಾಯ "ಗಾಂಧೀಜಿ ಮತ್ತು ಹಿಂದೂ-ಮುಸ್ಲಿಂ ಸೌಹಾರ್ದತೆ" ಎಂಬುದು ಈ ಪುಸ್ತಕದ ಎರಡನೆಯ ಅಧ್ಯಾಯ. ಅಲ್ಲಿ ಗಾಂಧೀಜಿ ಅವರ ರಚನಾತ್ಮಕ ಕಾರ್ಯಕ್ರಮಗಳ ಬಗ್ಗೆ ಪ್ರಸ್ತಾಪಿಸುತ್ತಾ ಕೋಮು ಸೌಹಾರ್ದತೆಗೆ ಅವರು ನೀಡಿದ ಪ್ರಥಮ ಆದ್ಯತೆಯನ್ನು ಒತ್ತಿ ಹೇಳಲಾಗಿದೆ. ಅದರಲ್ಲಿಯೂ ಮುಸ್ಲಿಂ ಐಕ್ಯತೆ ಹಾಗೂ ಅಸ್ಪೃಶ್ಯತಾ ನಿವಾರಣೆ ಗಾಂಧೀಜಿಯ ಹೃದಯಕ್ಕೆ ಹತ್ತಿರವಾದ ಸಂಗತಿಗಳು. "ಭಾರತ ಸ್ವತಂತ್ರವಾದ ಬಳಿಕ ಬಹುಸಂಖ್ಯಾತ ಸಂಪ್ರದಾಯದ ಹಿಂದೂಗಳ ರಾಷ್ಟ್ರವಾಗುತ್ತದೆ, ಎಂದು ಹೇಳುವುದಕ್ಕಿಂತ ದೊಡ್ಡ ತಪ್ಪು ಬೇರೊಂದಿಲ್ಲ. ಒಂದು ವೇಳೆ ಹೀಗೇನಾದರೂ ಆದರೆ ನಾನು ಒಬ್ಬಂಟಿಯಾದರೂ ಸರಿಯೇ ಇಂತಹ ಸ್ವಾತಂತ್ರ್ಯವನ್ನು ಧಿಕ್ಕರಿಸಿ ಅವರ ವಿರುದ್ಧ ಹೋರಾಡುತ್ತೇನೆ" ಎಂದು ಗಾಂಧೀಜಿ ಸ್ವಾತಂತ್ರ್ಯ ಪೂರ್ವ ಕಾಲದಲ್ಲಿಯೇ ಘೋಷಿಸಿದರು. "ಹಿಂದುಸ್ತಾನ ಎಷ್ಟು ಹಿಂದುಗಳದ್ದೋ ಅಷ್ಟೇ ಮುಸ್ಲಿಮರದ್ದು ಪಾರ್ಸಿ, ಯಹೂದಿ-ಕ್ರೈಸ್ತ ಮತ್ತು ಹಿಂದೂಗಳಲ್ಲದವರಿಗೂ ಸೇರಿದ್ದು....ಜಾತಿ, ಧರ್ಮ ವೈಯಕ್ತಿಕ ವಿಚಾರ ರಾಜ್ಯಾಡಳಿತದಲ್ಲಿ ಅದಕ್ಕೆ ಯಾವುದೇ ಮಹತ್ವವಿಲ್ಲ" ಇದು ಗಾಂಧೀಜಿಯವರ ಸ್ಪಷ್ಟ ನಂಬಿಕೆಯಾಗಿತ್ತು.

ದೇವರಲ್ಲಿ ಅಗಾಧವಾದ ಶ್ರದ್ಧೆ ಇಟ್ಟುಕೊಂಡಿದ್ದ ಗಾಂಧೀಜಿ ತಾನೊಬ್ಬ ಸನಾತನ ಹಿಂದೂ ಎಂಬುದಾಗಿ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಆದರೆ ಅದು ಸಂಕುಚಿತ ದೃಷ್ಟಿಯ ಹಿಂದುತ್ವವಾಗಿರಲಿಲ್ಲ. ನನ್ನ ಮನೆ ಎತ್ತರವಾದ ಗೋಡೆಗಳಿಂದ ಸುತ್ತುವರೆದು ನಾಲ್ಕು ಕಡೆಯ ಕಿಟಕಿಗಳು ಮುಚ್ಚಿರಲಿ ಎಂದು ನಾನು ಬಯಸುವುದಿಲ್ಲ ನನ್ನ ಮನೆಯ ನಾಲ್ಕು ಕಡೆ ಎಲ್ಲಾ ದೇಶಗಳ ಧರ್ಮಗಳ ಸಂಸ್ಕೃತಿಯ ಶುದ್ಧ ಗಾಳಿ ಸ್ವತಂತ್ರವಾಗಿ ಬೀಸುತ್ತಿರಲಿ ಎಂದು ಬಯಸುತ್ತೇನೆ". ಇದು ಗಾಂಧೀಜಿಯ ಹಿಂದುತ್ವದ ಕಲ್ಪನೆಯಾಗಿತ್ತು. ಮುಸ್ಲಿಂ, ಜೈನ ಹಾಗೂ ಕ್ರೈಸ್ತ ಧರ್ಮಗಳು ಗಾಂಧೀಜಿ ಅವರ ಅಹಿಂಸಾ ತತ್ವದ ಮೇಲೆ ಪ್ರಭಾವ ಬೀರಿವೆ ಎಂಬಂತಿದ್ದರೂ ಅವರ ಪ್ರಕಾರ ಎಲ್ಲಾ ಧರ್ಮಗಳ ಸಾರಾಂಶ ರೂಪದಲ್ಲಿ ಒಂದೇ ಆಗಿದ್ದವು. ಎಲ್ಲಾ ಧರ್ಮಗಳ ಗ್ರಂಥಗಳನ್ನು ನಂಬಿಕೆ ಆಚರಣೆಗಳನ್ನು ಅವರು ಆಳವಾಗಿ ಅಧ್ಯಯನಮಾಡಿ ತಿಳಿದುಕೊಂಡಿದ್ದರು. ಬಳಿಕವೇ ಅವರು ಎಲ್ಲ ಧರ್ಮಗಳ ಮೂಲ ಸ್ವರೂಪ ಒಂದು ಎಂದು ಸಾರಿ ಹೇಳಿದರು. "ನಾನೊಬ್ಬ ಸನಾತನ ಹಿಂದು ಆದ್ದರಿಂದ ನಾನು ಮುಸಲ್ಮಾನನೂ ಹೌದು, ಸಿಕ್ಕನೂ, ಹೌದು ಪಾರ್ಸಿ, ಕ್ರೈಸ್ತ ಯಹೂದಿಯೂ ಆಗಿದ್ದೇನೆ" ಎಂದು ಮತ್ತೆ ಮತ್ತೆ ಹೇಳುತ್ತಿದ್ದರು."ಹಿಂದೂ ಧರ್ಮವನ್ನು ಯಾರೂ ನಾಶ ಮಾಡಲು ಸಾಧ್ಯವಿಲ್ಲ ಅವನ್ನು

ನಾಶಮಾಡಿದರೆ ಹಿಂದೂಗಳೇ ಮಾಡಬೇಕು. ಹಾಗೆಯೇ ಇಸ್ಲಾಂ ನಾಶವಾದರೆ ಅದಕ್ಕೆ ಮುಸಲ್ಮಾನರೇ ಹೊಣೆ ಹೊರಬೇಕು" ಎಂಬುದಾಗಿಯೂ ಅವರು ಹೇಳಿದ್ದಾರೆ.

ಜಾತಿ-ಧರ್ಮಗಳ ಪ್ರತ್ಯೇಕತಾವಾದವನ್ನು ಪ್ರಚಾರ ಮಾಡುತ್ತಿದ್ದ ಮತಾಂಧರಿಗೆ ಗಾಂಧೀಜಿ ಅವರ ವಿವೇಕವಾಣಿಯನ್ನು ಕೇಳಿಸಿಕೊಳ್ಳುವ ತಾಳ್ಮೆ ಇರಲಿಲ್ಲ. ಗಾಂಧೀಜಿ, ಅವರ ಹಾದಿಯಲ್ಲಿ ಬಹುದೊಡ್ಡ ಅಡ್ಡಿ, ಎಂಬಂತೆ ಕಂಡು ಬಂದು ಗಾಂಧೀಜಿ ಮೇಲೆ ಸೇಡು ತೀರಿಸಿಕೊಳ್ಳಲು ಹವಣಿಸುತ್ತಿದ್ದರು. ಸ್ವಾತಂತ್ರ್ಯ ಸಂಭ್ರಮದ ಜೊತೆಜೊತೆಗೆ ಕೋಮುದ್ವೇಷ ದಂಗೆಗಳು ದೇಶದಲ್ಲೆಡೆ ಭುಗಿಲೆದ್ದು ತಲ್ಲಣಗೊಳಿಸಿದವು. ಗಾಂಧೀಜಿ ಸಾರಿದ ಕೋಮು ಸಾಮರಸ್ಯ ಒಪ್ಪದವರನ್ನು ಮತ್ತು ಅವರ ಸಿದ್ಧಾಂತ ಕುರಿತಾದ ಗ್ರಂಥದಲ್ಲಿ ಗಾಂಧೀಜಿ ಹತ್ಯೆಯ ಬಗ್ಗೆ ಒಂದು ಚಿಕ್ಕ ಅಧ್ಯಾಯವಿದೆ. ಅಂದಿನ ಚರಿತ್ರೆಯ ಒಂದು ಕಿರುನೋಟ ಅಲ್ಲಿ ಸಿಗುತ್ತದೆ.

ಸರ್ವ ಧರ್ಮ ಸಾಮರಸ್ಯವನ್ನು ಪ್ರತಿಪಾದಿಸಿದ ಗಾಂಧೀಜಿ ಸ್ವಾತಂತ್ರ್ಯ ಬಂದ ಬಳಿಕ ಬಹುಬೇಗ ಹಿಂದೂ ಮತಾಂಧನ ಗುಂಡಿಗೆ ಬಲಿಯಾಗಿ ಹುತಾತ್ಮರಾದದ್ದು ಕೇವಲ ಆಕಸ್ಮಿಕವೆಂದು ಪರಿಗಣಿಸಲಾಗುವುದಿಲ್ಲ. ಇದಕ್ಕೆ ಮತಾಂಧ ಶಕ್ತಿಗಳು ವೇದಿಕೆ ಕಲ್ಪಿಸಿದ್ದರು.ಹಿಂದೂ-ಮುಸ್ಲಿಂ ಎರಡು ಧರ್ಮಗಳ ಮತಾಂಧರು ಪರಸ್ಪರ ದೇಶದ ವಿಷಯವನ್ನೇ ಕಕ್ಕುತ್ತಿದ್ದರು. ಎರಡೂ ಕಡೆ ಗಾಂಧೀಜಿ ಅವರ ತತ್ವ ಸಿದ್ಧಾಂತವನ್ನು ಒಪ್ಪಿದವರು ಇದ್ದರು. ಗಾಂಧೀಜಿ ಎಲ್ಲರನ್ನೂ ಮತ್ತು ಮತಾಂಧರನ್ನು ಪ್ರೀತಿಯಿಂದ ಒಲಿಸಿಕೊಳ್ಳಲು ಪ್ರಯತ್ನಿಸಿದರು.

ಆದರೇನು? ಕೆರಳಿದ ನಾಗರ ಹಾವು ಕಚ್ಚಿದ ಕೂಡಲೇ ಅದರ ವಿಷ ಗಾಯಕ್ಕೆ ಸೇರಿ ನೆತ್ತಿಗೇರುತ್ತದೆ. ಮಹಾನ್ ಸಂತನಾದರೂ ಹಾವಿನ ವಿಷಕ್ಕೆ ಬಲಿಯಾಗಲೇ ಬೇಕು. ಇದು ಚರಿತ್ರೆಯಲ್ಲಿ ಮತ್ತೆ ಮತ್ತೆ ಪುನರಾವರ್ತನೆಯಾಗುವುದು ಘೋರ ದುರಂತ. ಗಾಂಧಿ ಹತ್ಯೆಗೆ ಪ್ರತಿಕ್ರಿಯಿಸಿದ ಮಹಾಕವಿ ಕುವೆಂಪು ಪ್ರತಿಕ್ರಿಯಿಸಿದ್ದಾರೆ:

ಮತ್ತೆ ಇದೇನು?

ನಿನಗೆ ಎಂದೆಂದಿಗೂ ಇದೇ ಗತಿಯೇನು?

ಏಸು ಕ್ರಿಸ್ತ, ಸಾಕ್ರೆಟಿಸ್, ಬಸವಣ್ಣ – ಹೀಗೆ ಚರಿತ್ರೆಯಲ್ಲಿ ಸೇಡು ದ್ವೇಷಗಳಿಗೆ ಬಲಿಯಾದ ಮಹಾಪುರುಷರ ಸಾಲು-ಸಾಲು ದಾಖಲಾಗಿದೆ. ಅವರ ಸಾಲಿನಲ್ಲಿ ಗಾಂಧೀಜಿ ಸಹ ಸೇರ್ಪಡೆಯಾದರು ಎಂಬುದು ಕುವೆಂಪು ಕವಿತೆಯ ಇಂಗಿತವಾಗಿತ್ತು. ಮನುಷ್ಯ ಕುಲದ ದುರಂತವನ್ನೇ ಒಟ್ಟಾಗಿ ಧ್ವನಿಸುತ್ತಿದೆ. ಗಾಂಧೀಜಿ ಅವರ

ಹತ್ಯೆಯೊಂದಿಗೆ ಮತಾಂಧ ಶಕ್ತಿಗಳು ತಾತ್ಕಾಲಿಕವಾಗಿ ಹಿಮ್ಮೆಟ್ಟಿದ್ದವು. ಮುಂದೆ ಭಾರತದ ಸಂವಿಧಾನ ಸೆಕ್ಯುಲರ್ ತತ್ವವನ್ನು ಎತ್ತಿಹಿಡಿಯಿತು. ಚಿಕ್ಕಪುಟ್ಟ ಮತೀಯ ಗಲಭೆಗಳ ನಡುವೆಯೂ ಭಾರತೀಯ ಪ್ರಜಾಪ್ರಭುತ್ವ ಸುಭದ್ರವಾಗಿಯೇ ಬೇರೂರಿತು. ಆದರೆ ಇತ್ತೀಚಿನ ವರ್ಷಗಳಲ್ಲಿ ಮಲಗಿದ್ದ ನಾಗರಹಾವು ಮತ್ತೆ ಬುಸುಗುಡುತ್ತಿದೆ. ಹೆಡೆಯೆತ್ತಿ ಫೂತ್ಕರಿಸುತ್ತಿದೆ. ಸೆಕ್ಯುಲರ್ ಸಂವಿಧಾನಕ್ಕೆ ಔಪಚಾರಿಕ ಗೌರವ ಸಲ್ಲಿಸುತ್ತಲೇ ಮತೀಯ ಶಕ್ತಿಗಳು ತಮ್ಮ ಕಾರ್ಯತಂತ್ರಗಳನ್ನು ಜಾರಿಗೊಳಿಸುತ್ತಿವೆ. ಅಲ್ಪಸಂಖ್ಯಾತರ ಪ್ರಾರ್ಥನಾ ಸ್ಥಳಗಳ ಮೇಲೆ ದಾಳಿಯಾಗುತ್ತಿದೆ,ಬಲಾತ್ಕಾರ, ಮತಾಂತರದ ಸುಳ್ಳು ಆರೋಪ ಹೊರಿಸಿ ಅವರನ್ನು ಬೆದರಿಸಲಾಗುತ್ತಿದೆ. ಅನ್ಯ ಕೋಮಿನ ಮಹಿಳೆಯರ ಮೇಲೆ ಹೇಸಿಗೆ ಹುಟ್ಟಿಸುವಂತಹ ಅಪಪ್ರಚಾರ ಎಗ್ಗಿಲ್ಲದೆ ನಡೆಯುತ್ತಿದೆ. ಆಹಾರದ ಹಕ್ಕನ್ನೇ ಪ್ರಶ್ನಿಸಿರುವ ಮೂಲಕ ಮಾಂಸಾಹಾರಿಗಳನ್ನು ಕೀಳರಿಮೆಗೆ ತಳ್ಳಲಾಗುತ್ತಿದೆ. ಮಾಂಸಾಹಾರಿ ದಲಿತರು, ಹಿಂದುಳಿದವರು ದೇಶದ ಬಹುಸಂಖ್ಯಾತರು ಮತ್ತೆ ಮತ್ತೆ ಅಪಮಾನಕ್ಕೆ ತುತ್ತಾಗುತ್ತಿದ್ದಾರೆ. ಇಂತಹ ಆತಂಕದ ಕಾಲದಲ್ಲಿ ಗಾಂಧೀಜಿ ಅವರ ನನೆಪು ನಮಗೆ ಚೇತೋಹಾರಿ ಎನ್ನಬಹುದಾಗಿದೆ.

"ಗಾಂಧೀಜಿ ಮತ್ತು ಹಿಂದೂ ಮುಸ್ಲಿಂ ಸೌಹಾರ್ದತೆ" ಎಂಬ ಪುಸ್ತಕದ ಪ್ರಕಟಣೆ ಈಗ ಖಂಡಿತ ಪ್ರಸ್ತುತವಾಗಿದೆ. ಈ ಕೃತಿಯ ಅನುವಾದ ಮಾಡಿರುವ ಡಾ. ಷಾಕಿರಾ ಖಾನಂ ಸೈದ್ಧಾಂತಿಕವಾಗಿ ಸೆಕ್ಯುಲರ್ ತತ್ವಕ್ಕೆ ಬದ್ಧರಾದವರು. ತಮ್ಮ ಮುಸ್ಲಿಂ ಅಸ್ಮಿತೆಯ ಬಗೆಗೂ ಅವರಿಗೆ ಕಾಳಜಿ ಇದೆ. ಧಾರ್ಮಿಕ ಸಾಮರಸ್ಯವನ್ನು ಎತ್ತಿಹಿಡಿದಿರುವ ಇನ್ನು ಕೆಲವು ಪುಸ್ತಕಗಳನ್ನು ಈಗಾಗಲೇ ಅವರು ಅನುವಾದಿಸಿ ಪ್ರಕಟಿಸಿದ್ದಾರೆ. ಸ್ವತಹ ಕವಿ ಹಾಗೂ ಪ್ರಾಧ್ಯಾಪಕರಾಗಿರುವ ಅವರಿಂದ ಈ ಬಗೆಯ ಇನ್ನೂ ಕೆಲವು ಗ್ರಂಥಗಳನ್ನು ನಿರೀಕ್ಷಿಸಬಹುದು. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಮೂಲಕ ಗಾಂಧಿ ಸಾಹಿತ್ಯ ಪ್ರಚಾರ ಪ್ರಕಟಣೆ ನಿರಂತರವಾಗಿ ನಡೆದು ಬಂದಿದೆ. ಹಲವಾರು ಶ್ರೇಷ್ಠ ಗ್ರಂಥಗಳು ಪ್ರಕಟವಾಗಿವೆ. ಈ ಮಾಲೆಗೆ ಪ್ರಸ್ತುತ ಗ್ರಂಥ ಒಂದು ಅಪೂರ್ವ ಸೇರ್ಪಡೆಯಾಗಿದ್ದು ಇದಕ್ಕಾಗಿ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರು, ಕಾರ್ಯದರ್ಶಿಗಳು ಅಭಿನಂದನಾರ್ಹರಾಗಿದ್ದಾರೆ. ಈ ಪುಸ್ತಕದ ಮೂಲ ಲೇಖಕ ವಿಶ್ವನಾಥ್ ಪಾಂಡೆ ಅವರು ಇಲ್ಲಿ ಸ್ಮರಣಾರ್ಹರಾಗಿದ್ದಾರೆ.

ಕೆ. ಮರುಳಸಿದ್ದಪ್ಪ

12, ಜನವರಿ 2022
ಬೆಂಗಳೂರು

ಅನುವಾದಕರ ಮಾತು

ಗಾಂಧೀಜಿ ಅವರ ಜೀವನ ಒಂದು ತೆರೆದ ಪುಸ್ತಕ. ದಕ್ಷಿಣ ಆಫ್ರಿಕಾದಲ್ಲಿದ್ದ ಅಬ್ದುಲ್ಲಾ ಸೇಠ್ ಎಂಬುವರು ತಮ್ಮ ಮೊಕದ್ದಮೆಯ ಪರವಾಗಿ ವಕಾಲತ್ತು ವಹಿಸಬೇಕೆಂದು ಕೋರಿ ಬರೆದ ಆಹ್ವಾನವನ್ನು ಸ್ವೀಕರಿಸಿ ಗಾಂಧೀಜಿ ಸಿವಿಲ್ ಕೋರ್ಟಿನಲ್ಲಿ ಹಾಜರಾಗಲು 1893ರಲ್ಲಿ ಆಫ್ರಿಕಾಗೆ ಹೋದರು. ಅಲ್ಲಿ ಹೋದ ನಂತರ ಅಲ್ಲಿ ಬೆರೆತು ಹೋದರೂ ಸಹ 1915ರಲ್ಲಿ ಗಾಂಧೀಜಿ ಭಾರತಕ್ಕೆ ಮರಳಿ ಬಂದು ಅಂದಿನಿಂದ ಭಾರತ ಅವರ ಏಕೈಕ "ಕಕ್ಷಿಗಾರ" ಭಾರತವಾಯಿತು. ಅಂದಿನಿಂದಲೇ ಅವರ ಅಂತರ್ವಾಣಿ, ಆತ್ಮಶಕ್ತಿ ಅವರಿಗೆ ಧರ್ಮಸೂಚಿ ನೀತಿಸೂಚಿಯಾಯಿತು.

ಗಾಂಧೀಜಿ ತನ್ನ ವಿಶಿಷ್ಟ ಆತ್ಮಬಲದಿಂದ ಇಡೀ ಜಗತ್ತಿನ ಗಮನವನ್ನು ಸೆಳೆದ ಅಸಾಧಾರಣ ವ್ಯಕ್ತಿ. ನುಡಿದಂತೆ ನಡೆದ, ನಡೆದಂತೆ ನುಡಿದ ಅಪ್ರತಿಮ ಸಾಹಸಿ. ಸತ್ಯ ಅಹಿಂಸೆಯ ದಾರಿಯಲ್ಲಿ ಆತ್ಮಸಾಕ್ಷಾತ್ಕಾರವನ್ನು ಪಡೆದ ಮಹಾನ್ ಸಾಧಕ. ಬ್ರಿಟಿಷರ ದಾಸ್ಯ ಸಂಕೋಲೆಯಿಂದ ಭಾರತವನ್ನು ಬಿಡುಗಡೆ ಮಾಡಿದ ಶ್ರೇಯಸ್ಸು ಗಾಂಧೀಜಿಗೆ ಸಲ್ಲುತ್ತದೆ.ಅವರು ಅಹಿಂಸೆ ಮತ್ತು ಸತ್ಯಾಗ್ರಹದ ಮೂಲಕ ಜನಮನವನ್ನು ಎಚ್ಚರಗೊಳಿಸಿ ಶಾಂತಿ ಸಂಯಮದ ಮೂಲಕ ನಾಡಿನ ಅಸಂಖ್ಯಾತ ಮಂದಿ ರಕ್ತರಹಿತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕುವಂತೆ ಪ್ರೇರೇಪಿಸಿದರು. ಅಂತೆಯೇ ಈ ಹೋರಾಟದಲ್ಲಿ ವಿಜಯಗಳಿಸಿದ ಕೀರ್ತಿ ಗಾಂಧೀಜಿ ಅವರಿಗೆ ಮೀಸಲಾದದ್ದು. ಕರ್ತವ್ಯ ನಿಷ್ಠೆ, ತ್ಯಾಗಬುದ್ಧಿ, ಸೇವಾ ಮನೋಭಾವ, ಸಮಯ ಪಾಲನೆ, ನಿಷ್ಕಾಮ ದುಡಿಮೆ, ಸಾಧಿಸುವ ಛಲ ಮತ್ತು ಶುದ್ಧ ಚಾರಿತ್ರ್ಯ ಮುಂತಾದ ಮೌಲ್ಯಗಳಿಗೆ ಇನ್ನೊಂದು ಹೆಸರು ಗಾಂಧೀಜಿ. ಇಂತಹ ಅಸಾಧಾರಣ ವ್ಯಕ್ತಿ ನಮ್ಮ ದೇಶದಲ್ಲಿ ಇದ್ದದ್ದು ನಮ್ಮೆಲ್ಲರ ಸೌಭಾಗ್ಯ. ಲೋಕೋತ್ತರ ಮಹನೀಯರನ್ನು ಕುರಿತು ವಿಜ್ಞಾನಿ ಆಲ್ಬರ್ಟ್ ಐನ್ ಸ್ಟೀನ್ ಹೇಳಿದ ಮಾತು ಅಕ್ಷರಶಃ ಸತ್ಯ". ಇಂತಹ ರಕ್ತಮಾಂಸ ತುಂಬಿದ ಮನುಷ್ಯನೊಬ್ಬ ಈ ಭೂಮಿಯ ಮೇಲೆ ನಡೆದಾಡಿದ ಎಂಬುದನ್ನು ಮುಂದಿನ ಪೀಳಿಗೆಗಳು ನಂಬದೇ ಹೋಗಬಹುದೋ ಏನೋ".

ಆದರೆ ಇಂದು ಗಾಂಧಿ ಹುಟ್ಟಿದ ಈ ನಾಡು ಜಾತಿ–ಮತ, ಅಪನಂಬಿಕೆ, ಸ್ವಾರ್ಥ, ವಿಛಿದ್ರಕಾರಕ ಶಕ್ತಿಗಳಿಂದ ಶಿಥಿಲವಾಗಿರುವುದು ನಿಜವಾಗಿ ದುರದೃಷ್ಟಕರ. ಇಂತಹ ಕಲುಷಿತ ವಾತಾವರಣದಲ್ಲಿ ಗಾಂಧೀಜಿಯ ಉದಾತ್ತ ಚಿಂತನೆಗಳ ಅಧ್ಯಯನ ನಮಗೆ

ದಾರಿ ದೀಪವಾಗಬಲ್ಲದು. ಸರಿಯಾದ ಮಾರ್ಗದಲ್ಲಿ ಕೈ ಹಿಡಿದು ನಡೆಸಬಲ್ಲದು. ಮನುಷ್ಯ–ಮನುಷ್ಯನ ಸಂಬಂಧವನ್ನು ಉತ್ತಮಪಡಿಸುವ ದಿಸೆಯಲ್ಲಿ ಅದು ಸಂಜೀವಿನಿ ಆಗಬಲ್ಲದು.

ಈ ಉದ್ದೇಶವನ್ನು ಇಟ್ಟುಕೊಂಡು ನಾನು ವಿಶ್ವಂಬರನಾಥ್ ಪಾಂಡೆ ಅವರು ಬರೆದಿರುವ ಪುಸ್ತಕವನ್ನು ಕನ್ನಡಕ್ಕೆ ಅನುವಾದ ಮಾಡಿ ಕನ್ನಡ ನಾಡಿನ ಮಾನವೀಯ ನಡೆ ಉಳಿಯಲಿ ಎಂದು ಆಶಿಸುತ್ತೇನೆ. ಈ ಪುಸ್ತಕವನ್ನು ಓದಿ ತಮ್ಮ ಹುಟ್ಟು ಹಬ್ಬದಂದು ಮುನ್ನುಡಿ ಬರೆದು ಕೊಟ್ಟು ನನ್ನನ್ನು ಪ್ರೋತ್ಸಾಹಿಸಿದ ಗುರುಗಳಾದ ಡಾ. ಕೆ. ಮರುಳಸಿದ್ದಪ್ಪ ಅವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು. ಗಾಂಧಿ ಭವನದ ಗೌರವ ಕಾರ್ಯದರ್ಶಿಗಳಾದ ಇಂದಿರಾ ಕೃಷ್ಣಪ್ಪ ಅವರು ಈ ಅನುವಾದ ಕೃತಿಯನ್ನು ಬರೆಯಲು ಒತ್ತಾಸೆಯಾಗಿ ನಿಂತರು. ಅವರ ಪ್ರೇರಣೆ, ಈ ಪುಸ್ತಕ ಬರೆಯಲು ಸ್ಫೂರ್ತಿಯಾಯಿತು. ಅವರಿಗೆ ನನ್ನ ಕೃತಜ್ಞತೆಗಳು. ಈ ಪುಸ್ತಕವನ್ನು ಅನುವಾದ ಮಾಡಲು ಅನುಮತಿ ಕೊಟ್ಟ ಪಾಟ್ನಾದ ಖುದಾ ಬಕ್ಷ್ ಓರಿಯೆಂಟಲ್ ಪಬ್ಲಿಕ್ ಲೈಬ್ರರಿಯ ಅಧ್ಯಕ್ಷರಾದ ಷಾಯಿಸ್ತಾ ಬೇದಾರ್ ಅವರಿಗೂ ನನ್ನ ಧನ್ಯವಾದಗಳು. ಈ ಕೃತಿಯನ್ನು ಹೊರತರಲು ಗಾಂಧಿ ಭವನದ ಅಧ್ಯಕ್ಷರು ಪ್ರೋತ್ಸಾಹದಾಯಕ ನುಡಿಗಳನ್ನಾಡುತ್ತಾ, "ವರ್ತಮಾನದ ಕೋಮು ಸಂಘರ್ಷಕ್ಕೆ, ಕೋಮು ಸೌಹಾರ್ದತೆಯನ್ನು ಬಿತ್ತುವ ಕೃತಿಯಾಗಿದೆ" ಎಂದು ಹೇಳಿರುವುದು ನನಗೆ ಸಂತಸ ತಂದಿದೆ.

ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಕ್ರಿಯೇಟಿವ್‌ಗೀಕ್ಸ್‌ನ ಶ್ರೀ ಮಹೇಶ್ ಮತ್ತು ಬಳಗದವರಿಗೆ ಅವರಿಗೆ ನನ್ನ ಕೃತಜ್ಞತೆಗಳನ್ನು ತಿಳಿಸುತ್ತೇನೆ.

ಡಾ. ಷಾಕಿರ ಖಾನಂ

09.01.2022

ಮೂಲ ಕೃತಿ ಮರುಮುದ್ರಣದ ನಿರ್ದೇಶಕರ ನುಡಿ

ಭಾರತದಲ್ಲಿ ಕೋಮುಸೌಹಾರ್ದತೆಯ ಪರಂಪರೆಯನ್ನು ಜೀವಂತವಾಗಿಡಲು ಮತ್ತು ಸೊರಗಿದ್ದ ಮಾನವತೆಯನ್ನು ಹಸಿರಾಗಿಸಲು ವಿಶ್ವಂಬರನಾಥ ಪಾಂಡೆಯವರ ಪರಿಶ್ರಮ ಅವರಿಗೆ ಅವರೇ ಸಾಟಿ ಎನ್ನುವಂತಿದೆ. ಭವಿಷ್ಯದಲ್ಲಿ ಇಂತಹ ಪರಿಶ್ರಮ ಸಿಗುವುದು ಬಹಳ ವಿರಳಾತೀವಿರಳ. ಅವರ ಇಡೀ ಜೀವನವನ್ನು ದೇಶಸೇವೆ, ಹಿಂದೂ-ಮುಸಲ್ಮಾನರ ಒಗ್ಗಟ್ಟು ಮತ್ತು ಗಾಂಧೀಜಿ ಅವರ ವಿಚಾರಗಳ ಪ್ರಚಾರದಲ್ಲಿಯೇ ಸವೆಸಿದರು. ದೇಶಕ್ಕೆ ಹಿತವಾದುದೆಲ್ಲವನ್ನೂ ಅಂದರೆ ಭಾಷೆ, ಬರವಣಿಗೆ ಮತ್ತು ಕರ್ತವ್ಯದಿಂದ ಹೇಳಬೇಕೆಂಬುದೇ ಅವರ ಧೃಷ್ಟಿಕೋನವಾಗಿತ್ತು.

ಗಂಗಾ-ಜಮುನೆಯರ ಸಭ್ಯತೆ ಮತ್ತು ದೇಶದ ಗೌರವದ ರಕ್ಷಕವಾದ ಸೌಹಾರ್ದತೆಯ ದೀಪವನ್ನು ಹಚ್ಚಿ ಬೆಳಗಿ, ಆ ಬೆಳಕಿನಿಂದ ಘೋರ ಕತ್ತಲಿನಲ್ಲಿ ಮಂದವಾದ ಪ್ರಕಾಶವನ್ನು ಬೀರಿದ. ನಾಲ್ಕೂ ಕಡೆಗಳ ಆಸೆಭರಿತ ಕಣ್ಣುಗಳು ಇವರ ಮೇಲೆ ಇದ್ದವು. ಈ ದೀಪ ಆರುವ ಮೊದಲು ತನ್ನ ಜ್ಯೋತಿಯಿಂದ ಅನೇಕ ದೀಪಗಳನ್ನು ಬೆಳಗಿಸಿತು.

ಶ್ರೀಯುತ ವಿಶ್ವಂಭರನಾಥ ಪಾಂಡೆ ಅವರ ಈ ಪುಸ್ತಕವು ಮೊದಲ ಬಾರಿಗೆ ಗಾಂಧೀಜಿ ಅವರ ಶತಮಾನೋತ್ಸವದಂದು ಸಾಂಪ್ರದಾಯಿಕ ವಿರೋಧಿ ಕಮಿಟಿ, ದೆಹಲಿ ಯುವತಿಯಿಂದ ಮುನ್ನೆಲೆಗೆ ಬಂದಿತು. ಇದನ್ನು ಮರುಮುದ್ರಿಸಲು ಶ್ರೀಯುತ ಸುಭದ್ರಾ ಜೋಶಿ ಅವರು ನಮಗೆ ಅನುಮತಿ ನೀಡಿದರು ಇದಕ್ಕೆ ನಾವು ಋಣಿಯಾಗಿದ್ದೇವೆ.

ಎಂ.ಆರ್. ಬೇದಾರ್
ನಿರ್ದೇಶಕರು
ಖುದಾ ಬಕ್ಷ ಓರಿಯಂಟಲ್ ಲೈಬ್ರರಿ, ಪಾಟ್ನಾ



ಸುಖ-ಸಂತೋಷಗಳಿಲ್ಲದೇ ಮಾಡಿದ ಸೇವೆಯು
ಸೇವಕನಿಗೂ ಸೇವ್ಯನಿಗೂ ಉಪಯುಕ್ತವಿರುವದಿಲ್ಲ.
ಆದರೆ ಸಂತೋಷದಿಂದ ಸಲ್ಲಿಸಿದ ಸೇವೆಯಲ್ಲಿ ಎಲ್ಲವೂ ಅಡಗಿರುತ್ತದೆ,
ಉಪಯುಕ್ತವೆನಿಸುತ್ತದೆ. ಅದರೆದುರು ಸ್ಥಾನಮಾನಗಳು, ಸುಖವು
ಮಹತ್ವದ್ದೆನಿಸುವುದಿಲ್ಲ.

– ಮಹಾತ್ಮ ಗಾಂಧೀಜಿ

ಮೂಲ ಕೃತಿಯ ಮುನ್ನುಡಿ

ಶ್ರೀ ವಿಶ್ವಂಬರನಾಥ ಈ ಪುಸ್ತಕವನ್ನು ಬರೆದಿದ್ದಾರೆ. ಈ ಪುಸ್ತಕ ತನ್ನಲ್ಲಿ ಪರಿಪೂರ್ಣವೇನಲ್ಲ. ಆದರೂ ಗಾಂಧೀಜಿಯ ಬಗ್ಗೆ ಬರೆದಿರುವ ಭಾವಪೂರ್ಣ ಗ್ರಂಥದ ಮುನ್ನುಡಿಯ ಒಂದು ಅಂಶವಷ್ಟೇ. ಈ ಗ್ರಂಥವನ್ನು ಇದೇ ಗಾಂಧಿ ಶತಮಾನೋತ್ಸವದಲ್ಲಿ ಪ್ರಕಟಿಸುವ ಯೋಜನೆ ಇದೆ. ಗ್ರಂಥದ ಶೀರ್ಷಿಕೆ "ಹೌದು ನೆನಪಾಗುತ್ತಾನೆ ಆ ಒಬ್ಬ ಮಹಾತ್ಮ."

ಸಹೋದರ ವಿಶ್ವಂಬರನಾಥ್ ನಮ್ಮ ಆಗ್ರಹಕ್ಕೆ ಮಣಿದು 30 ಜನವರಿ 1999ರಂದು ಗಾಂಧೀಜಿ ಪುಣ್ಯತಿಥಿಯ ಸಂದರ್ಭದಲ್ಲಿ ಈ ಅಂಶವನ್ನು ಬೇರೆ ಪುಸ್ತಕದ ರೂಪದಲ್ಲಿ ಪ್ರಕಟಿಸಲು ಅನುಮತಿ ನೀಡಿದರು. ಇದಕ್ಕೆ 'ಸಾಂಪ್ರದಾಯಿಕ ವಿರೋಧಿ ಕಮಿಟಿ' ಋಣಿಯಾಗಿದೆ. ಗಾಂಧೀಜಿಯ ಬಲಿದಾನದ ದಿನಕ್ಕೆ ಇದಕ್ಕಿಂತ ಪವಿತ್ರವಾದ ಶ್ರದ್ಧಾಂಜಲಿ ಮತ್ತೊಂದಿಲ್ಲ. ಸಹೋದರ ವಿಶ್ವಂಬರನಾಥ್ ಅವರ ಇಡೀ ಜೀವನ ಗಾಂಧೀಜಿಯ ಸಿದ್ಧಾಂತಗಳಿಗೆ ಸಮರ್ಪಿಸಲ್ಪಟ್ಟಿದೆ. ಜಲಿಯನ್‌ವಾಲಾ ಬಾಗ್ ಘಟನೆಯ ನಂತರ ಗಾಂಧೀಜಿಯ ಮನವಿಗೆ ಸ್ಪಂದಿಸಿ ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಯಾಗಿ ಅನೇಕ ಸತ್ಯಾಗ್ರಹ ಭಾಗವಹಿಸಿ ಸುಮಾರು 13 ವರ್ಷ ಸೆರೆವಾಸದಲ್ಲಿ ಕಳೆದರು. ಗಾಂಧೀಜಿಯ ಸೃಜನಾತ್ಮಕ ಕೆಲಸಗಳು, ಮುಖ್ಯವಾಗಿ ಹಿಂದೂ-ಮುಸಲ್ಮಾನರ ಒಗ್ಗಟ್ಟಿನ ಮೇಲೆ ಅವರಿಗೆ ಬಹಳ ವಿಶ್ವಾಸವಿತ್ತು. ಅವರು ಸತತವಾಗಿ ಹದಿನೈದು ವರ್ಷಗಳ ಕಾಲ ತಮ್ಮ 'ವಿಶ್ವವಾಣಿ' ಮಾಸಿಕ ಪತ್ರಿಕೆಯಿಂದ ಸಾಂಪ್ರದಾಯಿಕ ಸದ್ಭಾವನೆ, ಸಾಂಸ್ಕೃತಿಕ ಸಹಬಾಳ್ವೆ ಮತ್ತು ಸರ್ವಧರ್ಮ ಸಮನ್ವಯವನ್ನು ಪ್ರಚಾರ ಮತ್ತು ಪ್ರಸಾರ ಮಾಡಿದರು. ಇದನ್ನು ಸಾದಿಸುವುದಕ್ಕಾಗಿ ಅವರು ಪಂಡಿತ್ ಸುಂದರ್ ಲಾಲ್ ಅವರ ಜೊತೆಗೂಡಿ 'ನಹಿ ಹಿಂದಿ'ಯ ಸಂಪಾದಕರಾಗಿ ಮತ್ತು ಹಿಂದುಸ್ತಾನಿ ಕಲ್ಚರ್ ಸೊಸೈಟಿಯ ಪ್ರಕಾಶಕರಾಗಿ ಶಕ್ತಿಮೀರಿ ಕೆಲಸ ಮಾಡಿದರು.

ಕೋಮು ಸೌಹಾರ್ದತೆ ಅವರ ಜೀವನದ ಉದ್ದೇಶವಾಗಿತ್ತು. ಇದನ್ನು ಗಮನದಲ್ಲಿಟ್ಟುಕೊಂಡು ಅನೇಕ ಧರ್ಮಗಳ, ಸಂಸ್ಕೃತಿಗಳ ಮತ್ತು ಭಾರತದ ಇತಿಹಾಸದ ಮತ್ತು ರಾಜಕಾರಣದ ಬಗ್ಗೆ ಗಾಢವಾದ ಅಧ್ಯಯನ ಮಾಡಿದರು. ಈ ಪುಸ್ತಕ ಅವರ

ಗಾಢವಾದ ಅಧ್ಯಯನಕ್ಕೆ ಸಾಕ್ಷಿಯಾಗಿದೆ. ವಿಷವನ್ನು ಹತ್ತಿಕ್ಕುವಲ್ಲಿ ಈ ಪುಸ್ತಕ ಪ್ರಮುಖ ಪಾತ್ರವಹಿಸುತ್ತದೆ. ಎಂಬ ವಿಶ್ವಾಸವಿದೆ.

ಸಹೋದರ ವಿಶ್ವನಾಥ್ ಅವರು ಗಾಂಧೀಜಿಯ ಬಗ್ಗೆ ಇನ್ನೂ ಅನೇಕ ಪುಸ್ತಕಗಳನ್ನು ಬರೆಯಲಿ ಎಂದು ಹಾರೈಸುತ್ತೇನೆ.

ಸುಭದ್ರ ಜೋಷಿ
ಸಂಯೋಜಕರು
ಸಾಂಪ್ರದಾಯಿಕತಾ ವಿರೋಧಿ ಸಮಿತಿ

30.01.1999
ಹೊಸದೆಹಲಿ

ಪರಿವಿಡಿ

ಗುರುದೇವ ರವೀಂದ್ರನಾಥರ ಅಮೃತವಾಣಿ

ಮಹಾತ್ಮ ಗಾಂಧೀಜಿ ಅವರ 'ಹರಿಜನ ಸೇವಕ್' ಪತ್ರಿಕೆ 2ನೇ ನವೆಂಬರ್ 1947ರಲ್ಲಿ ಗುರುದೇವ ರವೀಂದ್ರನಾಥ ಠಾಗೋರ್ ಅವರ ಕವಿತೆ ಪ್ರಕಟವಾಯಿತು. ಗಾಂಧೀಜಿ ಇದರ ಬಗ್ಗೆ ಟಿಪ್ಪಣಿ ಬರೆಯುತ್ತಾ, ನನ್ನ ಒಬ್ಬ ಬಂಗಾಳಿ ಸಹೋದರ, ಕೋಮು ದ್ವೇಷದ ಬಗ್ಗೆ ಗುರುದೇವರ ಕವಿತೆಯನ್ನು ಕಳುಹಿಸಿದ್ದಾರೆ. ಬಂಗಾಳಿ ಭಾಷೆಯಲ್ಲಿರುವ ಕವಿತೆ ಈ ಕೆಳಕಂಡಂತಿದೆ.

ಬಂಗಾಳಿ ಭಾಷೆಯ ಕವಿತೆ

ಜೆ ಯುದ್ಧ ಭಾಯಿ ಕೆ ಮಾರೆ ಭಾಯಿ,
ಸೆ ಲಡಾಯಿ ಈಶ್ವರೇರ ವಿರುದ್ದ ಲಡಾಯಿ.

ಜೆ ಕರೆ ಧರ್ಮೇರ ನಾಮೇ ವಿದ್ವೇಷ ಸಂಚಿತ,
ಈಶ್ವರ ಅರ್ಘ್ಯ ಹತೆ ಸೆ ಕರೆ ವಂಚಿತ್.

ಜೆ ಅಂಧಾರೆ ಬಾಯಿ ಕೆ ದೇಖತೆ ನಾಹಿಪಾಯ್,
ಸೇ ಅಂಧಾರೆ ಅಂಧ್ ನಾಹಿ ದೇಖೆ ಆಪನಾಯ.

ಶ್ವರೇರ್ ಹಾಸ್ಯಮುಖ ದೇಖಿವಾರೆ ಪಾಯಿ.
ಜೆ ಆಲೋಕೆ ಭಾಯಿಕೆ ದೇಖಿತೆ ಪಾಯ ಭಾಯಿ.

ಈಶ್ವರ್ ಪ್ರಣಾಮೆ ತಬೆ ಹಾತ ಜೋಡ ಹಯ,
ಜಖನ್ ಭಾಯಿಯೇರ್ ಪ್ರೇಮೆ ಮಿಲಾಯಿ ಹೃದಯ.

ಅರ್ಥ ಕನ್ನಡದಲ್ಲಿ

ಯಾವ ಯುದ್ಧದಲ್ಲಿ ಸಹೋದರ,
ಸಹೋದರನನ್ನು ಕೊಲ್ಲುತ್ತಾನೋ
ಆ ಯುದ್ಧ ಈಶ್ವರನ ವಿರುದ್ಧದ ಯುದ್ಧ.

ಯಾರು ಧರ್ಮದ ಹೆಸರಿನಲ್ಲಿ ದ್ವೇಷವನ್ನು ಮಾಡುತ್ತಾನೋ,
ಅವನು ಭಗವಂತನ ಹೆಸರನ್ನು ನಿರರ್ಥಕ ಮಾಡುತ್ತಾನೆ.

ಯಾವ ಕತ್ತಲಲ್ಲಿ ಒಬ್ಬ ಸಹೋದರ ಮತ್ತೊಬ್ಬ
ಸಹೋದರನನ್ನು ನೋಡಲಾರನೋ,
ಆ ಕತ್ತಲಿನಲ್ಲಿ ಕುರುಡನೂ ಸಹ
ತನ್ನನ್ನು ತಾನು ನೋಡಲಾರ.

ಯಾವ ಬೆಳಕಿನಲ್ಲಿ ಸಹೋದರ ತನ್ನ ಸಹೋದರನನ್ನು, ನೋಡುವನೋ,
ಆ ಬೆಳಕಿನಲ್ಲಿ ಭಗವಂತನ ನಗುಮುಖ ಕಾಣುವುದು.

ಯಾವಾಗ ಒಬ್ಬ ಸಹೋದರನ ಹೃದಯ
ಪ್ರೀತಿಯಲ್ಲಿ ಅಗತ್ಯಗಳು ತುಂಬಿ ಬರುತ್ತದೋ,
ಆಗ ಅರಿವಿಲ್ಲದೆ ತನ್ನಷ್ಟಕ್ಕೆ ತಾನೇ ದೇವರಿಗೆ
ನಮಸ್ಕರಿಸಲು ಕೈಗಳು ಒಂದಾದಂತೆ.

ಹಿಂದಿ ಮೂಲ – ಮೋಹನ್ ದಾಸ್ ಕರಮ್‌ಚಂದ್ ಗಾಂಧಿ
ಹೊಸದೆಹಲಿ 31. 10–1947
ಕನ್ನಡಾನುವಾದ – ಡಾ. ಷಾಕೀರಾ ಖಾನಂ

ಗಾಂಧೀಜಿ ಮತ್ತು ಸರ್ವಧರ್ಮ ಸಮನ್ವಯ

ಧರ್ಮದ ಮೂಲ ಸಿದ್ಧಾಂತ

ಗಾಂಧೀಜಿ ಅವರ ಸರ್ವಧರ್ಮ ಸಮನ್ವಯವು ಎಲ್ಲ ಜಾತಿ ಧರ್ಮಗಳ ಮೂಲ ಸಿದ್ಧಾಂತಗಳನ್ನು ಒಳಗೊಂಡಿತ್ತು. ಎಲ್ಲ ಜಾತಿ ಧರ್ಮಗಳನ್ನು ಆಳವಾಗಿ ಅಧ್ಯಯನ ಮಾಡಿದ ನಂತರ ಅವರು ಪ್ರತಿಯೊಂದು ಜಾತಿ-ಧರ್ಮಗಳ ಮೂಲ ಸಿದ್ಧಾಂತ ಒಂದೇ, ನಂಬಿಕೆಗಳು ಮತ್ತು ಕರ್ಮಸಿದ್ಧಾಂತಗಳಲ್ಲಿ ಮತ್ತು ಆಚರಣೆಗಳಲ್ಲಿ ಮಾತ್ರ ವ್ಯತ್ಯಾಸವಿರುವುದು ಎಂಬ ನಿರ್ಧಾರಕ್ಕೆ ಬಂದರು. ಧರ್ಮದ ಮೂಲ ಸಿದ್ಧಾಂತಗಳೊಂದಿಗೆ ನಂಬಿಕೆಗಳ ಮತ್ತು ಕರ್ಮ ಸಿದ್ಧಾಂತಗಳ ನಡುವೆ ಯಾವುದೇ ಸಂಬಂಧವಿಲ್ಲ ಎಂದು ತಮ್ಮ ಆಳವಾದ ಅಧ್ಯಯನ ಮತ್ತು ಮನನದಿಂದ ಅರ್ಥ ಮಾಡಿಕೊಂಡರು. ನಂಬಿಕೆಗಳು ಮತ್ತು ಕರ್ಮಸಿದ್ಧಾಂತಗಳು ಸದಾ ಬದಲಾಗುತ್ತಿರುತ್ತವೆ ಆದರೆ ಧರ್ಮದ ಮೂಲ ಸಿದ್ಧಾಂತಗಳು ಎಂದೂ ಬದಲಾಗುವುದಿಲ್ಲ. ಪ್ರಪಂಚದಲ್ಲಿರುವವರೆಲ್ಲ ಸಹೋದರರೇ, ಎಲ್ಲ ಮನುಷ್ಯರು ಒಂದೇ. ಯಾರೂ ದೊಡ್ಡವರಲ್ಲ, ಯಾರು ಚಿಕ್ಕವರಲ್ಲ. ಮೇಲು-ಕೀಳೆಂಬುದಿಲ್ಲ ಎಂಬುದೇ ಎಲ್ಲ ಧರ್ಮಗಳ ಉಪದೇಶ. ಪ್ರಪಂಚ ನಡೆಯುತ್ತಿರುವುದೇ ಪ್ರೀತಿಯಿಂದ. ದ್ವೇಷ, ಅಸೂಯೆ, ಮೋಸ, ಕಪಟತನ, ವಂಚನೆ ಮತ್ತು ಶತ್ರುತ್ವದ ಭಾವನೆಗಳು ಮನುಷ್ಯನನ್ನು ಮಾನವೀಯತೆಯಿಂದ ದೂರ ಮಾಡಿ ಮೃಗೀಯದೆಡೆಗೆ ಕೊಂಡೊಯ್ಯುತ್ತವೆ. ಬೇರೆಯವರಿಗೆ ತೊಂದರೆ ಕೊಡುವುದು, ಹಿಂಸಿಸುವುದು, ನೋಯಿಸುವುದು, ಪೀಡಿಸುವುದು, ಬಲತ್ಕರಿಸುವುದು ಇವು ಮನುಷ್ಯತ್ವದ ಗುಣಗಳಲ್ಲ. ಇವು ಮೃಗೀಯ ಗುಣಗಳು. ಎಲ್ಲಾ ಧರ್ಮಗಳ ಮೂಲ ಕ್ಷಮೆ ಮತ್ತು ದಯೆ. ಅವು ಕೆಟ್ಟದನ್ನು ಒಳ್ಳೆತನದಿಂದ ಉತ್ತರಿಸಬೇಕೆಂದು ಹೇಳಿವೆ. ಎಲ್ಲಿ ಒಳಿತಿರುತ್ತದೋ ಅಲ್ಲಿ ಪ್ರೀತಿ ಇರುತ್ತದೆ. ಎಲ್ಲಿ ಪ್ರೀತಿ ಇರುತ್ತದೋ ಅಲ್ಲಿ ಅಹಿಂಸೆ ಇರುತ್ತದೆ, ಎಲ್ಲಿ ಅಹಿಂಸೆ ಇರುತ್ತದೋ ಅಲ್ಲಿ ಸತ್ಯವಿರುತ್ತದೆ, ಎಲ್ಲಿ ಸತ್ಯವಿರುತ್ತದೋ ಅಲ್ಲಿ ಧರ್ಮಾಡಳಿತವಿರುತ್ತದೆ.

ಒಂದೆಡೆ, ಗಾಂಧೀಜಿ ಹಿಂದೂ ಧರ್ಮಗ್ರಂಥ, ವೇದ ಉಪನಿಷತ್ತು, ಪುರಾಣ ಮತ್ತು ಗೀತಾ ಮುಂತಾದವುಗಳ ಅಧ್ಯಯನ ಮಾಡಿದರೆ ಇನ್ನೊಂದೆಡೆ ಕುರಾನ್, ಶರೀಫ್, ಹದೀಸ್, ಪೈಗಂಬರ್ ಸಾಹೇಬರ ಜೀವನದ ಬಗ್ಗೆ ಅಧ್ಯಯನವನ್ನೂ ಮಾಡಿದರು, ಮತ್ತೊಂದೆಡೆ ಬೈಬಲ್ ಮತ್ತು ಶರಿಯತ್ ಅಧ್ಯಯನ, ಮಗದೊಂದೆಡೆ

ಗುರುಗ್ರಂಥ ಸಾಹೇಬ, ಧಮ್ಮಪದ, ಜೈನಧರ್ಮ ಮತ್ತು ಪಾರ್ಸಿ ಧರ್ಮಗ್ರಂಥಗಳ ಅಧ್ಯಯನವನ್ನು ಮಾಡಿದರು. ಈ ಗ್ರಂಥಗಳನ್ನೆಲ್ಲ ಆಳವಾಗಿ ಅಧ್ಯಯನ ಮಾಡಿದ ನಂತರ ಅವರಿಗೆ ಪ್ರಪಂಚದ ಎಲ್ಲ ದೊಡ್ಡ-ದೊಡ್ಡ ಜಾತಿ-ಧರ್ಮಗಳ ಮೂಲ ಸಿದ್ಧಾಂತಗಳು ಒಂದೇ ಎಂಬ ಸತ್ಯದ ಅರಿವಾಗಿ ಅವರು ಹೀಗೆ ಹೇಳಿದರು- 'ನಾನು ಎಷ್ಟು ನಿಜವಾದ ಶ್ರೇಷ್ಠ ಸನಾತನಿ ಹಿಂದುವಾಗಿರುತ್ತೇನೋ ಅಷ್ಟೇ ಶ್ರೇಷ್ಠ ಮುಸಲ್ಮಾನನು, ಅಷ್ಟೇ ಶ್ರೇಷ್ಠ ಕ್ರೈಸ್ತನೂ, ಅಷ್ಟೇ ಉತ್ಕೃಷ್ಟ ಪಾರ್ಸಿಯೂ ಆಗಿರುತ್ತೇನೆ.' ಎಲ್ಲಾ ಜಾತಿ-ಧರ್ಮಗಳ ಮೂಲ ಸಿದ್ಧಾಂತಗಳನ್ನು ಅರ್ಥಮಾಡಿಕೊಂಡ ನಂತರ ಅವರಿಗೆ ಧರ್ಮಗಳ ಬಗ್ಗೆ ಇದ್ದ ಮೌಢ್ಯತೆ ದೂರವಾಗಿ ಉಪನಿಷತ್ತಿನಲ್ಲಿ ಹೇಳಿರುವಂತೆ ಇಡೀ ಭೂಮಂಡಲವೇ ಒಂದು ಚಿಕ್ಕ ಕುಟುಂಬದಂತೆ ಕಂಡಿತು.

ಧರ್ಮದ ವ್ಯಾಖ್ಯಾನ

ಮಹಾಭಾರತದ ಋಷಿಗಳು, ಹಿಂದೂ ಧರ್ಮದ ಮೂಲವನ್ನು ಹೇಗೆ ವ್ಯಾಖ್ಯಾನಿಸಿದ್ದಾರೋ, ಹಾಗೆಯೇ ಗಾಂಧೀಜಿಯ ದೃಷ್ಟಿಯಲ್ಲಿ ಸನಾತನ ಮಾನವ ಧರ್ಮವಾದ ಹಿಂದೂ ಧರ್ಮ, ಇಸ್ಲಾಮಿನ ಮೂಲ ಸಿದ್ಧಾಂತಗಳ ಬುನಾದಿಯಾಗಿದೆ. ಧರ್ಮ ಸಂಸ್ಕೃತ ಶಬ್ದ 'ಧರ್ಮಧೈ' ಧಾತುವಿನಿಂದ ಹುಟ್ಟಿಕೊಂಡಿದೆ. 'ಧರ್ಮ' ಎಂದರೆ ಧರಿಸುವುದು, ನಿಭಾಯಿಸುವುದು. ಮಹಾಭಾರತದಲ್ಲಿ ಹೀಗೆ ಬರೆದಿದೆ- 'ಜಾಬಾಲೆ', ಋಷಿಗೆ 'ಧರ್ಮ' ಎಂದರೇನು? ಎಂದು ಪ್ರಶ್ನಿಸಿದಾಗ ಋಷಿಯ ಹೀಗೆ ಉತ್ತರಿಸಿದ:-

ಧಾರಣಾತ್ವ ಧರ್ಮ ಇತ್ಯಾಹುಃ ಧರ್ಮೇಣ ವಿದ್ರುತಃ ಪ್ರಜಂಃ ।
ಯ ಸ್ಯಾದ್ವಾರೇಣಸಂಯುಕ್ತಃ ಸ ಧರ್ಮ ಇತಿ ನಿಶ್ಚಯಂ ॥

ಅಹಿಂಸಾರ್ಥ ಭೂತಾನಾಂ ಧರ್ಮಪ್ರವಚನಂ ಕೃತಂ ।
ಯಾಃ ಸ್ಯಾದಾ ಹಿಂಸೆಯ ಯುಕ್ತಂ ಸ ಧರ್ಮ ಇತಿ ನಿಶ್ಚಯಂಃ ॥

ಪ್ರಭವಾರ್ಥಾಯಾ ಭೂತಾನಾಂ ಧರ್ಮ ಪ್ರವಚನಂ ಕೃತಃ ।
ಯಾ ಸ್ಯಾತ್ಯಪ್ರಭಾವಸಂಯುಕ್ತಂ ಸ ಧರ್ಮ ಇತಿ ನಿಶ್ಚಯಂಃ ॥

ಸರ್ವೇಶಾ ಯಾ: ಸುಹೃತ್ ನಿತ್ಯಂ ಸರ್ವೇಶಾಂ ಚ ಹಿತೆ ರತಂ ।
ಕರ್ಮಣಾ ಮನಸಾ ವಚಾ ಸ ಧರ್ಮ ವೇದ ಜಾಬಾಲೆ ॥

ಅರ್ಥ:- "ಧರ್ಮ ಶಬ್ದವು ಧಾರಣೆಯಿಂದ ಆಗಿದೆ. ಎಲ್ಲರೂ ಧರ್ಮದಿಂದಲೇ ಆಳಲ್ಪಡುತ್ತಿರುವುದು. ಎಲ್ಲರನ್ನೂ ನಿಭಾಯಿಸಿಕೊಂಡು, ಸೇರಿಸಿಕೊಂಡಿರುವುದೇ ಧರ್ಮ. ಇದೇ ನಿಜವಾದ ತಿರುಳು."

"ಯಾ ಪ್ರಾಣಿಗಳ ಯಾವುದೇ ರೀತಿಯ ನೋವಾಗದಿರಲೆಂದೇ ಧರ್ಮವನ್ನು ವರ್ಣಿಸಿರುವುದು. ಮನುಷ್ಯನಿಗೆ ಯಾವುದೇ ರೀತಿಯ ದುಃಖವಾಗದಂತೆ ನಡೆದುಕೊಳ್ಳುವುದೇ ಧರ್ಮ. ಇದೇ ಒಳ್ಳೆಯದಕ್ಕಾಗಿ ಇದರ ತಿರುಳು."

"ಎಲ್ಲಾ ಪ್ರಾಣಿಗಳ ಒಳಿತಿಗಾಗಿ ಧರ್ಮವನ್ನು ವರ್ಣಿಸಿರುವುದು. ಯಾವುದರಿಂದ ಎಲ್ಲರಿಗೆ ಒಳಿತಾಗುವುದೋ ಅದೇ ಧರ್ಮ. ಅದನ್ನೇ ನಂಬಿ. ಅದೇ ನಿಜವಾದ ಧರ್ಮ."

"ಯಾವ ಮನುಷ್ಯ ತನ್ನ ಹೃದಯಾಂತರಾಳದಿಂದ ಎಲ್ಲರ ಒಳಿತನ್ನು ಬಯಸುತ್ತಾನೋ ಮತ್ತು ತನ್ನ ಕೆಲಸಗಳಿಂದ, ಮನಸ್ಸಿನಿಂದ, ಮಾತಿನಿಂದ ಎಲ್ಲರ ಒಳಿತನ್ನು ಮಾಡುವುದರಲ್ಲಿ ತಲ್ಲೀನನಾಗಿರುತ್ತಾನೋ, ಹೇ ಜಾಬಾಲಿ, ಅವನೇ ಧರ್ಮವನ್ನು ತಿಳಿದುಕೊಂಡಿರುವುದು. "

ಇದೇ ವಿಚಾರವನ್ನು ಹಿಂದೂ ಧರ್ಮಗ್ರಂಥಗಳಲ್ಲಿ ಬಗೆ-ಬಗೆಯಾಗಿ, ಪದೇ-ಪದೇ ಪುನರಾವರ್ತಿಸಿರುವುದು. ಹಿಂದೂ ಧರ್ಮವು ಯಾವುದೇ ಒಂದು ಸಮುದಾಯದ, ಯಾವುದೇ ಒಂದು ವರ್ಗದ ಹೆಸರಲ್ಲ. ಅದು ಮಾನವೀಯತೆಯ ಉತ್ಕೃಷ್ಟ ಸಿದ್ಧಾಂತದ ಹೆಸರು. ಹಿಂದೂಧರ್ಮವು ಉದಾರತೆಯನ್ನು, ಶ್ರೇಷ್ಟತೆಯನ್ನು ಮತ್ತು ಇಡೀ ಮಾನವೀಯತೆಯನ್ನು ತನ್ನ ಮಡಿಲಲ್ಲಿ ಹಾಕಿಕೊಳ್ಳುವ ಧರ್ಮವಾಗಿದೆ. ಇದು ಸಂಕುಚಿತ ದೃಷ್ಟಿಕೋನದ ಅಥವಾ ಅಸಹಿಷ್ಣುತೆಯ ಧರ್ಮವಲ್ಲ.

ಧರ್ಮದ ಹತ್ತು ಲಕ್ಷಣಗಳು

ಮನು ಮಹಾರಾಜ ತನ್ನ ಮನುಸ್ಮೃತಿಯಲ್ಲಿ ಧರ್ಮದ ಹತ್ತು ಲಕ್ಷಣಗಳನ್ನು ಹೀಗೆ ಉಲ್ಲೇಖಿಸಿದ್ದಾನೆ:-

ಧೃತಿ: ಕ್ಷಮಾ ದಮೋಸ್ತೆಯಂ ಶೌಚಮಿಂದ್ರಿಯ ನಿಗ್ರಹಂ ಧೀರ್ವಿದ್ಯಾಸತ್ಯಮ ಕ್ರೋಧೋ ದಶಕಂ ಧರ್ಮ ಲಕ್ಷಣಂ

1. ಮನುಷ್ಯ ಎಲ್ಲರ ತಪ್ಪುಗಳನ್ನು ಕ್ಷಮಿಸಬೇಕು.
2. ತನ್ನ ಅಹಂನ್ನು ನಿಯಂತ್ರಣದಲ್ಲಿಡಬೇಕು.
3. ಬೇರೆಯವರ ಅಧಿಕಾರವನ್ನು ಕಸಿಯಬಾರದು.
4. ಸ್ವಚ್ಛವಾಗಿ ಮತ್ತು ಶುಭ್ರವಾಗಿರಬೇಕು.
5. ತನ್ನ ಪಂಚೇಂದ್ರಿಯಗಳನ್ನು, ಆತ್ಮವನ್ನು ಹಿಡಿತದಲ್ಲಿಡಬೇಕು.
6. ಶಿಕ್ಷಣವನ್ನು ಪಡೆಯಬೇಕು.

7. ಪ್ರಾಮಾಣಿಕತೆಯಿಂದ ಕೆಲಸ ಮಾಡಬೇಕು.
8. ಕೋಪ-ತಾಪ ಮಾಡಬಾರದು.
9. ಸತ್ಯಮಾರ್ಗದಲ್ಲಿ ನಡೆಯಬೇಕು.
10. ಅನಾಥರ ಸಂಪತ್ತನ್ನು ದೋಚಬಾರದು.

ವೇದ ಮತ್ತು ಉಪನಿಷತ್ತುಗಳಲ್ಲಿ ದಯೆ

ಇದು ಶ್ರೇಷ್ಠ ಹಿಂದೂ ಧರ್ಮ. ಇದುಯಾವುದೇ ಧರ್ಮದ, ಯಾವುದೇ ಜಾತಿಯ ಮೂಲಸಿದ್ಧಾಂತಗಳನ್ನು ತಿರಸ್ಕರಿಸುವುದಿಲ್ಲ. ವೇದಗಳಲ್ಲಿ ಕೋಪ, ಸುಳ್ಳು, ಮೋಸ ಹಾಗೂ ಸೇಡಿನ ಭಾವನೆಗಳನ್ನು ತಪ್ಪು ಎಂದು ಹೇಳಲಾಗಿದೆ. ಋಗ್ವೇದದ ಋಷಿಗಳ ಹಿತ ವಚನಗಳು ಹೀಗಿವೆ:-

"ಮಾ ವೂ ಧ್ಯಂಸ್ತಂ ಮಾ ಶಪಂತಂ ಪ್ರತಿವೋಚೆ
ದೇವಯಂತಂ ಸಮ್ಮಯ್ರಿದ್ದ ಆವಿಚಾಸೆ

ಚತುರ್ಶಿಚ್ದ ದದಮಾನದ ವಿಭಿಯಾದ ಅನಿಘಾತೋಃ
ನಾ ದುರುಕ್ತ ಯಾ ಸ್ಪ್ರಹಯೇತಾ"

ಅರ್ಥ:- ಸೇಡನ್ನು ಸೇಡಿನಿಂದ, ಶಾಪವನ್ನು ಶಾಪದಿಂದ, ಕಪಟತನವನ್ನು ಕಪಟತನದಿಂದ ಜಯಿಸಲು ಪ್ರಯತ್ನಿಸಬೇಡ, ಆದರೆ ಸೇಡು, ಶಾಪ ಮತ್ತು ಕಪಟತನ ಈ ಮೂರನ್ನು ಶುಭೇಚ್ಚೆಯಿಂದ ಜಯಿಸು. (1)

ಸಾಮವೇದದಲ್ಲಿ ಋಷಿಯ ವಚನಗಳು:-
"ಸೇತೂನ್ತ್ರ ದುಸ್ತರಾನ್ ಅಕ್ರೋಧೇನ್
ಕ್ರೋಧಮಂ ಸತ್ಯೇನಾನೃತಃ"

ಅರ್ಥ:- "ಯಾವ ಸೇತುವೆಗಳನ್ನು ದಾಟಲು ಕಷ್ಟವೋ, ಆ ಸೇತುವೆಗಳನ್ನು ದಾಟು. ಕೋಪವನ್ನು ತಾಳ್ಮೆಯಿಂದ ಸುಳ್ಳನ್ನು ಸತ್ಯದಿಂದ".(2)

ಉಪನಿಷತ್ತಿನಲ್ಲಿ ಯಾವುದೇ ರೀತಿಯ ಆಚರಣೆಯನ್ನು ಮತ್ತು ಬಾಹ್ಯ ಸಂಕೇತಗಳನ್ನು ಧರ್ಮದ ಅವಶ್ಯಕ ಅಂಶ ಎಂದು ಪರಿಗಣಿಸಿಲ್ಲ. ಈ ಉಪನಿಷತ್ತಿನ ಪ್ರಕಾರ- 'ಯಾವ ಮನುಷ್ಯ, ಪ್ರಾಣಿಗಳೆಲ್ಲವನ್ನು ತನ್ನಂತೆಯೇ ಎಂದು ಭಾವಿಸುತ್ತಾನೋ ಅವನು ತನ್ನಲ್ಲಿ ಪರರನ್ನು ಮತ್ತು ಪರರಲ್ಲಿ ತನ್ನನ್ನು ಕಾಣುತ್ತಾನೆ. ಹೀಗೆ ನೋಡುವವನೇ ಧರ್ಮಾತ್ಮ". (3)

ಹಿಂದೂ ಧರ್ಮದ ಋಷಿಗಳಿಗೆ ಇದರಿಂದ ಸಮಾಧಾನವಾಗಲಿಲ್ಲ. ಧರ್ಮದೊಂದಿಗೆ ಬೇರೆ-ಬೇರೆ ಆಚರಣೆಗಳ ಸಂಬಂಧ ಹೇಗಿದೆ ಎಂಬ ಸಂದೇಹವನ್ನು ಸಹ ಪರಿಹರಿಸಿದ್ದಾರೆ. ಉಪನಿಷತ್ತಿನ ಪ್ರಕಾರ-

'ಗಾವಾಂನೆಕವರ್ಣಾನಂ ಕ್ಷೀರಸ್ಯಾಸ್ತ್ಯೈಕವರ್ಣಾತಾ
ಕ್ಷೀರ ಪಶ್ಯತೆ ಜ್ಞಾನಿ ಲಿಂಗಿನಾಸ್ತು ಗಾವಾಂ ಯಥಾ'

ಅರ್ಥ:- ಹಸುಗಳ ಬಣ್ಣ ಬೇರೆ-ಬೇರೆ ಆದರೆ ಅವು ಕೊಡುವ ಹಾಲಿನ ಬಣ್ಣ ಒಂದೇ. ಜ್ಞಾನಿಗಳು ಆ ಹಾಲಿನ ಬಣ್ಣವನ್ನು ನೋಡಿದರೆ ಅಜ್ಞಾನಿಗಳು ಬಾಹ್ಯ ಸಂಕೇತಗಳಲ್ಲಿ ಮತ್ತು ಆಚರಣೆಗಳಲ್ಲಿ ಸಿಲುಕಿ ಹಸುವಿನ ಬಣ್ಣವನ್ನು ನೋಡುತ್ತಾರೆ.

ಗೀತೆಯ ಪ್ರಕಾರ ಧರ್ಮ

ನಿಜವಾದ ಧರ್ಮವನ್ನು ಶ್ರೀಮದ್ಭಗವದ್ಗೀತೆ ಹೀಗೆ ವರ್ಣಿಸಿದೆ:- ಯಾವ ವ್ಯಕ್ತಿ ತನ್ನನ್ನು ತಾನು ನಿಯಂತ್ರಿಸಿಕೊಂಡು. ತನ್ನ ಇಂದ್ರಿಯಗಳನ್ನು ಜಯಿಸಿ. ನಿಸ್ವಾರ್ಥವಾಗಿ ಮೇಲಕ್ಕೆದ್ದು. ತನ್ನ ವೈಯಕ್ತಿಕ ಸುಖ-ದುಃಖ, ಲಾಭ-ನಷ್ಟಗಳನ್ನು ಲೆಕ್ಕಿಸದೆ ಪ್ರಪಂಚದ ಒಳಿತನ್ನು ಬಯಸಿ, ಯಾರೊಂದಿಗೂ ವೈರತ್ವ ಮಾಡದೆ, ಯಾರನ್ನು ದ್ವೇಷಿಸದೆ, ಎಲ್ಲರಿಗೂ ಒಳಿತನ್ನು ಮಾಡಿ, ಪರರ ಸೇವೆಯನ್ನು ತನ್ನ ಕರ್ತವ್ಯವೆಂದು ಭಾವಿಸಿ ಅದನ್ನು ಸಾಧಿಸುತ್ತಾನೋ ಅವನೇ ಧರ್ಮಾತ್ಮ. ನರಕದ ಮೂರು ಬಾಗಿಲುಗಳಿವೆ- ಕಾಮ, ಕ್ರೋಧ ಮತ್ತು ಲೋಭ. ಪ್ರಪಂಚದಲ್ಲಿ ಜನ ಯಾವ ವ್ಯಕ್ತಿಯನ್ನು ನೋಡಿ ಹೆದರುವುದಿಲ್ಲವೋ ಮತ್ತು ಯಾವ ವ್ಯಕ್ತಿ ಯಾರಿಂದಲೂ ಹೆದರುವುದಿಲ್ಲವೋ ಅಂತಹ ವ್ಯಕ್ತಿಯನ್ನು ಭಗವಂತ ಬಹಳ ಪ್ರೀತಿಸುತ್ತಾನೆ. ಮನುಷ್ಯ ತನ್ನ ಸ್ವಾರ್ಥವನ್ನು ಮರೆತು ಕಷ್ಟಪಟ್ಟು ದುಡಿದು ತನ್ನ ಕರ್ತವ್ಯವನ್ನು ಅರಿತು ಎಲ್ಲರಿಗೂ ಒಳಿತು ಮಾಡಿ ನಿಜವಾದ ಜ್ಞಾನವನ್ನು ಪಡೆಯಬಹುದು. ಮನುಷ್ಯ ಎಲ್ಲರನ್ನೂ ತನ್ನಲ್ಲಿ ಮತ್ತು ಎಲ್ಲರನ್ನೂ ಭಗವಂತನಲ್ಲಿ ಮತ್ತು ತನ್ನಲ್ಲಿ ಮತ್ತು ಎಲ್ಲರಲ್ಲಿ ಒಂದೇ ಭಗವಂತನನ್ನು ಕಾಣುವುದೇ ನಿಜವಾದ ಜ್ಞಾನ. ತನ್ನ ಮೇಲೆ ಹಿಡಿತವನ್ನು ಸಾಧಿಸಿ ಬೇರೆಯವರ ಸೇವೆಯಲ್ಲಿ ತನ್ನ ಆತ್ಮವನ್ನು ಪವಿತ್ರಗೊಳಿಸುತ್ತ ತನ್ನ ಆತ್ಮದ ನೈಜ ಪ್ರಗತಿಯತ್ತ ಹೆಜ್ಜೆ ಹಾಕಬಹುದು ಮತ್ತು ತನ್ನೊಳಗೆ ಆ ಪರಂಜ್ಯೋತಿ ಆ ಭಗವಂತನ ಸಾಕ್ಷಾತ್ಕಾರ ಮಾಡಿ ಎಲ್ಲರ ಮನಸ್ಸಿನಲ್ಲಿ ನೆಲೆಸಿ ಮುಕ್ತಿ ಪಡೆಯಬಹುದು. (4)

ಅಥರ್ವವೇದ ಮತ್ತು ರಾಷ್ಟ್ರೀಯತೆ

ಪರಸ್ಪರ ಶತ್ರುತ್ವ ಮತ್ತು ದ್ವೇಷದೊಂದಿಗೆ ಧರ್ಮದ ಯಾವುದೇ ಸಂಬಂಧವಿಲ್ಲ. ಯಾವ ಮನುಷ್ಯ ಮನುಷ್ಯರ ನಡುವೆ, ಸಂಪ್ರದಾಯಗಳ ನಡುವೆ, ಜಾತಿ-ಧರ್ಮಗಳ ನಡುವೆ ದ್ವೇಷ ಮತ್ತು ಅಸೂಯೆಯನ್ನು ಬಿತ್ತುತ್ತಾನೋ ಆತ ಅಥರ್ವವೇದದ ಪ್ರಕಾರ ಅಧರ್ಮದ ದಾರಿಯಲ್ಲಿ ನಡೆದಂತೆ. ಅಥರ್ವವೇದ ಋಷಿಯು ಭೂಮಿಯನ್ನು ಪೃಥ್ವಿ ಎಂದು ಕರೆಯುತ್ತಾನೆ. ಆತನ ಪ್ರಕಾರ:-

ಮಾತಾ ಭೂಮಿಂ ಪುತ್ರೋಂ ಪ್ರುಥಿವ್ಯಾಂ. (5)

ಅರ್ಥ:- ಈ ಭೂಮಿ ತಾಯಿ ಮತ್ತು ನಾನು ಪೃಥ್ವಿಯ ಮಗ.

ಅಥರ್ವವೇದದ 'ಪೃಥ್ವಿ' ಶಬ್ದದ ಪ್ರಕಾರ- ಈ ಭರತ ಭೂಮಿ ಹೇಗಿದೆ ? ಋಷಿ ಹೇಳುತ್ತಾನೆ- ಇಲ್ಲಿ ವಿವಿಧ ಬಗೆಯ ಜನರಿದ್ದಾರೆ. ಅವರೆಲ್ಲರು ಸೇರಿ ಭಾರತ ಮಾತೆಗೆ ಶಕ್ತಿ ತುಂಬುತ್ತಾರೆ. ಆಕೆಯ ಸೌಂದರ್ಯವನ್ನು ಹೆಚ್ಚಿಸುತ್ತಾರೆ. ಬೇರೆ-ಬೇರೆ ಪ್ರದೇಶಕ್ಕನುಗುಣವಾಗಿ ಅವರವರದ್ದೇ ಆದ ಬೇರೆ-ಬೇರೆ ಭಾಷೆಗಳಿವೆ ಮತ್ತು ಅವರು ಬೇರೆ-ಬೇರೆ ಸಂಸ್ಕೃತಿಗಳಲ್ಲಿ ನಂಬಿಕೆ ಇಡುವವರಾಗಿದ್ದಾರೆ.

ಜನಂ ವಿಭ್ರತಿ ಬಹುಧಾ ವಿವಾಚಸಂ ।
ನಾನಾ ಧರ್ಮಣ: ಪೃಥಿವಿ ಯಧೌಕ ಸಮಂ । (6)

ಅಥರ್ವವೇದದ ಋಷಿಯು ಭಾರತದ ಜನರಲ್ಲಿರುವ ವೈವಿಧ್ಯತೆಯನ್ನು ಬಹಳ ಆನಂದದಿಂದ ಒಪ್ಪಿಕೊಳ್ಳುತ್ತಾನೆ. ಸಂತೋಷದಿಂದ ಸ್ವೀಕರಿಸುತ್ತ ಹೀಗೆ ಹೇಳುತ್ತಾನೆ 'ಅನೇಕ ವೈವಿಧ್ಯತೆಗಳಿದ್ದರೂ ನಾವೆಲ್ಲ ಭಾರತೀಯರು ಎಂಬ ಭಾವನೆಯ ಸೂಕ್ಷ್ಮದಾರದಲ್ಲಿ ಇವರೆಲ್ಲ ಪೋಣಿಸಲ್ಪಟ್ಟಿದ್ದಾರೆ. ಅಥರ್ವವೇದದ 'ಪೃಥ್ವಿ' ಶಬ್ದವನ್ನು ಋಷಿಯು 'ಸಮಗ್ರ' ಎನ್ನುವ ಅರ್ಥದಲ್ಲಿ ಬಳಸಿದ್ದಾನೆ. ಈ ರಾಷ್ಟ್ರೀಯ ಒಗ್ಗಟ್ಟನ್ನು ಹೇಗೆ ಗಳಿಸಬಹುದು? ಇದಕ್ಕೆ, ಸಂಸ್ಕೃತಿಗಳ ವೈವಿಧ್ಯತೆ, ಅನೇಕ ಭಾಷೆಗಳ ಬಳಕೆ, ಅನೇಕ ಜಾತಿಗಳು ಅಡ್ಡಿಯಾಗುವುದಿಲ್ಲ. ಇದನ್ನು ಶಾಪವಾಗಿ ಕಲ್ಪಿಸಿಕೊಳ್ಳುವುದು ಸರಿಯಲ್ಲ. ಋಷಿಯ ಪ್ರಕಾರ ಈ ವೈವಿಧ್ಯತೆಗೆ ಭೌಗೋಳಿಕ ಪರಿಸ್ಥಿತಿಗಳೇ ಕಾರಣ.

ನಾನಾ ಧರ್ಮ, ನಾನಾ ಭಾಷೆಗಳ 'ಬಹುದಾ ಜನ ಎ ಸವ ಯಥೋ ಕಸ್'-

ಅರ್ಥ : ವೈವಿಧ್ಯತೆ ಇರುವುದರಿಂದಲೇ ಬೇರೆ -ಬೇರೆ ಆಗಿರುವುದು. ಈ ಸೂಕ್ಷ್ಮ ವ್ಯತ್ಯಾಸ ಒಂದಲ್ಲ ಒಂದು ದಿನ ಅಳಿಸಿ ಹೋಗುವುದು ಎಂದು ಕಲ್ಪಿಸಿಕೊಳ್ಳುವುದು ತಪ್ಪುಅಲ್ಲದೆ ಇದರ ವಿರುದ್ಧ ಯುದ್ಧ ಸಾರುವುದು ಮೂರ್ಖತನ. ಋಷಿ ಹೇಳುತ್ತಾನೆ.

ಯಾರು ಈ ಭರತ ಭೂಮಿಯಲ್ಲಿ ಹುಟ್ಟಿದ್ದಾರೋ ಅವರಿಗೆಲ್ಲರಿಗೂ ಈ ಭರತ ಭೂಮಿಯ ಮೇಲೆ ಸಮನಾದ ಅಧಿಕಾರವಿದೆ.

ತಾ ನಂ ಪ್ರಜಾ: ಬೃಹತಾಂ ಸಮಗ್ರ ।
ವಾಚೋ ಮಧು ಪೃಥ್ವಿ ಧೇಹಿ ರ್ಮಹಾಮ್ । (7)

ಅಥರ್ವವೇದದ ಋಷಿ ಹೇಳುತ್ತಾನೆ–" ಒಗ್ಗಟ್ಟಿಲ್ಲದೇ ಮಾತೃಭೂಮಿಯ ಅಭಿವೃದ್ಧಿ ಸಾಧ್ಯವಿಲ್ಲ. ಪೃಥ್ವಿಯನ್ನು ಹದಗೊಳಿಸಲು ಪ್ರುಥನು ಜಡ–ಚೇತನದ ಎಲ್ಲಾ ವರ್ಗಗಳನ್ನು ಒಂದೇ ಸೂತ್ರದಲ್ಲಿ ಕಟ್ಟಲಿಲ್ಲವೇ?ಒಗ್ಗಟ್ಟಿನಿಂದ ಒಂದು ಸೂತ್ರದಲ್ಲಿ ಕಟ್ಟಲ್ಪಡದೆ ದೇಶದ ಅಭಿವೃದ್ಧಿ ಅಸಾಧ್ಯ. ಸಿಹಿಯಾದ ಭಾಷೆಗಳ ಬಳಕೆ ಮತ್ತು ಅದರ ಶೈಲಿಯ ಮಾಧುರ್ಯವೇ ರಾಷ್ಟ್ರೀಯ ಒಗ್ಗಟ್ಟಿನ ಕೀ" ವಾಚ್ಯಂ ಮಧು ।

ಋಷಿ ಹೇಳುತ್ತಾನೆ– ಒಬ್ಬರು ಮತ್ತೊಬ್ಬರ ದೌರ್ಬಲ್ಯಗಳನ್ನು ಕ್ಷಮಿಸಿ ಏಕೆಂದರೆ ಸ್ವತ: ಭೂಮಿಯೇ ಕ್ಷಮಾಯಾಧರಿತ್ರಿ"– 'ಕ್ಷಮಾ ಭೂಮಿಮ'–

ಈ ಭೂಮಿ ಜ್ಞಾನಿ ಮತ್ತು ಮೂರ್ಖರಿಬ್ಬರನ್ನು ಸಲಹುತ್ತದೆ. ಪುಣ್ಯವಂತ ಮತ್ತು ಪಾಪಿಗಳಿಬ್ಬರು ಇದೇ ಭೂಮಿಯಲ್ಲಿ ಅಸುನೀಗುವುದು. ಈ ಭೂಮಿಯ ಮೇಲೆ ಎಲ್ಲರೂ ಎಡ–ಬಲ ಮಗ್ಗುಲಲ್ಲೇ ಮಲಗುವುದು. ಈ ಭೂಮಿ ಎಲ್ಲರ ಹಾಸಿಗೆ (ಸರ್ವಸ್ವ ಪ್ರತಿ ಶಿವಾರಿ) (8)

ನಮ್ಮ ಈ ಒಗ್ಗಟ್ಟು (ಬಲಂ ರಾಷ್ಟ್ರೇದಧಾತ್ತತ್ತಮೆ) ದೇಶಕ್ಕೆ ಶಕ್ತಿ ಕೊಡುವಂತಾಗಬೇಕು ಮತ್ತು ಕೊನೆಗೆ ಋಷಿ ಹೀಗೆ ಪ್ರಾರ್ಥಿಸುತ್ತಾನೆ:– "ಪೃಥ್ವಿಯ ಮೇಲಿರುವ ವನ–ಬನಗಳಲ್ಲಿ, ಆಯೋಜಿಸುವ ಸಭೆ–ಸಮಾರಂಭಗಳಲ್ಲಿ, ಸಾರ್ವಜನಿಕ ಸಮ್ಮೇಳನಗಳಲ್ಲಿ ಹೇ! ಭಾರತ ಭೂಮಿಯೇ! ರಾಷ್ಟ್ರೀಯ ಒಗ್ಗಟ್ಟನ್ನು ಗಟ್ಟಿಗೊಳಿಸುವ ಸುಂದರ ಭಾಷಣಗಳನ್ನು ನಾವು ನಿನಗೆ ಕೊಡುವಂತಾಗಲಿ".

ದ್ವೇಷದಿಂದ ದ್ವೇಷ ಶಮನವಾಗುವುದಿಲ್ಲ

ಪ್ರಪಂಚದ ಪ್ರತಿಯೊಂದು ಧರ್ಮವು, ಮನುಷ್ಯನನ್ನು ಮನುಷ್ಯನಿಂದ ದೂರಮಾಡುವ ದ್ವೇಷ ಭಾವನೆಯಿಂದ ತಮ್ಮನ್ನು ಕಾಪಾಡಿಕೊಳ್ಳುವ ಸಲಹೆ ನಿಡಿದೆ.

ತಥಾಗತ ಬುದ್ಧ ಹೀಗೆ ಹೇಳುತ್ತಾನೆ:–
ನಹಿ ವೈರೀನ್ ವ್ಯರಾನಿ ಸಂಮಂತ ಇಹ ಕದಾಚನಃ ।
ಆವೈರೇನ್ ಚ ಸಮ್ಮತಿ ಏಸಾ ದಮ್ಮು ಸನಾತನೊ ॥

ಎಂದೂ ದ್ವೇಷದಿಂದ ದ್ವೇಷ ಶಮನವಾಗುವುದಿಲ್ಲ. ಪ್ರೀತಿಯಿಂದ ಮಾತ್ರ ದ್ವೇಷ ಶಮನವಾಗಲು ಸಾಧ್ಯ ಇದೆ. ಸನಾತನ ಧರ್ಮ. (9)

ನಾಲಿಗೆಯ ಹಿಡಿತ

ಮಹಾತ್ಮ ಝುರತೃಷ್ಟ ದ್ವೇಷ ಹರಡುವವರನ್ನು ಖಂಡಿಸುತ್ತ ಹೀಗೆ ಹೇಳಿದ್ದಾನೆ:-

"ಯಾರು ತಮ್ಮ ನಾಲಿಗೆಯನ್ನು ಹರಿಬಿಟ್ಟು, ತಮ್ಮ ಸುತ್ತ-ಮುತ್ತ ಅಸಹಿಷ್ಣುತೆ ಮತ್ತು ದ್ವೇಷವನ್ನು ಹರಡುತ್ತಾರೋ, ಯಾರು ಜನರ ಮನಸ್ಸನ್ನು ಒಗ್ಗೂಡಿಸುವ ಬದಲು ಅದನ್ನು ಕದಡಲು ಬಯಸುತ್ತಾರೋ, ದ್ವೇಷ ಮತ್ತು ಅಸೂಯೆಯನ್ನು ಹರಡುವ ಅಂತಹ ಪಿಶಾಚಿಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಿ. "(10)

ಒಮ್ಮೆ ಪೈಗಂಬರ್ ಹಜರತ್ ಮೊಹಮ್ಮದ್ ಅವರಿಗೆ ಯಾರೋ ಕೇಳಿದರು:- "ಹೇ ಅಲ್ಲಾಹ್ ನ ದೇವಧೂತನೆ-ಅಲ್ಲಾಹನ ದಾರಿಯಲ್ಲಿ ನಡೆಯಲು ನೀವು ನಮಗೆ ನೀಡುವ ಅತ್ಯಂತ ಪ್ರಮುಖವಾದ ಉಪದೇಶವೇನು?"ಪೈಗಂಬರ್ ಅವರು ತಮ್ಮ ನಾಲಿಗೆಯನ್ನು ಮುಟ್ಟಿ:-"ಈ ನಮ್ಮ ನಾಲಿಗೆಯೇ ಎಲ್ಲಾ ಕೆಡಕುಗಳ ಮೂಲ. ಯಾರಿಗೆ ಇದರ ಮೇಲೆ ಹಿಡಿತವಿರುವುದಿಲ್ಲವೋ ಮತ್ತು ಯಾರು ಜನರ ನಡುವೆ ದ್ವೇಷವನ್ನು ಹರಡುತ್ತಾರೋ ಅಂತಹವರನ್ನು ಅಲ್ಲಾಹ್ ನೇರವಾಗಿ ನರಕದ ಬೆಂಕಿಗೆ ಎಸೆಯುತ್ತಾನೆ. "(11)

ಕುರಾನಿನ ನೀತಿಪಾಠ

ಕುರಾನಿನ ತಾಲೀಮಿನ ಬಗ್ಗೆ ಮತ್ತು ಮೊಹಮ್ಮದ್ ಸಾಹೇಬರ ಉಪದೇಶಗಳ ಬಗ್ಗೆ ಹೇಳಬೇಕೆಂದರೆ- ಇಸ್ಲಾಂ ಒಂದು ಸಂಕುಚಿತ ಸಮುದಾಯದ ಅಥವ ಸಂಪ್ರದಾಯದ ಹೆಸರಲ್ಲ. ಕುರಾನ್ ಕೆಲವೊಂದು ವಿಷಯಗಳನ್ನು ಸ್ಪಷ್ಟವಾಗಿ ಪದೇ-ಪದೇ ಹೇಳಿದೆ: "ಎಲ್ಲ ಮನುಷ್ಯರು ಒಂದೇ ಸೃಷ್ಟಿಕರ್ತನ ಸೃಷ್ಟಿ ಅಂದರೆ ಒಂದೇ ಧರ್ಮದವರು."(12)

"ಮನುಕುಲವರೆಲ್ಲ ಒಬ್ಬ ಸೃಷ್ಟಿಕರ್ತನಿಗೆ ಅಂದರೆ ಒಂದೇ ಧರ್ಮಕ್ಕೆ ಸೇರಿರುವುದು(13)

"ನಿಜಾರ್ಥದಲ್ಲಿ ಮನುಷ್ಯರೆಲ್ಲರು ಒಂದೇ ಸಮುದಾಯದವರು ಮತ್ತೆ ನಿಮ್ಮೆಲ್ಲರ ಭಗವಂತ ಒಬ್ಬನೇ." (14)

"ಅವನೇ ನಿಮ್ಮ ರಕ್ಷಕ ಆದ್ದರಿಂದ ಅವನನ್ನೇ ಜಪಿಸಿ. ಜನ ತಮ್ಮನ್ನು ತಾವೆ ವಿಂಗಡಿಸಿಕೊಂಡು ವಿವಿಧ ಸಂಪ್ರದಾಯಗಳಲ್ಲಿ ಹಂಚಿಹೋಗಿದ್ದಾರೆ ಆದರೆ ಕೊನೆಗೆ ಎಲ್ಲರೂ ಹೋಗುವುದು ಒಬ್ಬ ಭಗವಂತನ ಬಳಿಯೇ."(15)

ಪೈಗಂಬರ್ ಮೊಹಮ್ಮದ್‌ರು ಅರ್ಧರಾತ್ರಿಗೆ ಎಚ್ಚರಗೊಂಡು ಪ್ರತಿ ನಮಾಜಿನ ಮೊದಲು ಪ್ರಾರ್ಥಿಸುತ್ತಾ - 'ನಾನು ಪ್ರಮಾಣ ಮಾಡಿ ಹೇಳುತ್ತೇನೆ ದೇವರು ಒಬ್ಬನೇ. ಎಲ್ಲರೂ ಸಹೋದರರು.' ಎಂಬ ಚಿಂತೆ ವ್ಯಕ್ತಪಡಿಸುತ್ತಿದ್ದರು. (16)

ಕುರಾನಿನಲ್ಲಿ ಪದೇ-ಪದೇ ಹೇಳಿರುವ ಮತ್ತೊಂದು ವಿಷಯವೇನೆಂದರೆ "ಪೈಗಂಬರ್ ಮೊಹಮ್ಮದ್ ಬರುವುದಕ್ಕೂ ಮೊದಲು ಪ್ರತಿಯೊಂದು ಪ್ರದೇಶ ಮತ್ತು ಎಲ್ಲ ಸಮೂಹಗಲ್ಲೂ ಯುಗಪುರುಷರು ಹುಟ್ಟಿದ್ದಾರೆ."(17)

"ಪ್ರತಿಯೊಂದು ಸಮೂಹದಲ್ಲೂ ಯುಗಪುರುಷರು ಬಂದು ಹೋಗಿದ್ದಾರೆ."(18)

"ಪ್ರತಿಯೊಂದು ಸಮಾಜದಲ್ಲೂ ಧರ್ಮದ ದಾರಿಯನ್ನು ತೋರಿಸುವವರು ಹುಟ್ಟಿದ್ದಾರೆ."(19)

"ಇದಕ್ಕೂ ಮೊದಲು ಅಲ್ಲಾಹನು ಪ್ರತಿಯೊಂದು ಸಮುದಾಯದಲ್ಲೂ ಯುಗಪುರುಷರನ್ನು ಕಳಿಸಿದ್ದಾನೆ ಎನ್ನಲು ಯಾವುದೇ ಸಂದೇಹವಿಲ್ಲ."(20)

ಕುರಾನ್ ಹೇಳುತ್ತದೆ:-

"ಇನ್ನಹು, ಲಾ ಹಿಜಬ್ಬುರ್ ಇಲ್ ಅವ್ವಲೀನ್ ಲಿಕುಲ್ಲಿ ಮೋಮಿನೀನ್ ಕೋಮಿನಾಹಾದ್।
ಇನ್ ಮಿನ್ ಉಮ್ಮತಿನ್ ಇಲ್ಲಾ ಖಲಾ ಫೀಹಾನಜೀರ್।
ಲಾ ನೊಫರ್ಾಕೊ ಬೈನ ಅಹದಿಮ್ ಮಿನ್ ರಸೂಲೆ।
ವಾ ಮಾ ಅರ್ ಸಲನ ಮಿನ್ ಖಬ್ಲಿಕಾ ಮ್ರಿರ್ಸೂಲಿನ್।
ಇಲ್ಲಾ ನೂಹಿ ಇಲೈಹೆ ಅನ್ನೂರ್।
ಲಾ ಇಲಾಹ ಇಲ್ಲಲ್ಹ ಅನಾ ಫಾಬುದ್ದೂನ್।"

ಅರ್ಥ:-'ಈಗ ನಾನು ನಿಮಗೆ ಹೇಳುತ್ತಿರುವುದೆಲ್ಲವನ್ನು ಹಿಂದಿದ್ದ ಜನರ ಪವಿತ್ರ ಗ್ರಂಥಗಳಲ್ಲೂ ಹೇಳಿಯಾಗಿದೆ. ಎಲ್ಲಾ ಸಮುದಾಯಗಳಿಗೂ (ಮಹಾಪುರುಷ) ಪೈಗಂಬರ್‌ರನ್ನು ಕಳಿಸಲಾಗಿದೆ. ಪೈಗಂಬರರ ನಡುವೆ ಯಾವುದೇ ಭೇದ-ಭಾವವಿಲ್ಲ. ಎಲ್ಲರನ್ನೂ ಸಮಾನರೆಂದು ಪರಿಗಣಿಸಿದ್ದೇವೆ. ಎಲ್ಲರ ಉಪದೇಶಗಳು ಒಂದೇ ಆಗಿವೆ. ಎಲ್ಲರೂ ಪ್ರತಿಪಾದಿಸಿರುವುದು ಒಂದೇ ಸತ್ಯವನ್ನು. ಎಲ್ಲರಿಗೂ ನಾನೊಬ್ಬನೇ/ಳೆ ಭಗವಂತ. ಭಗವತಿ ನನ್ನನ್ನು ಬಿಟ್ಟು ಬೇರ್‍ಯಾರು ಪ್ರಾರ್ಥನೆಗೆ ಯೋಗ್ಯರಲ್ಲ. ಪೈಗಂಬರರನ್ನು ಒಂದು ನಿರ್ದಿಷ್ಠ ಸಮುದಾಯದ ಕಳುಹಿಸಲಾದ ಉಪದೇಶಗಳು ಆ ಸಮುದಾಯಕ್ಕೆ ಜನರಿಗೆ ಅವರ ಉಪದೇಶಗಳು ಸರಿಯಾಗಿ ಅರ್ಥ ಆಗಲೆಂದು ಅದೇ ಸಮುದಾಯದ ಭಾಷೆಯಲ್ಲಿ ಸಂದೇಶವನ್ನಾಗಿ ನೀಡಿರುವುದು.(21)

ಕುರಾನಿನ ಪ್ರಕಾರ ಯಾವುದೇ (ಮಹಾಪುರುಷ) ಪೈಗಂಬರರನ್ನು ನಂಬುವುದು ಅಥವ ನಂಬದಿರುವುದು, ಅವರಲ್ಲಿ ಭೇದ ಮಾಡುವುದು, ಅವರು ದೊಡ್ಡವರು ಇವರು ಚಿಕ್ಕವರು ಎಂದು ತಿಳಿಯುವುದು ಕುಫರ್(ಅಧರ್ಮ) ಕುರಾನ್ ಹೇಳುತ್ತದೆ:-

"ನಿಜವಾಗಿ ಯಾರು ಅಲ್ಲಾಹ್ ಮತ್ತು ಅವರ (ಮಹಾಪುರುಷ) ರಸೂಲ್‌ನ್ನು ನಂಬುವುದಿಲ್ಲವೋ, ರಸೂಲರ (ಮಹಾಪುರುಷರ) ನಡುವೆ ಭೇದ-ಭಾವ ಮಾಡುತ್ತಾರೋ, ನಾವು ಅವರನ್ನು ನಂಬುತ್ತೇವೆ ಇವರನ್ನು ನಂಬುವುದಿಲ್ಲಎಂದು ಹೇಳುತ್ತಾರೋ ಅಂತಹವರೇ ನಿಜವಾದ ಕಾಫಿರ್‌ಗಳು ಅಂದರೆ ಅಧರ್ಮಿಗಳು.(22)

ಇಸ್ಲಾಂ ಮತ್ತು ಸರ್ವಧರ್ಮ ಸಮನ್ವಯ

ಹಿಂದಿನ ಎಲ್ಲಾ ಧರ್ಮಗಳನ್ನು ಮತ್ತು ಎಲ್ಲಾ ಸಮುದಾಯಗಳ ಪುಸ್ತಕಗಳನ್ನು ಕುರಾನ್ ತನ್ನಂತೆಯೇ ನಿಜ ಮತ್ತು ಸರಿಯೆಂದು ಕುರಾನ್ ಒಪ್ಪುತ್ತದೆ:-

'ಈ ಕುರಾನ್ ಎಂತಹ ನಿಜವೆಂದರೆ ಇದು ತನಗಿಂತ ಮೊದಲಿನ ಎಲ್ಲ ಪುಸ್ತಕಗಳ ವಿಷಯಗಳನ್ನು ಒಪ್ಪಿಕೊಳ್ಳುತ್ತದೆ ಮತ್ತು ಎಲ್ಲವನ್ನೂ ನಿಜವೆಂದು ನಂಬುತ್ತದೆ. (23)

"ನಿಮ್ಮಿಂದ (ಮೊಹಮ್ಮದ್ ಸಾಹೇಬರಿಂದ) ಈ ಹಿಂದೆ ಹೇಳದ ಯಾವುದೇ ಹೊಸ ವಿಷಯವನ್ನು ಹೇಳಿಸಿಲ್ಲ. (24)

ಕುರಾನ್ ಹೇಳುತ್ತದೆ:-"ಪ್ರಪಂಚದ ಯಾವುದೇ ಸಮುದಾಯ ಸತ್ಯವನ್ನು ಗುತ್ತಿಗೆಯಾಗಿ ಪಡೆದಿಲ್ಲ ಆದ್ದರಿಂದ ಎಲ್ಲಾ ಸಮುದಾಯಗಳ ಮೂಲ ಉಪದೇಶಗಳು ಒಂದೇ ಆಗಿವೆ."

ಕುರಾನ್ ಹೇಳುತ್ತದೆ :- 'ಕುರಾನಿನ ಮೇಲೆ ನಂಬಿಕೆ ಇಲ್ಲದಿರುವ ಜನರಿದ್ದಾರೆ ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ. ಯಹೂದಿಯಾಗಿರಲಿ, ಕ್ರೈಸ್ತರಾಗಿರಲಿ, ಮುಸಲ್ಮಾನರಾಗಿರಲಿ ಅಥವ ಅವರು ಯಾರೇ ಆಗಿರಲಿ ಮಾನುಷ್ಯರಾಗಿ ಅಲ್ಲಾಹನನ್ನು ನಂಬಿ, ನಿರ್ಣಾಯಕ ದಿನ(ಆಕಿರತ್)ವನ್ನು, ಧರ್ಮವನ್ನು, ಕರ್ಮಫಲವನ್ನು ನಂಬಿ ಪುಣ್ಯ ಕೆಲಸಗಳನ್ನು ಮಾಡುತ್ತಾರೋ ಅವರಿಗೆ ಅಲ್ಲಾಹನಿಂದ ಪ್ರತಿಫಲವಿರುತ್ತದೆ. ಅವರಿಗೆ ಯಾವುದೇ ರೀತಿಯ ಭಯವಾಗಲಿ ಅಥವಾ ಯಾವುದೇ ರೀತಿಯ ವಿಷಾದವಾಗಲಿ ಇರುವುದಿಲ್ಲ. (25)

ಕುರಾನ್ ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದೆ:- "ಮಾರ್ಗದ ಅನುಸರಣೆಯ ವಿಷಯದಲ್ಲಿ ಯಾರಿಗೂ ಬಲವಂತ ಮಾಡಬಾರದು."(26)

ಇಸ್ಲಾಮಿನ ತತ್ವಗಳು

ಎಲ್ಲರ ಜೊತೆ ಸತ್ಯದಿಂದ, ಕರುಣೆಯಿಂದ ಮತ್ತು ನ್ಯಾಯದಿಂದಿರಲು ಕುರಾನಿನಲ್ಲಿ ಪದೇ-ಪದೇ ಹೇಳಲಾಗಿದೆ. ನಿಜವಾದ ಅರ್ಥದಲ್ಲಿ 'ಧರ್ಮ' ಎಂದರೆ ಬೇರೆಯವರ ಮೇಲೆ ಕರುಣೆ ತೋರುವುದೇ ವಿನಹ ಆಚರಣೆಯಲ್ಲ. "ಧರ್ಮ ಮತ್ತು ಪುಣ್ಯ"

ಎಂದರೆ ನೀವು ನಮಾಜ್ ಮಾಡುವಾಗ ನಿಮ್ಮ ಮುಖ ಪೂರ್ವದ ಕಡೆ ಇದೆಯೋ ಅಥವಾ ಪಶ್ಚಿಮದ ಕಡೆ ಇದೆಯೋ ಎಂಬುದಲ್ಲ. ಧರ್ಮವೆಂದರೆ ದೇವರನ್ನು ನಂಬುವುದು ಮತ್ತು ಅಂತಿಮ ದಿನದಲ್ಲಿ (ಆಖಿರತ್) ಮತ್ತು ದೇವದೂತರಲ್ಲಿ (ಮನಸ್ಸಿನ ಪವಿತ್ರ ಅನುಭೂತಿಗಳಲ್ಲಿ) ನಂಬಿಕೆ ಇಡುವುದು. ಪ್ರಪಂಚದ ಎಲ್ಲಾ ಪವಿತ್ರ ಪುಸ್ತಕಗಳನ್ನು ಮತ್ತು ಹಿಂದಿನ ಮತ್ತು ಮುಂದಿನ ಎಲ್ಲಾ (ಮಹಾಪುರುಷರ) ಪೈಗಂಬರರ ಅವತಾರಗಳನ್ನು ನಂಬುವುದು. ದೇವರ ಪ್ರೀತಿಯಲ್ಲಿ ತಮ್ಮ ಸಂಪತ್ತನ್ನೆಲ್ಲ ತಮ್ಮ ಸಂಬಂಧಿಕರಲ್ಲಿ ಅನಾಥರಲ್ಲಿ, ಬಡಬಗ್ಗರಲ್ಲಿ, ನಿರ್ಗತಿಕರಲ್ಲಿ, ಭಿಕ್ಷುಕರಲ್ಲಿ ಹಂಚುವುದು ಮತ್ತು ಗುಲಾಮರನ್ನು ಬಿಡಿಸಲು ತಮ್ಮ ಸಂಪತ್ತನ್ನು ಖರ್ಚು ಮಾಡುವುದು. ಭಗವಂತನಲ್ಲಿ ಬೇಡುತ್ತಿರುವುದು. ಬಡ-ಬಗ್ಗರಿಗೆ ದಾನ ಮಾಡುವುದು. ಯಾರಿಗಾದರೂ ಶಪಥ ಮಾಡಿದರೆ ಅದನ್ನು ಪೂರ್ತಿಗೊಳಿಸುವುದು. ತೊಂದರೆಯಲ್ಲಿ, ಕಷ್ಟದಲ್ಲಿ ಮತ್ತು ಕಠಿಣ ಸಮಯದಲ್ಲಿ ತಾಳ್ಮೆಯಿಂದಿರುವುದು. ಯಾರು ಹೀಗೆ ಮಾಡುತ್ತಾರೋ ಅವರೇ ನಿಜವಾದ ಉಪಾಸಕರು."(27)

"ಪರಿಶುದ್ಧ ಮನಸ್ಸಿನಿಂದ ಭಗವಂತನಲ್ಲಿ ಪ್ರಾರ್ಥಿಸುತ್ತಿರುವುದು ಮತ್ತು ಬಡವರಿಗೆ ದಾನ ಮಾಡುತ್ತಿರುವುದನ್ನು ಬಿಟ್ಟು ಜನರಿಗೆ ಬೇರೇನೂ ಆದೇಶಿಸಿಲ್ಲ. ಇದೇ ನಿಜವಾದ ಮತ್ತು ಪರಿಪೂರ್ಣ ಧರ್ಮ. (28)

ಕುರಾನ್ ಈ ಮಾತನ್ನು ಒತ್ತಿ ಹೇಳುತ್ತದೆ:- "ಕೆಡುಕಿಗೆ ಒಳತಿನಿಂದ ಉತ್ತರಿಸಿ. ಜನರೇನು ಬಯಸುತ್ತಾರೆ ಎಂಬ ಸಂಪೂರ್ಣ ಅರಿವು ಅಲ್ಲಾಹನಿಗಿದೆ. (29)

ಇಸ್ಲಾಂ ಮತ್ತು ದೇಶಪ್ರೇಮ

ಒಮ್ಮೊಮ್ಮೆ ಜನ ಹೀಗೆನ್ನುತ್ತಾರೆ ನಾನು ಮೊದಲು ಒಬ್ಬ ಮುಸಲ್ಮಾನ ನಂತರ ಹಿಂದುಸ್ತಾನ. ಹೇಗೆಂದರೆ ಇಸ್ಲಾಂ ಮತ್ತು ಹಿಂದುಸ್ತಾನದ ನಡುವೆ ತೊಡಕು ಇದ್ದಂತೆ. ಮುಹಮ್ಮದ್ ಸಾಹೇಬರು ತಮ್ಮ ಒಂದು ಹದೀಸಿನಲ್ಲಿ ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ- "ಹುಬ್ಬುಲ್ ವತನ್ ಮಿನಲ್ ಇಮಾನ್"(ಅಹಮದ್).

ಅರ್ಥ:- ದೇಶಭಕ್ತಿಯು ಧರ್ಮದ ಒಂದು ಅಂಗ. ಮತ್ತೆ ದೇಶ ಅಂದರೆ? ಎಲ್ಲಾ ಸಮುದಾಯದವರು ಒಗ್ಗಟ್ಟಿನಿಂದ ಮತ್ತು ಸೌಹಾರ್ದತೆಯಿಂದ ಇದ್ದು ಏಕಮಾನವರಾಗುವುದು. 'ಇಸ್ಲಾಂ' ಅಂದರೆ ಎಲ್ಲ ಧರ್ಮಗಳ ಎಲ್ಲ ಜಾತಿಗಳ ಒಗ್ಗಟ್ಟಿನ ಹೆಸರು. ತನ್ನಲ್ಲಿ ಎಲ್ಲವನ್ನೂ ಮತ್ತು ಎಲ್ಲದರಲ್ಲಿ ಅಲ್ಲಾಹನನ್ನು ನೋಡುವುದರ ಹೆಸರೇ "ಇಸ್ಲಾಂ". ಎಲ್ಲರ ಗಳಿಕೆಗಳ ಮತ್ತು ಎಲ್ಲರ ಒಳಿತಿನ ಹೆಸರೇ" ಇಸ್ಲಾಂ".

ಇಸ್ಲಾಂನ ಈ ವಿರಾಟ ರೂಪವನ್ನು ನೋಡಿ ಸೂಫಿ ಸಂತರ ಸರದಾರ ಮೌಲಾನಾ ರೂಮಿ ಹೀಗೆ ಹೇಳುತ್ತಾನೆ:-

ಶಾದ್‌ಭಾಷ್ ಎ ಇಷ್ಕ್ ಕುಶ ಸೌದಾ-ಎ ಮಾ,
ಏ ದವಾಯೆ ಜುಮ್ಲ ಇಲ್ಲತ್ ಹಾ-ಏ ಮಾ ।
ಏ ತೂ ಆಫ್ಲಾತುಂ-ಒ-ಜಾಲೀನೂಸ್ -ಏ ಮಾ,
ಏಇಲಾಜೆ ನಖ್ವತ್-ಒ ನಾಮೂಸ್-ಏ ಮಾ ।
ವೇದ್ ಅವಸ್ಥ, ಅಲ್ ಕುರಾನ್ ಇಂಜೀಲ್ ನೀಜ್,
ಕಾಬಾ-ಒ, ಬುತ್ ಖಾನಾ-ಒ ಆತಾಷ್-ಕದಾ ।
ಕಲ್ಬೇ ಮನ್ ಮಕ್ಬೂಲ್ ಕರದಾ ಜಮ್ಲಾ ಚೀಜ್,
ಚೂಂ ಮ-ರಾ ಜುಜ್ ಇಷ್ಕ ನೈ ದೀಗರ್ ಖುದಾ ।

ಅರ್ಥ:- ಹೇ! ಪ್ರೇಮವೇ ಅಭಿನಂದನೆ.
ನನ್ನೆಲ್ಲ ಹುಚ್ಚುತನಕೆ ಕಾರಣ ನೀನೇ.
ನನ್ನೆಲ್ಲಾ ರೋಗಗಳ ಔಷಧಿ ನೀನೇ.
ನನ್ನ ಆತ್ಮವನ್ನು ಸರಿದಾರಿಗೆ ನಡೆಸುವ ಆಧ್ಯಾತ್ಮಿಕ ಚಮತ್ಕಾರಿ ನೀನೆ.
ನನ್ನ ರೋಗಗಳನ್ನು ಸರಿಪಡಿಸುವ ಪ್ರಚಂಡ ಪಂಡಿತ ನೀನೇ.
ನನ್ನ ಅಹಂಕಾರದ ನನ್ನ ದರ್ಪದ ಚಿಕಿತ್ಸೆ ನೀನೇ.
ಹಿಂದುಗಳ ವೇದ, ಪಾರ್ಸಿಗಳ ಜೇಂದ ಅವೆಸ್ತ,
ಮುಸಲ್ಮಾನರ ಕುರಾನ್ ಮತ್ತು ಕ್ರೈಸ್ತರ ಇಂಜೀಲ್.
ಮುಸಲ್ಮಾನರ ಕಾಬ, ಹಿಂದುಗಳ ದೇವಸ್ಥಾನ, ಮತ್ತು ಪಾರಸಿಗಳ ಮಂದಿರ.
ಇವೆಲ್ಲವನ್ನೂ ನನ್ನ ಹೃದಯ ಸ್ವೀಕರಿಸಿಯಾಗಿದೆ.
ಅದಾಗ್ಯೂ, ಈಗ ನನಗೆ ಪ್ರೀತಿಯನ್ನು ಬಿಟ್ಟು ಬೇರೆ ಯಾವ ದೇವರು ಕಾಣುತ್ತಿಲ್ಲ.

ಮೂಲ : ಪರ್ಶಿಯನ್, ಸರ್ದಾರ್ ಮೌಲಾನಾ ರೂಮಿ
ಕನ್ನಡಾನುವಾದ : ಷಾಕೀರಾ ಖಾನಂ

ವಸುಧೈವ ಕುಟುಂಬಕಂ

ಇದೇ ಸಾರ್ವತ್ರಿಕ ಭಾವನೆಯನ್ನು ಪ್ರತಿಪಾದಿಸುತ್ತಾ ಉಪನಿಷತ್ತಿನ ಋಷಿ ಹೀಗೆ ಹೇಳಿದ್ದಾನೆ:-

ಅಯಂ ನಿಜ: ಪರೋವೇತಿ, ಗಣನಾ ಲಘುಚೇತಸಾಂ ।
ಉದಾರಚರಿತಾನಾಂತು ವಸುದೈವ ಕುಟುಂಬಕಂ ।

ಇದರ ಅರ್ಥ:-"ಇದು ನನ್ನದು-ಇದು ನಿನ್ನದು ಎಂದು ಲೆಕ್ಕ ಹಾಕುವವರು ಸಂಕುಚಿತ ಮನಸ್ಸಿನವರು. ಯಾರ ಹೃದಯ ವಿಶಾಲವಾಗಿರುತ್ತದೋ ಅವರಿಗೆ ಇಡೀ ಭೂಮಿ(ಇಡೀ ಮನು ಕುಲ)ಒಂದು ಕುಟುಂಬದಂತೆ. "ವಿಶೇಷವೇನೆಂದರೆ ಎಲ್ಲಾ ಧರ್ಮಗಳ ತತ್ವಗಳು ಒಂದೇ. ಈಶ್ವರ್-ಅಲ್ಲಾಹ ಒಬ್ಬನೇ. ಅವನನ್ನು ಯಾವ ಹೆಸರಿನಿಂದಾದರೂ ಕರೆಯಬಹುದು.

ಎಲ್ಲರೂ ಪರಸ್ಪರ ಸಹೋದರ-ಸಹೋದರಿಯರು. ಧರ್ಮಗಳ ಅನುಯಾಯಿಗಳು ಧರ್ಮದ ತತ್ವಗಳ ಗೂಡಾರ್ಥಗಳನ್ನು ಮರೆತಾಗಲೇ ಜಗಳಗಳಾಗುವುದು. ಇಂದು ನಮ್ಮ ಮುಂದಿರುವ ದೊಡ್ಡ ಸಮಸ್ಯೆ ಏನೆಂದರೆ ಹಿಂದೂ ನಾಯಕರಿಗೆ ಮತ್ತು ಗುರುಗಳಿಗೆ ಹಿಂದೂ ಧರ್ಮದ ಮೂಲ ತತ್ವಗಳ ಅರಿವೇ ಇಲ್ಲ ಮತ್ತು ಮುಸಲ್ಮಾನರು ತಮ್ಮ ಇಸ್ಲಾಂ ಧರ್ಮದ ಮೂಲ ತತ್ವಗಳಿಂದ ಅಪರಿಚಿತರಾಗಿರುವುದು. ಇಂತಹವರು ಇಂದು ಹಿಂದೂ ಧರ್ಮರಕ್ಷಕರೆಂಬ ಮತ್ತು ಇಸ್ಲಾಮಿನ ಹಿತಚಿಂತಕರೆಂಬ ದಾವೆ ಹೂಡುತ್ತಿರುವುದು. ನಾವು ವಂಚಕ ರಾಜಕಾರಣಿಗಳ ಹಿಡಿತದಲ್ಲಿ ಸಿಲುಕಿ ನಮ್ಮನ್ನು, ನಮ್ಮ ಧರ್ಮವನ್ನು, ಧರ್ಮದ ಅನುಯಾಯಿಗಳನ್ನು, ದೇಶವನ್ನು ಹಾಳು ಮಾಡಿ ಹಿಂದೂ ರಾಷ್ಟ್ರ ಎಂದು ಗುಲ್ಲೆಬ್ಬಿಸಿ ಎಲ್ಲವನ್ನೂ ನಾಶ ಮಾಡಲು ಪ್ರಯತ್ನಿಸುತ್ತಿರುವುದು. ಇಂದು ಗಾಂಧೀಜಿಯ ಆ ಗುಂಗನ್ನು ಮತ್ತೊಮ್ಮೆ ಪುನರಾವರ್ತಿಸಬೇಕಾಗಿದೆ.

ಈಶ್ವರ ಅಲ್ಲಾಹ ತೇರೆ ನಾಮ್ ।
ಸಬಕೋ ಸನ್ಮತಿ ದೇ ಭಗವಾನ್ ॥

ಈ ಹಿನ್ನೆಲೆಯಲ್ಲಿ ಗಾಂಧೀಜಿ ಅವರು ಎಲ್ಲ ಜಾತಿ ಧರ್ಮಗಳನ್ನು ಆಳವಾಗಿ ಅಧ್ಯಯನ ಮತ್ತು ಮನನ ಮಾಡಿ ಧರ್ಮಗಳ ಮೂಲ ಸಿದ್ಧಾಂತಗಳನ್ನು ತಮ್ಮ ಜೀವನದಲ್ಲೂ ಅಳವಡಿಸಿಕೊಂಡು ಅದನ್ನು ಪಾಲಿಸುತ್ತಿದ್ದರು. ಅವರು ತಮ್ಮ ಕೊನೆ ಉಸಿರಿರುವವರೆಗೂ ಜನರಿಗೆ ಧರ್ಮದ ಮೂಲ ತತ್ವಗಳನ್ನು ಮನವರಿಕೆ ಮಾಡಲು ಪ್ರಯತ್ನಿಸಿದರು. ಧರ್ಮದ ಹುಚ್ಚುತನದ ಬಗ್ಗೆ ಎಚ್ಚರಿಸಿದರು. ಧರ್ಮದ ಹುಚ್ಚುತನ ನಮ್ಮನ್ನು ಮಹಾನಾಶದೆಡೆಗೆ ಕೊಂಡ್ಯೊಯುತ್ತಿದೆ ಎಂದು ಗೊತ್ತಾದಾಗ ಅವರು ಅ ಕೋಮುವಾದದ ಬೆಂಕಿಯಲ್ಲಿ ಮತ್ತು ಕೋಮುಜ್ವಾಲೆಯಲ್ಲಿ ಅಗ್ನಿಪರೀಕ್ಷೆ ನೀಡಿದರು ಏಕೆಂದರೆ ಪ್ರಜೆಗಳು ಧರ್ಮದ ಮೂಲ ಸಿದ್ಧಾಂತಗಳನ್ನು ಅರಿತು ಮಾನವೀಯತೆ ಮತ್ತು ಮನುಷ್ಯತ್ವವನ್ನು ಉಳಿಸಲಿ ಎಂದು.

ಗಾಂಧೀಜಿಯು ದೇಶದ ಸ್ವಾತಂತ್ರ್ಯ ಸಂಗ್ರಾಮದ ಮುಂದಾಳತ್ವವನ್ನು ವಹಿಸಿಕೊಂಡು ಮತ್ತು ಹುತಾತ್ಮರಾಗುವವರೆಗೂ ನಮಗೆ ಸೌಹಾರ್ದತೆ ಮತ್ತು ಪಥಭ್ರಷ್ಟತೆಯಿಂದ ರಕ್ಷಿಸಲು ಹೇಳಿರುವುದೆಲ್ಲವನ್ನು ನಾನು ಮುಂದೆ ವಿವರಿಸಲು ಪ್ರಯತ್ನಿಸಿದ್ದೇನೆ.

ಗಾಂಧೀಜಿ ಮತ್ತು ಹಿಂದೂ-ಮುಸ್ಲಿಂರ ಸೌಹಾರ್ದತೆ

ಮಾರ್ಚ್ 1920ರ ಜಲಿಯನ್‌ವಾಲಾಬಾಗ್ ಹತ್ಯಾಕಾಂಡದ ನಂತರ ಗಾಂಧೀಜಿ ಅವರು ಭಾರತ ದೇಶದ ಸ್ವಾತಂತ್ರ್ಯ ಸಂಗ್ರಾಮದ ಮುಂದಾಳತ್ವವನ್ನು ವಹಿಸಿಕೊಂಡು ಇಡೀ ದೇಶವನ್ನು ಸತ್ಯಾಗ್ರಹದ ಆರಂಭಿಕ ರೂಪವಾಗಿ ಮತ್ತು ಅಹಿಂಸಾತ್ಮಕ ಅಸಹಯೋಗ ಆಂದೋಲನವನ್ನು ದೇಶದ ಮುಂದಿಟ್ಟರು. ಗಾಂಧೀಜಿ ಅವರು ಸತ್ಯ ಮತ್ತು ಅಹಿಂಸೆಗೆ ಒತ್ತು ಕೊಟ್ಟು ಒಂದೆಡೆ ಪಂಚ ಬಹಿಷ್ಕಾರವನ್ನು ಆಯೋಜಿಸಿದರೆ ಇನ್ನೊಂದೆಡೆ ಪಂಚಸೂತ್ರವನ್ನು ರಚನಾತ್ಮಕ ಕಾರ್ಯಗಳೇ ಸತ್ಯಾಗ್ರಹದ ಮೂಲ ಎಂದು ಹೇಳಿದರು.

ಗಾಂಧೀಜಿಯ ಐದು ರಚನಾತ್ಮಕ ಕಾರ್ಯಗಳು

1. ಕೋಮು ಸೌಹಾರ್ದತೆ
2. ಅಸ್ಪೃಶ್ಯತೆಯನ್ನು ಹೋಗಲಾಡಿಸುವುದು
3. ಮಧ್ಯಪಾನ ನಿಷೇಧ
4. ಖಾದಿ ಬಳಕೆ
5. ಗ್ರಾಮೋದ್ಯೋಗ

ಗಾಂಧೀಜಿ ಅವರು, ಅವರ ಎಲ್ಲ ರಚನಾತ್ಮಕ ಕಾರ್ಯಗಳಲ್ಲಿ ಪ್ರಾಥಮಿಕವಾಗಿ ಕೋಮುಸೌರ್ದತೆಗೆ ಆದ್ಯತೆ ನೀಡಿದರು. 1931ರಲ್ಲಿ ಗಾಂಧೀಜಿ ಸ್ವಯಂ ಸೇವಕರಿಗಾಗಿ ರಚಿಸಿದ ಪ್ರತಿಜ್ಞಾಪತ್ರದಲ್ಲಿ ಅಹಿಂಸೆಯ ನಂತರದ ಮೊದಲ ಶಪಥ "ನಾನು ಭಾರತದಲ್ಲಿರುವ ಎಲ್ಲಾ ಸಂಪ್ರದಾಯಗಳು ಹಿಂದೂ, ಮುಸಲ್ಮಾನ್, ಪಾರ್ಸಿ, ಕ್ರೈಸ್ತ, ಯಹೂದಿ ಮತ್ತು ಭಾರತದಲ್ಲಿ ನೆಲೆಸಿರುವ ಎಲ್ಲಾ ಜಾತಿಗಳ ಒಗ್ಗಟ್ಟನ್ನು ಗಟ್ಟಿಗೊಳಿಸುವಲ್ಲಿ ವಿಶ್ವಾಸವಿಡುತ್ತೇನೆ ನಾನು ಒಗ್ಗಟ್ಟಿಗಾಗಿ ಸದಾ ಕ್ರಿಯಾಶೀಲನಾಗಿರುತ್ತೆನೆ" ಎಂದಾಗಿತ್ತು. (30)

1930ರ ಸತ್ಯಾಗ್ರಹದ ಪ್ರತಿಜ್ಞಾ ಪತ್ರದಲ್ಲಿ ಇದರ ಸ್ಪಷ್ಟ ಆದೇಶವಿತ್ತು:-

"ಯಾವ ಸತ್ಯಾಗ್ರಹಿಯೂ ಉದ್ದೇಶಪೂರ್ವಕವಾಗಿ ಸಾಂಪ್ರದಾಯಿಕ ದಂಗೆಗೆ ಕಾರಣವಾಗುವುದಿಲ್ಲ. ಒಂದು ವೇಳೆ ಸಾಂಪ್ರದಾಯಿಕ ದಂಗೆಗಳೇನಾದರು ಆದಲ್ಲಿ ಅವರು ಯಾರ ಪರವನ್ನು ವಹಿಸುವುದಿಲ್ಲ. ಎಲ್ಲಿ ನ್ಯಾಯವಿರುತ್ತದೋ

ಅವರಿಗೆ ಸಹಾಯ ಮಾಡುತ್ತಾರೆ. ಅವನು ಹಿಂದೂ, ಮುಸಲ್ಮಾನ ಅಥವ ಬೇರೆ ಸಂಪ್ರದಾಯದವನೇ ಇರಲಿ ಅವನೊಂದಿಗೆ ಕರುಣೆಯಿಂದ ವ್ಯವಹರಿಸುತ್ತಾರೆ. ಒಂದು ವೇಳೆ ಅವರ ಮೇಲೆ ಹಿಂದುಗಳು ದಾಳಿ ಮಾಡಿದರೆ ಪ್ರಾಣವನ್ನು ಪಣವಾಗಿಟ್ಟು ಅವರನ್ನು ರಕ್ಷಿಸುತ್ತಾರೆ. ಒಂದು ವೇಳೆ ಹಿಂದೂಗಳ ಮೇಲೆ ದಾಳಿಯಾದರೆ ದ್ವೇಷವನ್ನು ಮರೆತು ಹಿಂದೂಗಳನ್ನು ರಕ್ಷಿಸಲು ತಮ್ಮ ಪ್ರಾಣವನ್ನು ಬಲಿಕೊಡುತ್ತಾರೆ. ಸಾಂಪ್ರದಾಯಿಕ ದಂಗೆಯ ಕಾರಣಗಳನ್ನು ಹತ್ತಿಕ್ಕಲು ಮತ್ತು ಕೋಮು ಸೌಹಾರ್ದತೆಯನ್ನು ಕಾಪಾಡಲು ತಮ್ಮ ಶಕ್ತಿಮೀರಿ ಕೆಲಸ ಮಾಡುತ್ತಾರೆ".

ಗಾಂಧೀಜಿ ಅವರು ಕೋಮು ಸೌಹಾರ್ದತೆಯನ್ನು ವ್ಯಾಖ್ಯಾನಿಸುತ್ತಾ ಹೀಗೆ ಹೇಳಿದರು:– "ಸಾಂಪ್ರದಾಯಿಕ ಒಗ್ಗಟ್ಟು ಹೃದಯಗಳ ಅವಿರ್ಭಾವ ಒಗ್ಗಟ್ಟು" (31)

ಬಹುಸಂಖ್ಯಾತರಿರುವ ಕಾರಣ ಹಿಂದುಸ್ಥಾನ ಬರೀ ಹಿಂದೂಗಳ ದೇಶ ಎಂದು ಹೇಳುತ್ತಿದ್ದ, ಹಿಂದೂ ಪುರೋಹಿತಶಾಹಿಗಳ ಸಂಕೀರ್ಣತೆಯನ್ನು ಗಾಂಧೀಜಿ ತಪ್ಪು ಎಂದು ನಂಬಿದ್ದರು. ಗಾಂಧೀಜಿ ಅವರು ಈ ವಾದವನ್ನು ಖಂಡಿಸುತ್ತಾ ಹೀಗೆ ಹೇಳಿದರು:–

"ಹಿಂದೂಸ್ತಾನದಲ್ಲಿ ಹುಟ್ಟಿ ಬೆಳೆದು, ಬೇರೆ ಯಾವುದೇ ದೇಶವನ್ನು ಅವಲಂಬಿಸಿಲ್ಲದವರೆಲ್ಲರೂ ಈ ದೇಶದ ಪ್ರಜೆಗಳು. ಆದ್ದರಿಂದ ಹಿಂದುಸ್ತಾನ, ಎಷ್ಟು ಹಿಂದುಗಳದ್ದೋ ಅಷ್ಟೇ ಪಾರ್ಸಿ, ಯಹೂದಿ' ಕ್ರೈಸ್ತ, ಮುಸಲ್ಮಾನ ಮತ್ತು ಹಿಂದುಯೇತರರದ್ದೂ. ಸ್ವತಂತ್ರ ಭಾರತದಲ್ಲಿ ಹಿಂದೂಗಳದ್ದಲ್ಲ ಹಿಂದುಸ್ತಾನಿಗಳ ಆಡಳಿತವಿರುತ್ತದೆ ಮತ್ತು ಅದರ ಮೂಲ, ಧರ್ಮ ಅಥವಾ ಸಾಂಪ್ರದಾಯಿಕ ಬಹುಮತವಾಗಿರದೆ ಭೇದಭಾವವಿಲ್ಲದ ರಾಷ್ಟ್ರದ ಜನಪ್ರತಿನಿಧಿಗಳ ಬಹುಮತದ ಆಡಳಿತವಿರುತ್ತದೆ. ಸ್ವತಂತ್ರ ಹಿಂದೂಸ್ಥಾನದಲ್ಲಿ ಜನರು ತಮ್ಮ ಸೇವೆ ಮತ್ತು ದಕ್ಷತೆಯ ಮೇಲೆ ಆಯ್ಕೆಯಾಗುವರು. ಜಾತಿ ಅದು ಒಂದು ವೈಯಕ್ತಿಕ ವಿಚಾರ. ರಾಜಾಡಳಿತದಲ್ಲಿ ಅದರ ಯಾವುದೇ ಮಹತ್ವವಿರುವುದಿಲ್ಲ. (32)

ಹಿಂದೂ ರಾಜ್ಯವಲ್ಲ, ಹಿಂದೂಸ್ತಾನಿ ರಾಜ್ಯ

ಗಾಂಧೀಜಿ ಅವರ ಆದರ್ಶದ ಸ್ವರಾಜ್ಯ ಹಿಂದೂ ರಾಜ್ಯವಲ್ಲ, ಹಿಂದುಸ್ತಾನಿ ರಾಜ್ಯವಾಗಿತ್ತು. ಇದನ್ನು ಸ್ಪಷ್ಟಪಡಿಸುತ್ತಾ ಹೀಗೆ ಹೇಳಿದ್ದಾರೆ:–

"ಭಾರತ ಸ್ವತಂತ್ರಗೊಂಡ ನಂತರ ಬಹುಸಂಖ್ಯಾತ ಸಂಪ್ರದಾಯದ ಹಿಂದುಗಳ ರಾಷ್ಟ್ರವಾಗುತ್ತದೆ ಎಂದು ಹೇಳುವುದಕ್ಕಿಂತ ದೊಡ್ಡ ತಪ್ಪು ಬೇರೊಂದಿಲ್ಲ. ಒಂದು ವೇಳೆ ಹೀಗೇನಾದರೂ ಆದರೆ ನಾನು ಒಬ್ಬಂಟಿಯಾದರೂ ಸರಿಯೇ ಇಂತಹ ಸ್ವಾತಂತ್ರ್ಯವನ್ನು ಧಿಕ್ಕರಿಸಿ ಇದರ ವಿರುದ್ಧ ನನ್ನ ಸ್ವಂತ ಶಕ್ತಿಯಿಂದ ಹೋರಾಡುತ್ತೇನೆ.

ನನ್ನ ಕನಸಿನಂತೆ ಭಾರತ ಸ್ವತಂತ್ರವಾದರೆ ಅದು ಎಲ್ಲರ ಸ್ವತಂತ್ರ ಭಾರತವಾಗುವುದು. ಆ ಸ್ವತಂತ್ರ ಭಾರತದ ಮಂತ್ರಿಗಳೆಲ್ಲಾ ಹಿಂದುಗಳಿರಲಿ, ಮುಸಲ್ಮಾನರಿರಲಿ ಅಥವಾ ಸಿಖ್ಖರಿರಲಿ ಮತ್ತು ಕೌನ್ಸಿಲ್ ಅಸೆಂಬ್ಲಿಯಲ್ಲಿ ಬರಿ ಮುಸಲ್ಮಾನ, ಸಿಖ್ ಮತ್ತು ಬೇರೆ ಸಮುದಾಯದ ಚುನಾಯಿತ ಪ್ರತಿನಿಧಿಗಳೇ ಇರಲಿ. ಅದು ಬೇರೆ ಪ್ರಶ್ನೆ. ಆವರಿಗೂ ಸಹ ಎಲ್ಲರಂತೆ ಒಂದೇ ನ್ಯಾಯ ಮಾಡಬೇಕಾಗುತ್ತದೆ. (33)

ಮಾನವ ಜಾತಿಯ ಮೂಲ ಒಂದೇ

ಗಾಂಧೀಜಿ ಅವರು ಮಾನವ ಜಾತಿಯ ಮೂಲ ಒಗ್ಗಟ್ಟಿನಲ್ಲಿ ವಿಶ್ವಾಸವಿಟ್ಟು ಹೀಗೆ ಹೇಳುತ್ತಿದ್ದರು:–

ನಾನು ಮಾನವ ಜಾತಿಯ ಮೂಲ ಒಗ್ಗಟ್ಟಿನಲ್ಲಿ ಮತ್ತು ಸಮಾನತೆಯಲ್ಲಿ ವಿಶ್ವಾಸವಿಡುತ್ತೇನೆ ಏಕೆಂದರೆ ನನಗೆ ಗೊತ್ತು ಈಶ್ವರ ಅಲ್ಲಾಹ ಒಂದೇ ಎಂದು. ಅವನೇ ಎಲ್ಲರ ದೇವರು. ಅಲ್ಲಾಹನ ಭಕ್ತರಲ್ಲಿ ಮೇಲು–ಕೀಳೆಂಬ ಭೇದ–ಭಾವ ಇರುತ್ತದೆ ಎಂದು ನಾನು ನಂಬುವುದಿಲ್ಲ. ಆ ಶುಭದಿನ ಬಂದಾಗ ರೈಲ್ವೆಸ್ಟೇಷನ್‌ನಲ್ಲಿ 'ಹಿಂದುವಿನ ನೀರು', 'ಮುಸಲ್ಮಾನ ನೀರು', 'ಹಿಂದುವಿನ ಚಹಾ', 'ಮುಸಲ್ಮಾನ ಚಾಹ' ಎಂಬ ನಾಚಿಕೆಗೇಡು ಧ್ವನಿಗಳು ಕೇಳಲು ಸಿಗುವುದಿಲ್ಲ. ಆಗ ಶಾಲಾ ಕಾಲೇಜುಗಳಲ್ಲಿ ಹಿಂದೂಗಳಿಗೆ ಮತ್ತು ಹಿಂದುಯೇತರರಿಗೆ ಬೇರೆ–ಬೇರೆ ಕೊಠಡಿಗಳಾಗಲಿ ಅಥವಾ ಬೇರೆ–ಬೇರೆ ತಟ್ಟೆಗಳಾಗಲಿ ಇರುವುದಿಲ್ಲ. ಸಮುದಾಯಗಳಿಗನುಸಾರ ಬೇರೆ–ಬೇರೆ ಶಾಲಾ–ಕಾಲೇಜುಗಳಾಗಲಿ ಅಥವಾ ಧರ್ಮಗಳ ಆಧಾರದ ಬೇರೆ–ಬೇರೆ ಆಸ್ಪತ್ರೆಗಳಾಗಲಿ ಇರುವುದಿಲ್ಲ. (34)

ಗಾಂಧೀಜಿ ಎಲ್ಲಾ ಸಮುದಾಯಗಳ ಮೂಲಸಿದ್ಧಾಂತಗಳಲ್ಲಿ ವಿಶ್ವಾಸವಿಟ್ಟು ಹೀಗೆ ಹೇಳುತ್ತಾರೆ:–

ನನ್ನ ಆಸೆ ಏನೆಂದರೆ ಮನುಷ್ಯರ ನಡುವೆ 'ಹಿಂದೂ, ಮುಸಲ್ಮಾನ, ಕ್ರೈಸ್ತ, ಫಾರ್ಸಿ ಮತ್ತು ಯಹೂದಿಯರೆಲ್ಲರು ಮನುಷ್ಯರೇ ಎಂಬ ಭಾವನೆ ಹುಟ್ಟಿ ಎಲ್ಲರೂ ಒಂದಾಗಿ ಇರಲಿ ಎಂದು. ನನಗೆ ಪ್ರಪಂಚದ ಎಲ್ಲ ಜಾತಿಗಳ ಮೂಲಸಿದ್ಧಾಂತಗಳಲ್ಲಿ ನಂಬಿಕೆ ಇದೆ. ಮನುಷ್ಯರ ನಡುವೆ ಸದಾ ಸಹೋದರ ಭಾವನೆ ಇರಲಿ ಎಂಬುದೇ ನನ್ನ ಅಂತರಾಳದ ಆಸೆ. ನನಗೆ ನಂಬಿಕೆ ಇದೆ, ಎಲ್ಲಾ ಧರ್ಮಗಳನ್ನು ಭಗವಂತನೇ ಮಾಡಿರುವುದು. ಎಲ್ಲರೂ ಹೋಗಿ ಸೇರುವುದು ಆ ಭಗವಂತನಲ್ಲೇ. ಒಂದು ವೇಳೆ ನಾವು ಬೇರೆ ಸಮುದಾಯಗಳ ಪುಸ್ತಕಗಳನ್ನು ಆ ಸಮುದಾಯದವರ ದೃಷ್ಟಿಯಿಂದ ಓದಿದರೆ ತಿಳಿಯುತ್ತದೆ ಎಲ್ಲಾ ಸಮುದಾಯಗಳ ಮೂಲ ಒಂದೇ ಎಂದು. (35)

ಹಿಂದುಸ್ತಾನಿ ಸಂಸ್ಕೃತಿ

ಗುಜರಾತ್ ವಿದ್ಯಾಪೀಠದ ಭಾಷಣದಲ್ಲಿ ಗಾಂಧೀಜಿ ಹೀಗೆ ಹೇಳಿದ್ದಾರೆ:-

'ನನ್ನ ಮನೆ ಎತ್ತರವಾದ ಗೋಡೆಗಳಿಂದ ಸುತ್ತುವರಿದು ನಾಲ್ಕೂ ಕಡೆಯ ಕಿಟಕಿಗಳು ಮುಚ್ಚಿರಲಿ ಎಂದು ನಾನು ಬಯಸುವುದಿಲ್ಲ. ನನ್ನ ಮನೆಯ ನಾಲ್ಕು ಕಡೆ ಎಲ್ಲಾ ದೇಶಗಳ ಸಂಸ್ಕೃತಿಗಳ ಶುದ್ಧ ಗಾಳಿ ಸ್ವತಂತ್ರವಾಗಿ ಬೀಸುತ್ತಿರಲಿ. ಆದರೆ ಯಾವುದೋ ಒಂದು ಗಾಳಿ ನನ್ನನ್ನು ಬುಡಮೇಲು ಮಾಡಲಿ ಎಂದು ನಾನು ಬಯಸುವುದಿಲ್ಲ.' ಜೀವನವನ್ನು ಹಳೇ ಸಂಸ್ಕೃತಿಗಳಂತೆ ನಡೆಸುವುದು ಅಥವಾ ಅದನ್ನೇ ಪುನರಾವರ್ತಿಸುತ್ತಿರುವುದು ಗುಜರಾತ್ ವಿದ್ಯಾ ಪೀಠದ ಉದ್ದೇಶವಲ್ಲ. ಇದಕ್ಕೆ ಬದಲಾಗಿ ಬೇರುಗಳು ಪ್ರಾಚೀನ ಪರಂಪರೆಯಲ್ಲೇ ಇದ್ದು, ಭವಿಷ್ಯದ ಮತ್ತು ವರ್ತಮಾನದ ಅನುಭವಗಳಿಂದ ಶೃಂಗರಿಸಲ್ಪಟ್ಟ ಒಂದು ಹೊಸ ಸಂಸ್ಕೃತಿಯನ್ನು ಗುಜರಾತ್ ವಿದ್ಯಾಪೀಠ ಹುಟ್ಟುಹಾಕಲು ಬಯಸುತ್ತಿದೆ. ಈ ವಿದ್ಯಾಪೀಠ, ಹಿಂದುಸ್ತಾನದಲ್ಲಿ ಬಂದು ನೆಲೆಸಿ ಹಿಂದೂಸ್ತಾನದ ಜನಜೀವನದ ಮೇಲೆ ಪ್ರಭಾವ ಬೀರಿರುವ ಮತ್ತು ದೇಶದ ಆಧ್ಯಾತ್ಮಿಕತೆಯ ಪ್ರಭಾವಕ್ಕೊಳಗಾಗಿರುವ ಆ ಎಲ್ಲಾ ಸಂಸ್ಕೃತಿಗಳ ಸಮನ್ವಯ ಮತ್ತು ಕೂಡುವಿಕೆಯ ಪರವಾಗಿರುತ್ತದೆ. ದೈವದತ್ತವಾದ ನಮ್ಮ ಸಮನ್ವಯವು ಸ್ವದೇಶೀಯವಾಗಿರುತ್ತದೆ. ಇದರಲ್ಲಿ ಪ್ರತಿಯೊಂದು ಸಂಸ್ಕೃತಿಗೂ ಆದ್ಯತೆ ನೀಡಲಾಗುತ್ತದೆ. ಈ ಸಮನ್ವಯವು ಅಮೇರಿಕ ಸಂಸ್ಕೃತಿಯಂತಿರುವುದಿಲ್ಲ. ಅವರ ಆ ಸಮನ್ವಯವು ಎಲ್ಲಾ ರಾಗ ತಾಳಗಳನ್ನು ಸೇರಿಸಿ ಒಂದು ಸುಮಧುರ ರಾಗವನ್ನು ಬೆಸೆಯುವ ಬದಲು ಬಲವಂತದ ಒಂದು ಆಡಂಬರಯುತ ಸಂಸ್ಕೃತಿಯನ್ನು ಸ್ಥಾಪಿಸಿ ಬೇರೆಯವರ ಸಂಸ್ಕೃತಿಯನ್ನು ತಿಂದು ತೇಗಿಬಿಟ್ಟಿದೆ. (36)

ಹೃದಯದ ವೇದನೆ

1947ರಮೇ ಜೂನ್ ತಿಂಗಳ ಬಿಸಿಲಿನಿಂದ ದೆಹಲಿ ಬೆಂಕಿಯ ಕುಲುಮೆಯಾಗಿತ್ತು. ಇಪ್ಪತ್ತ ನಾಲ್ಕು ಘಂಟೆ ಬಿಸಿ ಗಾಳಿ ಬೀಸುತ್ತಿತ್ತು. ಉರಿ ಬಿಸಿಲಲ್ಲೂ ಗಾಂಧೀಜಿಗೆ ವಿಶ್ರಾಂತಿ ಇರಲಿಲ್ಲ. ತಲೆಯ ಮೇಲೆ ಒದ್ದೆ ಬಟ್ಟೆ ಹಾಕಿಕೊಂಡು ಬೆಳಗಿನಿಂದ ಸಂಜೆವರೆಗೂ ಕೆಲಸದಲ್ಲಿ ನಿರತರಾಗಿದ್ದರು. ಉರಿಬಿಸಿಲು ಗಾಂಧೀಜಿ ಅವರ ಆರೋಗ್ಯವನ್ನು ಕೆಡಿಸದಿದ್ದರೂ ಅಂದಿನ ಕೋಮು ದಂಗೆಗಳ ಬೆಂಕಿಯು ಅವರ ಆರೋಗ್ಯವನ್ನು ಕೆಡಿಸಿತ್ತು. ಕೋಮು ದ್ವೇಷವನ್ನು ಹರಡುತ್ತಿದ್ದ ಈ ಜ್ವಾಲೆಯನ್ನು ಅಹಿಂಸೆಯಿಂದ ಹೇಗೆ ನಿಯಂತ್ರಿಸಬೇಕು ಎಂಬ ಪ್ರಶ್ನೆಗೆ ಅವರ ಮನಸ್ಸು ಉತ್ತರ ಬಯಸುತ್ತಿತ್ತು.

ಗಾಂಧೀಜಿಯ ಅಂಚೆ ಚೀಲದಲ್ಲಿರುತ್ತಿದ್ದ ಹಿಂದೂ ಪುರೋಹಿತಶಾಹಿಗಳ ಪತ್ರಗಳಲ್ಲಿ–'ಮಹಮ್ಮದ್ ಗಾಂಧಿ ಜಿನ್ನಾದಾಸ್' ಎಂದು ಬರೆದಿರುತ್ತಿತ್ತು. ಇದನ್ನು ನೋಡಿ ಮುಗುಳು ನಗುತ್ತಾ ಗಾಂಧೀಜಿ ಹೀಗೆ ಹೇಳುತ್ತಿದ್ದರು. ನನಗೆ ಜನರೇ 'ಮಹಾತ್ಮ' ಎನ್ನುವ ಬಿರುದು ನೀಡಿರುವುದು. ಅದೇ ಜನ ಈಗ ನನಗೆ ಹೊಸ ಬಿರುದನ್ನು ನೀಡುತ್ತಿದ್ದಾರೆ ಜನರ ಈ ಕಾಣಿಕೆಯನ್ನು ನಾನು ಪ್ರೀತಿಯಿಂದ ಸ್ವೀಕರಿಸುತ್ತೇನೆ.

ಈ ಪತ್ರಗಳನ್ನು ಉಲ್ಲೇಖಿಸುತ್ತಾ ಅವರು ಪ್ರಾರ್ಥನಾ ಸಭೆಯೊಂದರಲ್ಲಿ ಹೀಗೆ ಹೇಳಿದರು:–

'ಪ್ರಪಂಚದ ಧರ್ಮಗುರುಗಳೆಲ್ಲರೂ ಸತ್ಯದ ಸಂದೇಶವನ್ನೇ ಸಾರಿರುವುದು. ನಾನು ಅದನ್ನೇ ನಂಬುವುದು. ನನ್ನನ್ನು ನಿಂದಿಸುವವರ ಬಗ್ಗೆ ನನ್ನ ಮನಸ್ಸಿನಲ್ಲಿ ಕೋಪ ಬರದಿರಲೆಂದು ಪ್ರಾರ್ಥಿಸುತ್ತೇನೆ. ಒಂದು ವೇಳೆ ನನ್ನ ಪ್ರಾಣ ಕೊಲೆಗಡುಕರ ಗುಂಡಿಗೆ ಬಲಿಯಾದರೂ ಸಹ ನನ್ನ ತುಟಿಗಳ ಮೇಲೆ ರಾಮನಾಮವಿರಲಿ ಎಂದು ನಿರಂತರವಾಗಿ ಬೇಡುತ್ತಿರುತ್ತೇನೆ. ಜೀವನದ ಕೊನೆಯ ಕ್ಷಣಗಳಲ್ಲೂ ಆ ಹಂತಕನ ಬಗ್ಗೆ ನನ್ನಲ್ಲಿ ದ್ವೇಷ ಅಥವಾ ತಿರಸ್ಕಾರವೇನಾದರೂ ಬಂದರೆ ನನ್ನ ಹೆಸರು ದುರಹಂಕಾರಿಗಳ ಪಟ್ಟಿಯಲ್ಲಿ ಸೇರಿಕೊಳ್ಳಲಿ. ಈ ಪ್ರಪಂಚ ದುರಹಂಕಾರಿಗಳಿಂದ ತುಂಬಿದೆ. ನನ್ನ ಸಾವೇ ನಾನು 'ಮಹಮ್ಮದ್ ಗಾಂಧಿಯೇ' 'ಜಿನ್ನಾ ದಾಸನೇ' ಹಿಂದೂ ಧರ್ಮದ ವೈರಿಯೇ ಅಥವಾ ಹಿಂದೂ ಧರ್ಮದ ಸೇವಕನೇ ಎಂದು ಸಾಬೀತು ಪಡಿಸಲಿದೆ. ನಾವು ಮನಸ್ಸಿನಿಂದ ಸೇಡು ಮತ್ತು ದ್ವೇಷವನ್ನು ತೆಗೆದು ಹಾಕಿ ಅದನ್ನು ಸರ್ವವ್ಯಾಪಿ ಭಗವಂತನಿಗೆ ಅರ್ಪಿಸುತ್ತೇವೆ. ನಾವು ಭಗವಂತನನ್ನು ತಿರಸ್ಕರಿಸಬಾರದು, ಆತನ ಕೆಲಸವನ್ನು ಮತ್ತು ಮಾಡುವ ಪ್ರಯತ್ನ ಮಾಡಬಾರದು. ಯಾವ ದೇಶದ ಮೇಲೆ ಹಿಮಾಲಯದ ನೆರಳಿದೆಯೋ, ಯಾವ ಭೂಮಿಯಲ್ಲಿ ಗಂಗೆ ಮತ್ತು ಜಮುನೆಯಂತಹ ಪವಿತ್ರ ನದಿಗಳು ಹರಿಯುತ್ತಿವೆಯೋ ಅಂತಹ ಭೂಮಿಯಲ್ಲಿ ನಾವು ಪರಸ್ಪರ ಕ್ರೌರ್ಯದಿಂದ ಒಬ್ಬರನ್ನೊಬ್ಬರು ಕೊಲ್ಲಲು ಹೇಗೆ ಸಾಧ್ಯ? ಹೇ! ಭಗವಂತ ಇಂತಹ ಭೀಕರ ದೃಶ್ಯವನ್ನು ನೋಡಲು ನನ್ನನ್ನು ಉಳಿಸ ಬೇಡ ಮತ್ತು ಈ ಹಿಂಸೆಯಿಂದ ಜನರನ್ನು ರಕ್ಷಿಸಲು ನಮಗೆ ಬ್ರಿಟಿಷ್ ಸೈನ್ಯದ ಸಹಾಯವನ್ನು ತೆಗೆದುಕೊಳ್ಳುವಂತಹ ನಾಚಿಕೆಗೇಡಿ ದೃಶ್ಯವನ್ನು ತೋರಿಸುವುದಕ್ಕಿಂತ ಸಾಯಿಸುವುದೇ ಮೇಲು ಎಂದು ನಾನು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. (37)

ಇನ್ನೊಂದು ಸಂದರ್ಭದಲ್ಲಿ ಗಾಂಧೀಜಿ ಅವರು ತಮ್ಮ ಪ್ರಾರ್ಥನಾ ಸಭೆಯಲ್ಲಿ ಹೀಗೆ ಹೇಳಿದರು:–

"ನಾನು ಹೇಳುತ್ತೇನೆ, ನಾನೊಬ್ಬ ಹಿಂದೂ, ನಿಜವಾದ ಹಿಂದೂ, ಸನಾತನ ಹಿಂದೂ ಆದ್ದರಿಂದ ನಾನು ಮುಸಲ್ಮಾನನೂ ಹೌದು, ಸಿಖ್ಖನು ಹೌದು, ಪಾರ್ಸಿಯೂ ಹೌದು, ಕ್ರೈಸ್ತನು, ಯಹೂದಿಯೂ ಆಗಿದ್ದೇನೆ. ಪ್ರಪಂಚದಲ್ಲಿರುವ ಧರ್ಮಗಳೆಲ್ಲವನ್ನೂ ನಾನು ಒಂದು ಮರದ ಕೊಂಬೆಗಳೆಂದು ಭಾವಿಸುತ್ತೇನೆ. ನಾನು ಯಾವ ಕೊಂಬೆಯನ್ನು ಪ್ರೀತಿಸಲಿ, ಯಾವ ಕೊಂಬೆಯನ್ನು ಬಿಡಲಿ. ಯಾವುದರ ಎಲೆಗಳನ್ನು ತೆಗೆದುಕೊಳ್ಳಲಿ. ಯಾವುದರ ಎಲೆಗಳನ್ನು ಬಿಡಲಿ. ಎಲ್ಲದರ ಧರ್ಮ ಒಂದೇ. ನಾನು ಮಾಡಲ್ಪಟ್ಟಿರುವುದೇ ಹೀಗೆ. ಅದಕ್ಕೇನು ಮಾಡಲಿ? ಎಲ್ಲರೂ ನನ್ನಂತೆ ಯೋಚಿಸತೊಡಗಿದರೆ ಹಿಂದೂಸ್ಥಾನದಲ್ಲಿ ಸಂಪೂರ್ಣವಾಗಿ ಶಾಂತಿ ನೆಲೆಸುತ್ತದೆ. ಪಾಕಿಸ್ತಾನದಲ್ಲಿ ಮುಸಲ್ಮಾನರ ಸಂಖ್ಯೆ ಜಾಸ್ತಿ ಇದೆ ಅವರು ಅದನ್ನು ನರಕ ಮಾಡಿದರೆ? ಹಿಂದುಸ್ತಾನದಲ್ಲಿ ಹಿಂದೂಗಳ ಸಂಖ್ಯೆ ಜಾಸ್ತಿ ಇದೆ. ಅವರು ಅದನ್ನು ನರಕ ಮಾಡಿದರೆ? ಇಬ್ಬರು ಹೀಗೆ ನರಕ ಮಾಡಲು ಹೊರಟರೆ ಅವರಲ್ಲಿ ಮನುಷ್ಯತ್ವ ಉಳಿಯಲು ಸಾಧ್ಯವೇ ಇಲ್ಲ. (38)

ತಮ್ಮ ಕೊನೆಯ ಹುಟ್ಟುಹಬ್ಬದಂದು 2 ಅಕ್ಟೋಬರ್ 1947ರ ಪ್ರಾರ್ಥನೆಯ ಪ್ರವಚನದಲ್ಲಿ ಅವರು ಈ ವಿಚಾರವನ್ನು ಪುನರುಚ್ಚರಿಸುತ್ತಾ ಹೀಗೆ ಹೇಳಿದರು– 'ನಾನು ಕೇಳುವುದಿಷ್ಟೇ ಇಲ್ಲಿ ಮುಸಲ್ಮಾನರಿಗೆ ಬೇರೆ? ನಮಗೆ ಬೇರೆ ಸೂರ್ಯನಿದ್ದಾನೆಯೇ? ಎಲ್ಲರಿಗಿರುವುದೊಂದೇ ಸೂರ್ಯ. ಗಂಗೆ ಹರಿಯುತ್ತಿದ್ದಾಳೆ' ಎಚ್ಚರಿಕೆ! ಮುಸಲ್ಮಾನರು ನನ್ನ ನೀರನ್ನು ಕುಡಿಯಬಾರದೆಂದು ಹೇಳುತ್ತಿದ್ದಾಳೆಯೇ? ಮೋಡಗಳಿಂದ ನೀರು ಬೀಳುತ್ತಿದೆ. ನಾವು ಮುಸಲ್ಮಾನರಿಗಲ್ಲ, ಪಾರ್ಸಿಗಳಿಗಲ್ಲ, ಕ್ರೈಸ್ತರಿಗಲ್ಲ ನಾವು ಬರೀ ಹಿಂದೂಗಳಿಗೆ ಎಂದು ಹೇಳಿ ಬೀಳುತ್ತಿದೆಯೇ? ಭಾರತ ಸರ್ಕಾರ ಇರುವುದು ಬರೀ ಹಿಂದೂಗಳಿಗೋಸ್ಕರ ಅಂತ ಹೇಳಲು ಸಾಧ್ಯವೇ? ಕುರಾನ್ –ಗೀತಾ ಎಲ್ಲವೂ ಒಂದೇ. ಅದರ ತೊಡುಗೆ ಮಾತ್ರ ಬೇರೆ. ಅರಬ್ಬಿ ಭಾಷೆಯಲ್ಲಿ ಬರೆದರೆ ಕುರಾನ್ ಅನ್ನಿರಿ. ನಾಗರಿ ಲಿಪಿಯಲ್ಲಿ, ಸಂಸ್ಕೃತದಲ್ಲಿ ಬರೆದರೆ ವೇದಗಳೆನ್ನಿರಿ. ನಾವು ಎರಡನ್ನೂ ಅರ್ಥ ಮಾಡಿಕೊಂಡು ಓದಿದರೆ ಎರಡರ ಮೂಲ ಉದ್ದೇಶ ಒಂದೇ."

"ಇಂದು ನನ್ನ ಹುಟ್ಟುಹಬ್ಬ. ಆದರೆ ನನಗೆ ಇದು ಶೋಕದ ದಿನ. ಈಗ ನಾನು ಬದುಕಿದ್ದೇನೆ ಎಂಬುದೇ ನನಗೆ ಆಶ್ಚರ್ಯ ಮತ್ತು ನಾಚಿಕೆಯಾಗುತ್ತದೆ ! ನಾನು ಒಂದು ಮಾತು ಹೇಳಿದರೆ ಸಾಕು ಕೋಟ್ಯಾಂತರ ಜನ ಅದನ್ನು ಪಾಲಿಸುತ್ತಿದ್ದರು ಆದರೆ ಇಂದು ನನ್ನ ಮಾತನ್ನು ಕೇಳುವವರಿಲ್ಲ ಎಂಬುದೇ ದುಃಖದ ವಿಷಯ.

"ನಾನು ಹಿಂದೂಸ್ತಾನಕ್ಕೆ ಬಂದಾಗಿನಿಂದ ಹಿಂದೂ ಮುಸಲ್ಮಾನರು ಒಟ್ಟಾಗಿರಲಿ, ಸಂಸ್ಕೃತಿಯಿಂದಲ್ಲದ್ದಿದ್ದರು, ಸಹೋದರರಂತೆ ಇರಲಿ ಆದರೆ ಈಗ ನಾವು ಪರಸ್ಪರ

ಶತ್ರುಗಳಾಗಿದ್ದೇವೆ. ಒಂದು ವೇಳೆ ಮುಸಲ್ಮಾನರೇನಾದರು ಪ್ರಾಮಾಣಿಕರಾದರೆ, ಮುಸಲ್ಮಾನರು ಪ್ರಾಮಾಣಿಕರಾಗಿರಲು ಸಾಧ್ಯವೇ ಇಲ್ಲ ಎಂದು ಭಾವಿಸುತ್ತೀರಿ. ಇಂತಹ ಮನಸ್ಥಿತಿ ಇದ್ದರೆ ಹಿಂದೂಸ್ತಾನ ಇರಲು ಯೋಗ್ಯವಾದ ಸ್ಥಳವೆ? ನಾನು ಇಂತಹ ಹಿಂದೂಸ್ತಾನದಲ್ಲಿದ್ದೇನು ಪ್ರಯೋಜನ? 125 ವರ್ಷ ಬದುಕಬೇಕೆಂದಿದ್ದ ನನ್ನ ಆಸೆ ನುಚ್ಚುನೂರಾಗಿದೆ. 90 ವರ್ಷದವರೆಗೂ ಬದುಕುತ್ತೇನೋ ಎಂಬ ಸಂದೇಹವಿದೆ. ಇವತ್ತು ನಾನು 80 ವರ್ಷಕ್ಕೆ ಕಾಲಿಟ್ಟಿದ್ದೇನೆ ಆದೂ ಸಹ ನನಗೆ ಚುಚ್ಚುತ್ತಿದೆ. ನಾನು ನಿಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ. ನೀವು ನಿಮ್ಮ ಮೃಗೀಯ ವರ್ತನೆಯನ್ನು ಬಿಟ್ಟುಬಿಡಿ. ಪಾಕಿಸ್ತಾನದಲ್ಲಿ ಮುಸಲ್ಮಾನರು ಏನು ಮಾಡುತ್ತಾರೆ ಎಂಬ ಚಿಂತೆ ನನಗಿಲ್ಲ. ಅಲ್ಲಿ ಮುಸಲ್ಮಾನರು ಹಿಂದೂಗಳನ್ನು ಕೊಂದರೆ ಅವರು ಮೃಗಗಳಾಗುತ್ತಾರೆ. ನಾನು ಅದನ್ನು ಅನುಸರಿಸಲೇ? ನಾನೂ ಮೃಗನಾಗಲೇ? ಖಂಡಿತವಾಗಿ ಹೀಗೆ ಮಾಡಲು ನಾನು ಒಪ್ಪುವುದಿಲ್ಲ ಮತ್ತು ನೀವು ಇದನ್ನು ಅನುಸರಿಸಬೇಡಿ ಎಂದು ಹೇಳುತ್ತೇನೆ. ಒಂದು ವೇಳೆ ನೀವು ನಿಜವಾಗಿಯೂ ನನ್ನ ಹುಟ್ಟು ಹಬ್ಬವನ್ನು ಆಚರಿಸುವುದೇ ಆದರೆ ಇನ್ನು ಮುಂದೆ ನಾವು ಯಾರಿಗೂ ಹುಚ್ಚರಾಗಲು, ಮೃಗಗಳಾಗಲು ಬಿಡುವುದಿಲ್ಲ. ನಮ್ಮ ಮನಸ್ಸಿನಲ್ಲಿ ಕೋಪವೇನಾದರು ಇದ್ದರೆ ಅದನ್ನು ತೆಗೆಯುವುದು ನಮ್ಮ ಕರ್ತವ್ಯ ಎಂದು ಹೇಳಿ'.(39)

'ಅಗಸ್ಟ್ 15ಕ್ಕೆ ನಾವು ಸ್ವತಂತ್ರರಾದೆವು. ಆದರೆ ಅದು ನನ್ನ ಕನಸಿನ ಸ್ವಾತಂತ್ರ್ಯವಲ್ಲ. ನಾನು ಅದನ್ನು ಸ್ವಾತಂತ್ರ್ಯವೆಂದು ಒಪ್ಪುವುದಿಲ್ಲ. ನನ್ನ ಕನಸಿನ ಸ್ವಾತಂತ್ರ್ಯ ದಕ್ಕಲೇ ಇಲ್ಲ. ಹಿಂದೂಗಳು ಮುಸಲ್ಮಾನರನ್ನು ಶತ್ರುಗಳೆಂದು ಮತ್ತು ಮುಸಲ್ಮಾನರು ಹಿಂದೂ ಮತ್ತು ಸಿಖ್ಖರನ್ನು ಶತ್ರುಗಳೆಂದು ಭಾವಿಸುವುದು ಎಂತಹ ಸ್ವಾತಂತ್ರ್ಯ. ಪ್ರಪಂಚದಲ್ಲಿ ನಾವು ಯಾರನ್ನೂ ಶತ್ರುಗಳೆಂದು ಪರಿಗಣಿಸಬಾರದು ಮತ್ತು ನಾವು ಸಹ ಯಾರ ಶತ್ರುಗಳೂ ಆಗಬಾರದು. ಇದು ನನ್ನ ಕನಸಿನ ಸ್ವಾತಂತ್ರ್ಯ. ನಮಗೆ ಇಂತಹ ಸ್ವಾತಂತ್ರ್ಯವಿನ್ನೂ ಬಂದಿಲ್ಲ. ನಮ್ಮ ಸಹೋದರರು ಪರಸ್ಪರ ಶತ್ರುಗಳಾಗಬೇಕೇ? ನಾವು ಅಭಿವೃದ್ಧಿ ಹೊಂದಬೇಕಾದರೆ ನಾವು ಸಹೋದರರಂತಿರಬೇಕು ಆದರೆ ಇಂದು ನಾವು ಮಣ್ಣಾಗಿದ್ದೇವೆ. ನಮ್ಮ ಹೃದಯಗಳಲ್ಲಿ ದ್ವೇಷ ತುಂಬಿದೆ. ಅಸೂಯೆ ತಿರಸ್ಕಾರಗಳು ತಾಂಡವಾಡುತ್ತಿದೆ. ಭಗವಂತನ ದೃಷ್ಟಿಯಲ್ಲಿ ಇಬ್ಬರೂ ಅಪರಾಧಿಗಳೇ. ಹಿಂದುವಿನ ಕೆಲಸದಿಂದ ಮುಸಲ್ಮಾನನಿಗೆ ಬೇಸರವಾದರೆ, ಮುಸಲ್ಮಾನನ ಕೆಲಸದಿಂದ ಹಿಂದೂವಿಗೆ ಬೇಸರವಾದರೆ. ನಿಜವಾದ ಅರ್ಥದಲ್ಲಿ ಅದು ಸ್ವತಂತ್ರವಾಗಲು ಹೇಗೆ ತಾನೆ ಸಾಧ್ಯ. (40)

ಧರ್ಮ ಮತ್ತು ದೇಶಭಕ್ತಿ

ಜನವರಿ 1930 ರಂದು ಗಾಂಧೀಜಿ ಅವರು ಧರ್ಮ ಮತ್ತು ರಾಜನೀತಿಯ ಸಮನ್ವಯಾತ್ಮಕ ಭಾಷಣ ಮಾಡುತ್ತಾ ಹೀಗೆ ಹೇಳಿದರು:-

'ನಾವು ನಮ್ಮ ಧರ್ಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ... ನಾವು ಮೊದಲಿಗೆ ಮತ್ತು ಕೊನೆಗೆ ಅಪ್ಪಟ ಹಿಂದುಸ್ತಾನಿಗಳು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಒಬ್ಬ ಹಿಂದೂ ಮತ್ತು ಒಬ್ಬ ಮುಸಲ್ಮಾನ ನಿಜವಾದ ಹಿಂದೂ ಮತ್ತು ನಿಜವಾದ ಮುಸಲ್ಮಾನನಾಗಬೇಕೆಂದರೆ ಅವನು ತನ್ನ ದೇಶವನ್ನು ಪ್ರೀತಿಸಬೇಕು. ದೇಶದ ಒಳತಿನ ಮತ್ತು ಧರ್ಮದ ನಡುವೆ ಸಂಘರ್ಷದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಒಂದು ವೇಳೆ ಧರ್ಮ ಮತ್ತು ದೇಶಭಕ್ತಿಯ ನಡುವೆ ಸಂಘರ್ಷವೇನಾದರೂ ಉಂಟಾದರೆ, ನಮಗೆ ಧರ್ಮದ ನಂಬಿಕೆಯಲ್ಲಿ ಅಂದರೆ ನಮ್ಮ ನಡವಳಿಕೆಯಲ್ಲಿ ಏನೋ ದೋಷವಿದೆ ಎಂದು. ನಿಜವಾದ ಧರ್ಮ ಎಂದರೆ ಒಳ್ಳೆಯ ವಿಚಾರ ಮತ್ತು ಒಳ್ಳೆಯ ಆಚರಣೆ. ದೇಶಭಕ್ತಿ ಎಂದರೆ-ಒಳ್ಳೆಯ ವಿಚಾರ ಮತ್ತು ಒಳ್ಳೆಯ ನಡವಳಿಕೆ(41)

ಹಿಂದೂ-ಮುಸಲ್ಮಾನರ ಭಯವನ್ನು ದೂರ ಮಾಡುತ್ತಾ 1931ರಲ್ಲಿ ಗಾಂಧೀಜಿ ಹೀಗೆ ಬರೆಯುತ್ತಾರೆ:-

'ಇಂದು ನಮ್ಮ ಮನೆ ಒಡೆದ ಗೂಡಾಗಿದೆ ಎಂದು ನಾಚಿಕೆಯಿಂದ ಒಪ್ಪಿಕೊಳ್ಳಬೇಕಿದೆ. ಹೇಡಿತನ ಮತ್ತು ಭಯದಿಂದ ನಾವು ಪರಸ್ಪರ ಕೊಲ್ಲಲು ಮುಂದಾಗಿದ್ದೇವೆ. ಹಿಂದೂಗಳ ಮೇಲಿರುವ ಮುಸಲ್ಮಾನರ ನಂಬಿಕೆಯ ಮೂಲದಲ್ಲಿ ಹೇಡಿತನ ಮತ್ತು ಕಾಲ್ಪನಿಕ ಭಯವಿದೆ. ನಮ್ಮ ಸಂಪೂರ್ಣ ಐತಿಹಾಸಿಕ ಕಾಲಘಟ್ಟದಲ್ಲಿ ಇಸ್ಲಾಂ ಧರ್ಮವು ಅಪೂರ್ವ ಶೌರ್ಯ ಮತ್ತು ಶಾಂತಿಗೆ ಸಾಕ್ಷಿಯಾಗಿದೆ. ಆದ್ದರಿಂದ ಮುಸಲ್ಮಾನರು ಯಾವುದೇ ಕಾರಣಕ್ಕೂ ಹಿಂದೂಗಳಿಂದ ಹೆದರುವ ಅವಶ್ಯಕತೆ ಇಲ್ಲ. ನಾವು ನಮ್ಮ ನೆರಳಿನಿಂದ ಹೆದರುವಷ್ಟು ನೀಚರಾಗಿದ್ದೇವೆಯೇ?' (42)

ಗಾಂಧೀಜಿಗೆ ಹಿಂದೂ-ಮುಸಲ್ಮಾನರ ಒಗ್ಗಟ್ಟು ರಾಜಕೀಯ ವಿಷಯವಾಗಿರಲಿಲ್ಲ. ಬಾಲ್ಯದಿಂದಲೇ ಅವರಿಗೆ ಹಿಂದೂ-ಮುಸಲ್ಮಾನರ ಒಗ್ಗಟ್ಟಿನಲ್ಲಿ ಆಳವಾದ ನಂಬಿಕೆ ಇತ್ತು. 1938 ರಂದು ತಮ್ಮ 'ಹರಿಜನ' ಪತ್ರಿಕೆಯಲ್ಲಿ ಲೇಖನವೊಂದನ್ನು ಬರೆದಿದ್ದರು:-

'ಹಿಂದೂ-ಮುಸಲ್ಮಾನರ ಒಗ್ಗಟ್ಟಿಗಾಗಿ ಇಡೀ ಜೀವನ ಕೆಲಸ ಮಾಡಿದ್ದೇನೆ. ನನ್ನ ಯೌವನದಲ್ಲಿ ಹಿಂದೂ-ಮುಸಲ್ಮಾನರ ಒಗ್ಗಟ್ಟಿನಲ್ಲಿ ಅಚಲವಾದ ನಂಬಿಕೆ ಇತ್ತು. ಅನೇಕ ಮನೆತನದ ಮುಸಲ್ಮಾನರು ನನ್ನ ಗೆಳೆಯರು. ಒಬ್ಬ ಮುಸಲ್ಮಾನ ಹುಡುಗಿ ನನ್ನ ಮಗಳಿಗಿಂತಲೂ ಹೆಚ್ಚು ಪ್ರಿಯಳು. ಆಕೆ ಹಿಂದೂ-ಮುಸಲ್ಮಾನರ ಒಗ್ಗಟ್ಟಿಗಾಗಿ

ತನ್ನ ಪ್ರಾಣವನ್ನು ಪಣವಾಗಿಡಲು ಸಿದ್ಧಳಿದ್ದಾಳೆ. ಬಾಂಬೆಯ ಜಾಮಾ ಮಸೀದಿಯ ಇಮಾಮರ ಮಗ ನಮ್ಮ ಆಶ್ರಮವಾಸಿಗಳಲ್ಲಿ ಒಬ್ಬ. ನನಗೆ ಅವರಿಗಿಂತ ಒಳ್ಳೆಯ ವ್ಯಕ್ತಿ ಸಿಗಲೇ ಇಲ್ಲ. ಅವರ ಬೆಳಗಿನ 'ಅಜಾ' ಆಶ್ರಮದಲ್ಲಿ ಪ್ರತಿಧ್ವನಿಸುತ್ತದೆ ಆ ಪ್ರತಿಧ್ವನಿಯ ನಡುವೆಯೇ ನಾನು ಈ ವಾಕ್ಯಗಳನ್ನು ಬರೆಯುತ್ತಿರುವುದು. (43)

ಹಿಂದೂ-ಮುಸ್ಲಿಂರ ಒಗ್ಗಟ್ಟಿನ ಕನಸು

ಕೋಮು ಸೌಹಾರ್ದತೆಯ ಹಂಬಲವು ಗಾಂಧೀಜಿಯ ಆತ್ಮವನ್ನು ಹಿಂಡಿತು. ಹಿಂದೂ-ಮುಸಲ್ಮಾನರ ಸೌಹಾರ್ದತೆಯ ಬಗ್ಗೆ ಕಳವಳವನ್ನು ವ್ಯಕ್ತಪಡಿಸುತ್ತಾ ಹೀಗೆ ಹೇಳಿದರು- "ನಾನು ಮಲಗಿರಲಿ ಅಥವಾ ಎಚ್ಚರವಾಗಿರಲಿ, ನೀವು ನನ್ನ ಹೃದಯವನ್ನು ಸೀಳಿದರೆ 24 ಗಂಟೆ ನನ್ನ ಹೃದಯದ ನರಗಳು ಹಿಂದೂ-ಮುಸಲ್ಮಾನರ ಸೌಹಾರ್ದತೆಯ ಬಗ್ಗೆ ಆಧ್ಯಾತ್ಮಿಕವಾಗಿ ಪ್ರಾರ್ಥನೆ ಸಲ್ಲಿಸುತ್ತಿರುತ್ತವೆ. ನಾನು ಹಿಂದೂ-ಮುಸಲ್ಮಾನರ ಸೌಹಾರ್ದತೆಯ ದಾಹಿ." ಏಕೆಂದರೆ ಅದಿಲ್ಲದೆ ನಿಜವಾದ ಸ್ವಾತಂತ್ರ್ಯ ಪೂರ್ಣಗೊಳ್ಳುವುದಿಲ್ಲ ಎಂದು ನನಗೆ ಗೊತ್ತು... ಹಿಂದೂ ಮುಸಲ್ಮಾನರಲ್ಲಿರುವುದು ನಿಜವಾದ ಮತ್ತು ಗಾಢವಾದ ಆತ್ಮೀಯ ಒಗ್ಗಟ್ಟು. ತೇಪೆ ಹಾಕಿದ ರಾಜಕೀಯ ಒಗ್ಗಟ್ಟಲ್ಲ. ಇಂದಲ್ಲದಿದ್ದರೂ ಎಂದಾದರೊಮ್ಮೆ ಆದಷ್ಟು ಬೇಗ ಗಾಢವಾದ ಒಗ್ಗಟ್ಟು ಮೂಡೇ ಮೂಡುತ್ತದೆ ಎಂಬ ನಂಬಿಕೆ ನನಗಿದೆ. ಬಾಲ್ಯದಿಂದಲೇ ಈ ಕನಸು ನನ್ನಲ್ಲಿ ಮನೆ ಮಾಡಿದೆ. ಹೇಗೆ ರಾಜಕೋಟನಲ್ಲಿ ಹಿಂದೂ ಮತ್ತು ಮುಸಲ್ಮಾನರು ಪರಸ್ಪರ ಒಗ್ಗಟ್ಟಿನಿಂದ ಇರುತ್ತಿದ್ದರು. ಒಡಹುಟ್ಟಿದವರಂತೆ ಹಬ್ಬ-ಹರಿ ದಿನಗಳಲ್ಲಿ ಭಾಗವಹಿಸುತ್ತಿದ್ದರು. ನನ್ನ ತಂದೆಯ ಅ ಕಾಲ ಚೆನ್ನಾಗಿ ನೆನಪಿದೆ. ಈ ದೇಶದಲ್ಲಿ ಆ ಕಾಲ ಮತ್ತೆ ಮರಳಿ ಬರಲಿ ಎಂದು ಆಶಿಸುತ್ತೇನೆ... ಇದು ನನ್ನ ಅಂತರಾಳದ ಪ್ರಾರ್ಥನೆ ಆಗಿದ್ದರೂ ಈ ಕೆಲಸವನ್ನು ಪೂರ್ಣಗೊಳಿಸಲು ನಾನು ಯೋಗ್ಯನೋ ಇಲ್ಲವೋ? ಗೊತ್ತಿಲ್ಲ! ಈ ಕೆಲಸಕ್ಕಾಗಿ ಎಲ್ಲರೂ ಟೊಂಕಕಟ್ಟಿ, ಮಶಾಲ್ ಹಿಡಿದು ಸಿದ್ಧರಾಗಬೇಕಿದೆ. ಈ ಕೆಲಸಕ್ಕಾಗಿ ಭಗವಂತ ಯಾರನ್ನು ಯಾವಾಗ ನೇಮಿಸುತ್ತಾನೆ ಎಂದು ಯಾರಿಗೂ ಗೊತ್ತಿಲ್ಲ. ನನ್ನ ಮೇಲೆ ಭಾರ ಹಾಕಿ ನೀವು ನಿಮ್ಮ ಜವಾಬ್ದಾರಿಗಳಿಂದ ನುಣುಚಿಕೊಳ್ಳಬೇಡಿ. ನಾನು ಜೀವಂತವಿರುವಾಗಲೆ ಹಿಂದೂ-ಮುಸಲ್ಮಾನರ ಸೌಹಾರ್ದತೆಯ ಕನಸು ನನಸಾಗಲಿ ಎಂದು ಪ್ರಾರ್ಥಿಸಿ. ನಾವು ಹತಾಶರಾಗಿ ನಿರಾಶೆಗೊಳ್ಳುವ ಅವಶ್ಯಕತೆ ಇಲ್ಲ. ಭಗವಂತನ ಇಚ್ಛೆಯ ಮುಂದೆ, ಮನುಷ್ಯನ ಲೆಕ್ಕಾಚಾರ ಕೆಲಸ ಮಾಡುವುದಿಲ್ಲ. (44)

ಇಸ್ಲಾಂನ ಅಧ್ಯಯನ

ಇಸ್ಲಾಂನ ಆಳವಾದ ಅಧ್ಯಯನದಿಂದ ಗಾಂಧೀಜಿ ಹಿಂದೂ-ಮುಸಲ್ಮಾನರ ಸೌಹಾರ್ದತೆಯ ನಂಬಿಕೆ ಇನ್ನೂ ಗಟ್ಟಿಯಾಯಿತು. ಅವರು ಹೀಗೆ ಬರೆಯುತ್ತಾರೆ:-

"ನಾನು ಯರವಾಡದ ಜೈಲಿನಲ್ಲಿದ್ದಾಗ ಮೌಲಾನಾ ಶಿಬಲಿ ಅವರು ಬರೆದ 'ಪೈಗಂಬರರ ಬದುಕನ್ನು' ಓದಿದೆ. ನಾನು 'ಉಸ್ವಾ-ಯೆ-ಸಾಹೇಬ' ಎಂಬ ಹೆಸರಿನ ಪುಸ್ತಕವನ್ನು ಓದಿದೆ (45).

'ಧರ್ಮದ ನಿಜವಾದ ನಂಬಿಕಸ್ಥನಂತೆ ಪೈಗಂಬರರ ಜೀವನ ಮತ್ತು ಕುರಾನ್-ಎ-ಷರೀಫ್‌ನ ಅಧ್ಯಯನ ಮಾಡಿದೆ. ಮೂಲಭೂತವಾಗಿ ಕುರಾನ್ ಅಹಿಂಸೆಯನ್ನು ಪ್ರತಿಪಾದಿಸುತ್ತದೆ ಎಂಬ ನಿರ್ಧಾರಕ್ಕೆ ಬಂದೆ. ನಾನು ದಾವೆಯಿಂದ ಹೇಳುತ್ತೇನೆ ಕುರಾನ್ ಅಹಿಂಸೆಯೇ ಉತ್ತಮ ಎಂದು ಹೇಳಿದೆ. ಮನುಷ್ಯನ ಮೇಲೆ ಅಹಿಂಸೆಯನ್ನು ಒಂದು ಕರ್ತವ್ಯವೆಂದು ಹೇರಲಾಗಿದೆ. ಪೈಗಂಬರ್ ಸಾಹೇಬರು ಏನು ಮಾಡಿದರು, ಏನು ಮಾಡಲಿಲ್ಲ ಎಂದು ನ್ಯಾಯ ಹೇಳುವುದು ನನ್ನ ಕೆಲಸವಲ್ಲ. ಪೈಗಂಬರರು ಏನು ಮಾಡಿದರು ಅನ್ನುವುದಕ್ಕಿಂತ ಪೈಗಂಬರರ ಉಪದೇಶಗಳ ಪ್ರಕಾರ ನಾನು ನಡೆಯಲು ಪ್ರಯತ್ನಿಸುತ್ತೇನೆ. ಮಹಮ್ಮದ್ ಸಾಹೇಬರು ಪ್ರವಾದಿತನವನ್ನು ಖಡ್ಗದಿಂದ ಪಡೆಯಲಿಲ್ಲ ಎಂಬುದು ಐತಿಹಾಸಿಕ ಸತ್ಯ. ಅವರು ಸತ್ಯ ಮತ್ತು ಅಹಿಂಸೆಯ ಕಠಿಣ ಸಾಧನೆಯಿಂದ ಅಲ್ಲಾಹನಿಂದ ಆಶೀರ್ವಾದಗಳನ್ನು ಬೇಡಿ ಗಳಿಸಿದ್ದು. ನೀವು ಪೈಗಂಬರರ ಮಹಾನ್ ಸಾಧನೆಗಳನ್ನು ಅವರ ಜೀವನದಿಂದ ಬೇರೆ ಮಾಡಿಬಿಟ್ಟರೆ ಪೈಗಂಬರ್‌ರ ಪ್ರವಾದಿತನವನ್ನು ಕಸಿದು ಕೊಂಡಂತೆ. ಮೊಹಮ್ಮದ್ ಸಾಹೇಬರ ಜೀವನದ ಈ ಸಾಧನೆಗಳು ಅವರಿಗೆ ಪ್ರವಾದಿತನವನ್ನು ನೀಡಿದ್ದು ಯಾವಾಗ? ಅವರ ಪ್ರವಾದಿತನ ಸಾರ್ಥಕವಾಗಿ ಜನರಿಗೆ ಮಾದರಿಯಾಗಿ ಜನ ಪೈಗಂಬರರನ್ನು ತಮ್ಮವರೆಂದು ಸ್ವೀಕರಿಸಿದಾಗ. ಪೈಗಂಬರನ ಕೆಲಸಗಳಿಗೆ ಪೈಗಂಬರನೇ ಸಾಟಿ.

ಒಮ್ಮೆ ಒಬ್ಬರು, ಪೈಗಂಬರ್‌ರಿಗೆ ಕೇಳಿದರು- "ನೀವು ಅವಶ್ಯಕತೆಗಿಂತ ಹೆಚ್ಚು ಉಪವಾಸ ಏಕೆ ಮಾಡುತ್ತೀರಿ? ಆದರೆ ನಿಮ್ಮ ಅನುಯಾಯಿಗಳಿಗೆ ನಿರ್ದಿಷ್ಟ ದಿನಗಳಿಗಿಂತ ಹೆಚ್ಚು ಉಪವಾಸ ಮಾಡುವುದು ಬೇಡವೆನ್ನುತ್ತೀರಿ ಏಕೆ?"

ಪೈಗಂಬರರು ತಕ್ಷಣ ಹೀಗೆ ಉತ್ತರಿಸಿದರು- 'ಭಗವಂತ ನನಗೆ ಆಧ್ಯಾತ್ಮಿಕ ಆಹಾರವನ್ನು ನೀಡುತ್ತಾನೆ. ಅದು ನನ್ನ ಶಾರೀರಿಕ ಅವಶ್ಯಕತೆಗಳನ್ನು ಪೂರ್ಣಗೊಳಿಸುತ್ತದೆ. ಆದರೆ ನೀವು ನನ್ನ ಪ್ರತಿಕೃತಿ ಮಾಡದಿರಲೆಂದು ಅಲ್ಲಾಹು ನಿಮಗಾಗಿ ರಂಜಾನ್‌ನ ಉಪವಾಸಗಳನ್ನು ನಿರ್ಧರಿಸಿರುವುದು.' ನಾನು ಇದನ್ನು ನೆನಪಿನಲ್ಲಿಟ್ಟುಕೊಂಡು ಬರೆಯುತ್ತಿದ್ದೇನೆ. (46)

ಇದೇ ಲೇಖನದಲ್ಲಿ ಗಾಂಧೀಜಿ ಬರೆಯುತ್ತಾರೆ:-

ಇಸ್ಲಾಮಿನ ಬಗ್ಗೆ ನನ್ನ ನಿಲುವು ಜನರಿಗೆ ಗೊತ್ತಿದೆ ಆದರೂ ಮತ್ತೊಮ್ಮೆ ಆ ನಿಲುವನ್ನು ಬಹಿರಂಗಪಡಿಸಲು ಇಚ್ಛಿಸುತ್ತೇನೆ. ನಾನು ಇಸ್ಲಾಮನ್ನು ಇಲ್ಹಾಮಿ(ಈಶ್ವರ್ ಪ್ರೇರಿತ) ಧರ್ಮ ಎಂದು ನಂಬುತ್ತೇನೆ ಆದ್ದರಿಂದ ಕುರಾನ್‌ನನ್ನು ಇಲ್ಹಾಮಿ ಪುಸ್ತಕ ಮತ್ತು ಮೊಹಮ್ಮದ್ ಸಾಹೇಬರನ್ನು ಮಹಾನ್ ಪ್ರವಾದಿಗಳಲ್ಲಿ ಒಬ್ಬ ಪ್ರವಾದಿ ಎಂದು ಧೃಢವಾಗಿ ನಂಬುತ್ತೇನೆ. ಅದೇ ರೀತಿ ನಾನು ಹಿಂದೂ ಧರ್ಮ, ಕ್ರೈಸ್ತ ಧರ್ಮ, ಝುರಾತೋಷ್ಟ ಧರ್ಮ ಮತ್ತು ಪ್ರಪಂಚದ ಎಲ್ಲಾ ಮಹಾನ್ ಧರ್ಮಗಳನ್ನು ಈಶ್ವರಿಯ ಧರ್ಮಗಳೆಂದು ನಂಬುತ್ತೇನೆ... ಆದ್ದರಿಂದ ಎಲ್ಲಾ ಜಾತಿ ಧರ್ಮಗಳ ನಡುವಿನ ಮೂಲ ಒಗ್ಗಟ್ಟನ್ನು ಹುಡುಕಲು ಒಂದು 'ಮಾಸ್ಟರ್ ಕೀ' (ಎಲ್ಲಾ ಬೀಗಗಳನ್ನು ತೆರೆಯುವ ಕೀಲಿಕೈ) ಬೇಕು ಎಂಬ ನಿರ್ಣಯಕ್ಕೆ ಬಂದಿದ್ದೇನೆ. ಆ 'ಮಾಸ್ಟರ್ ಕೀ' ಯಾವುದೆಂದರೆ ಸತ್ಯ ಮತ್ತು ಅಹಿಂಸೆ. ನಾನು ಯಾವಾಗ ಒಂದು ಧರ್ಮದ ಖಜಾನೆಯನ್ನು ಈ 'ಮಾಸ್ಟರ್ ಕೀ' ಯಿಂದ ತೆಗೆಯುತ್ತಿನೋ ಆಗ ಬೇರೆ ಧರ್ಮಗಳೊಂದಿಗೆ ಆ ಧರ್ಮದ ಸಮಾನತೆಯನ್ನು ನೋಡಲು ಕಷ್ಟವಾಗುವುದಿಲ್ಲ. ಗಿಡದ ಬೇರು ಮತ್ತು ತೆನೆಯೊಂದೇ, ಆದರೆ ಅದರ ಕೊಂಬೆಗಳು ಬೇರೆ-ಬೇರೆ ಅಷ್ಟೇ. ಒಂದು ವೇಳೆ ನೀವು ವಿವಿಧ ಧರ್ಮಗಳನ್ನು ಗಿಡದ ಕೊಂಬೆಗಳೆಂದು ಭಾವಿಸಿದರೆ ನಿಮಗೆ ಬೇರೆ ಬೇರೆ ಧರ್ಮಗಳಂತೆ ಕಾಣುತ್ತವೆ ಅದರೆ ಅವೆಲ್ಲವುದರ ತೆನೆ ಒಂದೇ. ಎಲ್ಲಿಯವರೆಗೆ ನಾವು ಧರ್ಮದ ಮೂಲವನ್ನು ತಿಳಿದುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಧರ್ಮದ ಹೆಸರಿನಲ್ಲಿ ಯುದ್ಧ ನಿಲ್ಲುವುದಿಲ್ಲ. ಯುದ್ಧಗಳು ಬರೀ ಹಿಂದೂಗಳಿಗೆ ಮತ್ತು ಮುಸಲ್ಮಾನರಿಗೆ ಮಾತ್ರ ಸೀಮಿತವಾಗಿಲ್ಲ. ಪ್ರಪಂಚದ ಇತಿಹಾಸದ ಪುಟಗಳು ಧಾರ್ಮಿಕ ಯುದ್ಧಗಳ ರಕ್ತಸಿಕ್ತ ವಿವರಣೆಗಳಿಂದ ಮಿಂದು ಹೋಗಿವೆ. ಬೇರೆ ಯಾವುದೇ ಧರ್ಮದವರೊಂದಿಗೆ ಯುದ್ಧ ಮಾಡುವುದರಿಂದ ಧರ್ಮದ ರಕ್ಷಣೆ ಆಗುವುದಿಲ್ಲ. ಅನುಯಾಯಿಗಳ ಪವಿತ್ರತೆ ಮತ್ತು ಪುಣ್ಯಕಾರ್ಯಗಳಿಂದ ಮಾತ್ರ ಧರ್ಮದ ರಕ್ಷಣೆ ಆಗಲು ಸಾಧ್ಯ. (47)

ಎಲ್ಲರೂ ಭಾರತ ಮಾತೆಯ ಮಕ್ಕಳೇ

ಹಿಂದೂ-ಮುಸಲ್ಮಾನರು ನಮ್ಮ ಮಾತೃಭೂಮಿಯ ಅಂದರೆ ಈ ತಾಯ್ನಾಡಿನ ಮಕ್ಕಳೇ. ಆದ್ದರಿಂದ ಸಹೋದರತ್ವದ ಬಂಧದಲ್ಲಿ ಬಂದಿಸಲ್ಪಟ್ಟಿದ್ದಾರೆ ಎಂದು ಗಾಂಧೀಜಿ ಅವರು ಭಾವಿಸಿದ್ದರು. 1946ರ 'ಹರಿಜನ್' ಪತ್ರಿಕೆಯಲ್ಲಿ ಹೀಗೆ ಬರೆದಿದ್ದಾರೆ:-

'ಈ ದೇಶದಲ್ಲಿ ಹುಟ್ಟಿದವರು ಮತ್ತು ಭಾರತವನ್ನು ತಮ್ಮ ಮಾತೃಭೂಮಿ ಎಂದು ನಂಬಿರುವವರು ಅವರು ಹಿಂದುಗಳಿರಲಿ, ಪಾರ್ಸಿಗಳಿರಲಿ, ಮುಸ್ಲಿಂರಿರಲಿ, ಕ್ರೈಸ್ತರಿರಲಿ, ಜೈನರಿರಲಿ, ಸಿಖ್ಖರೇ ಇರಲಿ ಎಲ್ಲರೂ ಒಂದೇ. ಭಾರತಮಾತೆಯ ಮಕ್ಕಳು ಮತ್ತು ಪರಸ್ಪರ ಸಹೋದರರು. ಇವರೆಲ್ಲ ರಕ್ತ ಸಂಬಂಧಕ್ಕಿಂತ ಗಟ್ಟಿಯಾದ ಬಂಧದಲ್ಲಿ ಕಟ್ಟಲ್ಪಟ್ಟಿದ್ದಾರೆ. (48)

ಎಲ್ಲ ಪೂಜಾ ಸ್ಥಳಗಳು ಪವಿತ್ರವೇ?

ಪರಸ್ಪರ ಪೂಜಾ ಸ್ಥಳಗಳನ್ನು ಕೆಡವಿದ ಘಟನೆಗಳ ಬಗ್ಗೆ ಬಹಳ ನೋವಿನಿಂದ ಗಾಂಧೀಜಿ ಹೀಗೆ ಹೇಳಿದ್ದಾರೆ:–

"ಮಸೀದಿ ಮತ್ತು ಚರ್ಚುಗಳು ನಿಜವಾಗಿಯೂ ದೇವಸ್ಥಾನಗಳಷ್ಟೇ ಪವಿತ್ರವಲ್ಲವೇ? ಎಲ್ಲಾ ಕಡೆ ಭಗವಂತನಿದ್ದಾನೆ. ಅವನು ಹೇಗೆ ಸೌದೆ ಮತ್ತು ಕಲ್ಲಿನಲ್ಲಿದ್ದಾನೋ ಹಾಗೆಯೇ ಮನುಷ್ಯನ ಶರೀರದ ರೋಮ-ರೋಮಗಳಲ್ಲೂ ಇದ್ದಾನೆ. ಆದರೆ ಮನುಷ್ಯ ದೇವರ ಸಂಬಂಧವನ್ನು ಪವಿತ್ರವಾದ ಸ್ಥಳದೊಂದಿಗೆ ಕಲ್ಪಿಸಿದ್ದಾನೆ. ಬೇರೆಯವರ ಸ್ವಾತಂತ್ರ್ಯದಲ್ಲಿ ಅಡಚಣೆ ಉಂಟು ಮಾಡದ ಭಾವನೆಯನ್ನು ನಾವು ಗೌರವಿಸಬೇಕು.

ಮೌಲ್ವಿಗಳ ಆಕ್ಷೇಪಣೆ

ನೌಖಾಲಿಯಲ್ಲಿ ಗಾಂಧೀಜಿ ಅವರು ತಮ್ಮ ಪ್ರಾರ್ಥನೆಯಲ್ಲಿ ಕುರಾನ್ ಶರೀಫ್‌ನ ಶ್ಲೋಕಗಳನ್ನು ಓದುವುದರ ಬಗ್ಗೆ ಕೆಲ ಮೌಲ್ವಿಗಳು ಆಕ್ಷೇಪಣೆಯನ್ನು ವ್ಯಕ್ತಪಡಿಸಿದರು. ತಮ್ಮ ಸರ್ವಧರ್ಮ ಸಮನ್ವಯ ಸಿದ್ಧಾಂತವನ್ನು ಪುನರುಚ್ಚರಿಸುತ್ತಾ ಗಾಂಧೀಜಿ ಹೀಗೆ ಹೇಳಿದರು:–

'ಏಕೆಂದರೆ ನಾನು ಮನುಷ್ಯತ್ವವುಳ್ಳ ಒಬ್ಬ ಹಿಂದೂ, ಕ್ರೈಸ್ತ, ಬೌದ್ಧ ಮತ್ತು ಮುಸಲ್ಮಾನಾಗಿದ್ದೇನೆ ಎಂದು ದಾವೆಯಿಂದ ಹೇಳಬಲ್ಲೆ. ನಿಜವಾದ ಧರ್ಮವು ಭಾಷೆ ಮತ್ತು ಧರ್ಮಗ್ರಂಥಗಳ ಬಂಧನವನ್ನು ಒಪ್ಪುವುದಿಲ್ಲವೆಂಬ ಮಾತು ನನ್ನ ಮುಸಲ್ಮಾನ ಸಹೋದರರಿಗೆ ತಿಳಿದಿಲ್ಲ. ನಾನೇಕೆ ಕಲಿಮನ್ನು ಓದಬಾರದು? ನಾನು ಅಲ್ಲಾಹುನ ಸ್ತುತಿ ಏಕೆ ಮಾಡಬಾರದು? ನಾನು ಭಗವಂತನ ನಾಮಸ್ಮರಣೆ ಏಕೆ ಮಾಡಬಾರದು? ಎಂಬ ತರ್ಕಕ್ಕೆ ಹೋಗುವುದಿಲ್ಲ. ಮೊಹಮ್ಮದ್ ಸಾಹೇಬರು ನನ್ನ ಪೈಗಂಬರರು ಎಂದೇಕೆ ಘೋಷಿಸಬಾರದು? ನಾನು ಎಲ್ಲಾ ಧರ್ಮಗಳ ಪೈಗಂಬರ್‌ರನ್ನು ಮತ್ತು ಸಂತರನ್ನು ನಂಬುತ್ತೇನೆ. ನನ್ನನ್ನು ನಿಂದಿಸಿದವರ ಮೇಲೆ ಕೋಪಗೊಳ್ಳದೆ ಅವರಿಗೆ ಯಾವುದೇ ರೀತಿಯ ಕೆಡಕನ್ನು ಮಾಡದೆ ಅವರ ಕೈಯಿಂದಲೇ ಸಾಯಲು ಸದಾಸಿದ್ದನಾಗಿರಲು ಶಕ್ತಿ ಕೊಡೆಂದು ಭಗವಂತನಲ್ಲಿ ಸದಾ ಪ್ರಾರ್ಥಿಸುತ್ತೇನೆ. (49)

ಹಿಂದೂ-ಮುಸಲ್ಮಾನರಲ್ಲಿದ್ದ ದ್ವೇಷವನ್ನು ನೋಡಿ ಗುರುನಾನಕ್ ಹೀಗೆ ಹೇಳಿದ್ದಾರೆ:-

'ನಾವು ಹಿಂದುಗಳೂ ಅಲ್ಲ!
ಮುಸಲ್ಮಾನರು ಅಲ್ಲ !
ನಾವಿಬ್ಬರೂ ಸೈತಾನನ ಮಕ್ಕಳು'

ಸತ್ಯದ ಹುಡುಕಾಟದಲ್ಲಿದ್ದ ಗಾಂಧೀಜಿಗೆ ಹಿಂದೂ-ಮುಸಲ್ಮಾನರ ನಂಬಿಕೆ ಮತ್ತು ವಿಶ್ವಾಸಗಳು ಒಟ್ಟಿಗೆ ಭೋರ್ಗರೆಯುವಂತೆ ಕಾಣುತ್ತಿದ್ದವು. ಅಲ್ಲದೆ ಅವರು ತಮ್ಮೊಳಗೆ ಕ್ರೈಸ್ತ ಮತ್ತು ಸಿಖ್ ಧರ್ಮದ ಬೆಳಕನ್ನು ಕಾಣುತ್ತಿದ್ದರು.

ನಾನು ನಿಜವಾದ ಮುಸಲ್ಮಾನ ಮತ್ತು ನಿಜವಾದ ಕ್ರೈಸ್ತನೂ ಆಗಿದ್ದೇನೆ

ಒಮ್ಮೆ ನ್ಯೂಯಾರ್ಕ್ ಪೋಸ್ಟಿನ ವರದಿಗಾರ ಶ್ರೀ ಎಂಡ್ರ ಫ್ರೀಮೆನ್ ಗಾಂಧೀಜಿಗೆ ಕೇಳಿದ:-

'ಗಾಂಧೀಜಿ ಅವರೇ, ಕ್ರೈಸ್ತರು ತಮ್ಮ ಆಚರಣೆಯಲ್ಲಿ ಕ್ರೈಸ್ತ ಸಿದ್ಧಾಂತಗಳನ್ನು ಮರೆತಿದ್ದಾರೆ ಎಂದು ನೀವು ಹೇಳುತ್ತೀರಿ. ಇಸ್ಲಾಮಿನ ಉಪಾಸಕರು ತಮ್ಮ ಪೈಗಂಬರರನ್ನು ಮರೆತಿಲ್ಲವೇ? ಗಾಂಧೀಜಿ ಹೀಗೆ ಉತ್ತರಿಸಿದರು:-

"ಇಂದು ಮುಸಲ್ಮಾನರಲ್ಲಿ ಮೊಹಮ್ಮದ್ ಸಾಹೇಬರ ಸಹನೆ ಮತ್ತು ಶಾಂತಿ ಕಾಣುತ್ತಿಲ್ಲ ಎಂದು ನಾನು ಪದೇಪದೆ ಹೇಳುತ್ತಿದ್ದೇನೆ. ಇತ್ತೀಚೆಗೆ ಒಂದು ಸಭೆಯಲ್ಲಿ ಹೇಳಿದ್ದೆ- ಒಂದು ವೇಳೆ ಮೊಹಮ್ಮದ್ ಸಾಹೇಬರು ಹಿಂದೂಸ್ತಾನಕ್ಕೆ ಬಂದರೆ ಯಾರು ತಮ್ಮನ್ನು ಮುಸಲ್ಮಾನರೆಂದು ನಂಬುತ್ತಾರೋ ಅವರಲ್ಲಿ ಸುಮಾರು ಜನ ಇಸ್ಲಾಮಿನ ತತ್ವಗಳನ್ನು ಅನುಸರಿಸುತ್ತಿಲ್ಲ ಎಂದು ಘೋಷಿಸುತ್ತಾರೆ. ಅಲ್ಲದೆ ಅವರು ನನಗೆ ಒಬ್ಬ ನಿಜವಾದ ಮುಸಲ್ಮಾನನೆಂಬ ಬಿರುದನ್ನು ನೀಡಿ ಅವರ ಬೇರೆ ಅನುಯಾಯಿಗಳಂತೆ ನನ್ನನ್ನು ಸ್ವೀಕರಿಸುತ್ತಾರೆ. ಅಂತೆಯೇ ಯೇಸು ಕ್ರಿಸ್ತನು ಸಹ ನನ್ನನ್ನು ನಿಜವಾದ ಕ್ರೈಸ್ತನೆಂದು ಹೇಳಲು ಹಿಂಜರಿಯುವುದಿಲ್ಲ. (50)

ನಾನು ನಿಜವಾದ ಸಿಖ್ ಸಹ ಆಗಿದ್ದೇನೆ

ಸಿಖ್ ಸಹೋದರರ ಸಂದೇಹಗಳನ್ನು ಪರಿಹರಿಸುತ್ತ ಗಾಂಧೀಜಿ ಅವರು ತಮ್ಮ ಪ್ರಾರ್ಥನೆಯಲ್ಲಿ ಹೀಗೆ ಹೇಳಿದರು:-

'ನನ್ನ ಮನಸ್ಸಿನಲ್ಲಿ ಸಿಖ್ಖರ ಬಗ್ಗೆ ಸಹಾನುಭೂತಿ ಇಲ್ಲವೆಂದು ಲಾಯಲ್ ಪುರದ ಸರದಾರ ಸಂತ ಸಿಂಹರು ದೀರ್ಘವಾದ ಪತ್ರವೊಂದನ್ನೂ ಬರೆದಿದ್ದರು. 1915ರಲ್ಲಿ ದಕ್ಷಿಣ ಆಫ್ರಿಕಾದಿಂದ ಮರಳಿದ ನಂತರ ನಾನು ಸಿಖ್ ಸಹೋದರರೊಂದಿಗೆ ಆತ್ಮೀಯವಾದ ಸಂಬಂಧವನ್ನು ಹೊಂದಿದ್ದೆ ಎಂಬ ವಿಷಯ ಬಹುಶಃ ಸರ್ದಾರ್ ಸಾಹೇಬರಿಗೆ ಗೊತ್ತಿರಬಹುದು. ಒಂದಾನೊಂದು ಕಾಲದಲ್ಲಿ ಹಿಂದೂ-ಮುಸಲ್ಮಾನರಂತೆ ಸಿಖ್ಖರು ಸಹ ನನ್ನ ಪ್ರವಚನಗಳನ್ನು ಲಕ್ಷ್ಮಣರೇಖೆ ಎಂದು ಭಾವಿಸಿದ್ದರು. ಈಗ ಕಾಲ ಬದಲಾಗಿದೆ. ಅಲ್ಲದೆ ಜನರ ಆಲೋಚನೆಗಳು ಸಹ ಬದಲಾಗಿಲ್ಲ ಎಂದು. ಆದರೆ ನನಗೆ ಗೊತ್ತು, ನಾನು ಬದಲಾಗಿಲ್ಲ. ಈಗ ಸಿಖ್ಖರು ಯಾವ ಕಡೆ ಹೋಗುತ್ತಿದ್ದಾರೆ ಎಂದು ಸರದಾರ್ ಸಾಹೇಬರಿಗೆ ಗೊತ್ತಿರಬಹುದು. ನಾನು ಅವರ ಆತ್ಮೀಯ ಗೆಳೆಯ. ನನಗೆ ಯಾವುದೇ ಸ್ವಾರ್ಥವಿಲ್ಲ ಆದ್ದರಿಂದ ನಾನು ಎಲ್ಲವನ್ನು ನೋಡಬಲ್ಲೆ. ನಾನು ಅವರೊಂದಿಗೆ ಮನಸ್ಸು ಬಿಚ್ಚಿ ಮಾತನಾಡಬಲ್ಲೆ ಏಕೆಂದರೆ ನಾನು ಅವರ ನಿಜವಾದ ಸ್ನೇಹಿತ. ಅನೇಕ ಬಾರಿ ಸಿಖ್ ಸಹೋದರರು ನನ್ನ ಸಲಹೆಯನ್ನು ಕೇಳಿ ಕಷ್ಟದಿಂದ ಪಾರಾಗಿದ್ದಾರೆ ಎಂದು ಹೇಳುವ ಧೈರ್ಯ ಮಾಡುತ್ತೇನೆ. ನನಗೆ ಸಿಖ್ಖರ ಬಗ್ಗೆಯಾಗಲಿ ಅಥವಾ ಬೇರೆ ಯಾರ ಬಗ್ಗೆಯಾಗಲಿ ಎಚ್ಚರಿಕೆಯಿಂದ ಮಾತಾಡುವ ಅವಶ್ಯಕತೆ ಇಲ್ಲ. ಸರ್ದಾರ್ ಸಾಹೇಬ್ ಮತ್ತು ಸಿಖ್ಖರ ಒಳಿತನ್ನು ಬಯಸುವ ಪ್ರತಿಯೊಬ್ಬ ಸಿಖ್, ಈಗಿನ ಪ್ರವಾಹದಲ್ಲಿ ಕೊಚ್ಚಿ ಹೋಗದೆ, ಹುಮ್ಮಸ್ಸಿನ ಈ ಸಮುದಾಯವನ್ನು ಹುಚ್ಚುತನದಿಂದ, ಮದ್ಯಪಾನದಿಂದ ಮತ್ತು ಅದರ ಹಾನಿಯಿಂದ ರಕ್ಷಿಸಲು ಸಹಾಯ ಮಾಡಲಿ. ಯಾವ ಖಡ್ಗವನ್ನು ಹೆಚ್ಚು ಪ್ರದರ್ಶಿಸಿ ತಪ್ಪಾಗಿ ಬಳಸಿದ್ದಾರೊ ಅದನ್ನು ಈಗ ತಣ್ಣಗೆ ಇಟ್ಟು ಬಿಡಲಿ."

"ನಾನು ಬಹಳ ಆಳವಾಗಿ ಸಿಖ್‌ರ ಇತಿಹಾಸವನ್ನು ಅಧ್ಯಯನ ಮಾಡಿದ್ದೇನೆ ಮತ್ತು ಗ್ರಂಥ ಸಾಹೇಬರ ವಚನಗಳ ಅಮೃತಪಾನ ಮಾಡಿದ್ದೇನೆ ಎಂಬ ನನ್ನ ಈ ಹೇಳಿಕೆಯನ್ನು ಸರ್ದಾರ್ ಸಾಹೇಬರು ಮನ್ನಿಸುತ್ತಾರೆಂದು ಭಾವಿಸುತ್ತೇನೆ. ಅವರ ವಚನಗಳನ್ನು ಗಮನದಲ್ಲಿಟ್ಟು ಮಾತಾಡಿದರೆ ಸಿಖ್ಖರು ಮಾಡುತ್ತಿರುವುದು ಸರಿಯಲ್ಲ ಎಂದು ಹೇಳಬಹುದು. ಅವರು ತಮ್ಮನ್ನು ತಾವೇ ನಾಶ ಮಾಡಿಕೊಳ್ಳುವ ದಾರಿ ಹುಡುಕಿಕೊಂಡಿದ್ದಾರೆ. (51)

ಮತ್ತೊಬ್ಬ ಸಿಖ್ ಮಹನೀಯನೊಂದಿಗೆ ತಾನು ಸಿಖ್ ಆಗುವ ದಾವೆಯನ್ನು ಉಲ್ಲೇಖಿಸುತ್ತಾ ಗಾಂಧೀಜಿ ಹೀಗೆ ಹೇಳಿದ್ದಾರೆ:-

ಸಿಖ್ ಸ್ನೇಹಿತರೊಬ್ಬರು ಇಂದು ನನ್ನನ್ನು ಭೇಟಿ ಮಾಡಿದ್ದರು. ಅವರು ಹುಟ್ಟಿನಿಂದಲೇ ಒಬ್ಬ ಸಿಖ್ ಆಗಿದ್ದಾರೆ ಆದರೆ ಗ್ರಂಥ ಸಾಹೇಬರ ಆದೇಶಗಳ ಪ್ರಕಾರ

ಅವರು "ನಾನೊಬ್ಬ ನಿಜವಾದ ಸಿಖ್ ಎಂದು ದಾವೆಯಿಂದ ಹೇಳುವುದಕ್ಕಾಗುವುದಿಲ್ಲ" ಎಂದು ಹೇಳಿದರು. ಆಗ ಆ ಸಹೋದರನಿಗೆ – ನಿಮ್ಮ ದೃಷ್ಟಿಯಲ್ಲಿ ಅಂತಹ ಸಿಖ್ ಯಾರಾದರೂ ಇದ್ದಾರೆಯೇ? ಎಂದು ಕೇಳಿದೆ. ಆಗ ಅವರಿಗೆ ಒಬ್ಬ ಸಿಖ್ಖನ ಹೆಸರನ್ನೂ ಸಹ ಹೇಳಲಿಕ್ಕಾಗಲಿಲ್ಲ. ಆಗ ನಾನು ವಿನಯದಿಂದ ಹೇಳಿದೆ – ನಾನೇ ಆ ಸಿಖ್ ಎಂದು ದಾವೆಯಿಂದ ಹೇಳಬಲ್ಲೆ. ನಾನು ಗ್ರಂಥ ಸಾಹೇಬರ ತತ್ವಗಳಿಗೆಗನುಸಾರವಾಗಿ ನಿಜವಾದ ಜೀವನವನ್ನು ನಡೆಸಲು ಪ್ರಯತ್ನಿಸುತ್ತಿದ್ದೇನೆ. ಒಮ್ಮೆ ನಾನು ಖಾನ ಸಾಹೇಬರ ದರ್ಬಾರು ನನಗೆ ಸಿಖ್‌ರ ನಿಜವಾದ ಸಹೋದರ ಎಂದು ಹೇಳಿತ್ತು. ಗುರುನಾನಕರು, ಹಿಂದೂ–ಮುಸಲ್ಮಾನರ ನಡುವೆ ಭೇದಭಾವ ಮಾಡುತ್ತಿರಲಿಲ್ಲ. ಅವರ ದೃಷ್ಟಿಯಲ್ಲಿ ಪ್ರತಿಯೊಬ್ಬ ಮನುಷ್ಯ ಒಂದೇ ಆಗಿದ್ದ. ನನ್ನ ಸನಾತನ ಧರ್ಮವು ಹೀಗೆಯೇ. ನಾನು ಒಬ್ಬ ನಿಜವಾದ ಹಿಂದೂ ಆಗಿ ಒಬ್ಬ ಮುಸಲ್ಮಾನನಾಗುವ ದಾವೆ ಮಾಡುತ್ತೇನೆ. ನಾನು ನನ್ನ ದಿನನಿತ್ಯದ ಪ್ರಾರ್ಥನೆಯಲ್ಲಿ ದೇವರು ಒಬ್ಬನೇ ಅವನೇ ಹಗಲು–ಇರುಳನ್ನು ಮತ್ತು ಇಡೀ ಭೂಮಂಡಲವನ್ನು ರಕ್ಷಿಸುತ್ತಿರುವುದು ಎಂಬ ಕುರಾನ್ ಶರೀಫ್‌ನ ಆನಾಯತ್ ನ್ನು ಪದೇ–ಪದೇ ಪಠಿಸುತ್ತೇನೆ. (52)

ಕುರಾನ್ ಶರೀಫ್‌ನ ಆಯತ್

ಕುರಾನಿನ ಆಯತ್‌ನ ಬಗ್ಗೆ ಹೇಳಬೇಕೆಂದರೆ, ನಾವು ನಿಮ್ಮ ಪ್ರಾರ್ಥನೆಯಲ್ಲಿ ಇದನ್ನು ಪಠಿಸಲು ಬಿಡುವುದಿಲ್ಲ ಎಂದು ಕೆಲವರು ಗಾಂಧೀಜಿಯ ಪ್ರಾರ್ಥನಾ ಸಭೆಯಲ್ಲಿ ಆಕ್ಷೇಪಿಸಿದರು. ಆದರೆ ಆಕ್ಷೇಪಿಸಿದವರ ಸಂಖ್ಯೆ ಬಹಳ ಕಡಿಮೆ ಇತ್ತು. ಆದರೂ ಗಾಂಧೀಜಿ ಅವರ ಮಾತನ್ನು ಬಹಳ ಸಂಯಮದಿಂದ ಕೇಳಿ ಪ್ರಾರ್ಥನೆಯನ್ನು ನಿಲ್ಲಿಸಿದರು. ಅನೇಕ ಬಾರಿ ಪ್ರಾರ್ಥನೆ ಸ್ಥಗಿತವಾಗುತ್ತಿತ್ತು ಮತ್ತು ಸಾವಿರಾರು ಸಹೋದರ – ಸಹೋದರಿಯರು ಪ್ರಾರ್ಥನೆಯ ಅಮೃತ ವಚನಗಳಿಂದ ವಂಚಿತರಾಗುತ್ತಿದ್ದರು. ಕೊನೆಗೆ ಅದನ್ನು ವಿರೋಧಿಸುವವರ ಸಂಖ್ಯೆ ಒಂದಕ್ಕೆ ಇಳಿಯಿತು. ಪ್ರಾರ್ಥನೆಯಲ್ಲಿ ಭಾಗವಹಿಸಿದ್ದ ಉಳಿದವರಿಗೆ ಗಾಂಧೀಜಿ ಕೇಳಿದಾಗ, ಪ್ರಾರ್ಥನೆಯಲ್ಲಿ ಕುರಾನಿನ ಈ ಆಯತನ್ನು ಖಂಡಿತವಾಗಿ ಓದಲೇಬೇಕು ಎಂದು ಹೇಳಿದರು. ಆಗ ಆಯತನ್ನು ವಿರೋಧಿಸಿದವರ ಮೇಲೆ ಯಾವುದೇ ಬಲ ಪ್ರಯೋಗ ಮಾಡುವುದಿಲ್ಲ ಎಂದು ಪ್ರಮಾಣ ಮಾಡಿದ ನಂತರ ಗಾಂಧೀಜಿ ಅವರು ಪ್ರಾರ್ಥನೆಯನ್ನು ಆರಂಭಿಸಿದರು. ಯಾವ ಆಯತ್‌ನ್ನು ವಿರೋಧಿಸಿದ್ದರೋ ಅದರ ಅರ್ಥವನ್ನು ತಿಳಿ ಹೇಳುತ್ತಾ ಗಾಂಧೀಜಿ ಹೀಗೆ ಹೇಳಿದರು:–

ಪ್ರಾರ್ಥನಾ ಸಭೆಯಲ್ಲಿ ನಾವು ಓದುವ ಕುರಾನಿನ ಆಯತ್ ಬಹಳ ಉತ್ಕೃಷ್ಟವಾದ ಅರ್ಥವನ್ನು ಹೊಂದಿದೆ. ನಮ್ಮ ಮಂತ್ರಗಳಲ್ಲಿ ಏನಿದಿಯೋ ಅದೇ ಇಲ್ಲಿರುವುದು.

ಇದನ್ನು ಓದಿದರೆ ಸಾಕು ಪುಣ್ಯ ಬರುತ್ತದೆ. ಕುರಾನ್ ಶರೀಫನ ಈ ಆಯತ್ ತುಂಬ ಅರ್ಥ ಗರ್ಭಿತವಾಗಿದೆ. ಅದರ ಅರ್ಥ ತಿಳಿದೋ ಅಥವ ತಿಳಿಯದೋ ಸರಿಯಾಗಿ ಉಚ್ಚರಿಸಿದರೆ ಸಾಕು ಪುಣ್ಯ ಸಿಗುತ್ತದೆ. ಅದರ ಸಾರಾಂಶ ಇಷ್ಟೇ– 'ನಾವು ಭಗವಂತನನ್ನು ಪ್ರಾರ್ಥಿಸುತ್ತೇವೆ. ಆತ ಒಬ್ಬನೇ. ಅವನನ್ನು ಯಾವುದೇ ಹೆಸರಿನಿಂದ ಕರೆಯಿರಿ. ಅವನ ಹೆಸರು ಅಲ್ಲಾಹ್.' ಅವನು ಹೇಗಿದ್ದಾನೆ? ಇದರಲ್ಲಿ ಅವನ ವ್ಯಕ್ತಿತ್ವವನ್ನು ವಿವರಿಸಲಾಗಿದೆ. 'ಅವನು ದಯಾಮಯಿ. ಕರುಣಾಮಯಿ. ವಾತ್ಸಲ್ಯಮಯಿ. ದೇವರು ಒಬ್ಬನೇ. ನೀನೇ ನಮ್ಮನ್ನು ಸೈತಾನನಿಂದ ರಕ್ಷಿಸಲು ಸಾಧ್ಯ. ಸೈತಾನ ನಮ್ಮನ್ನು ನಾಶ ಪಡಿಸುತ್ತಾನೆ. ಪಾಪ ಮಾಡಿಸುತ್ತಾನೆ. ನೀನೆ ನಮ್ಮನ್ನು ಆ ಕಂಟಕದಿಂದ ರಕ್ಷಿಸಲು ಸಾಧ್ಯ. ಮನುಷ್ಯ ಏನು ಮಾಡುವುದಿಲ್ಲ, ಎಲ್ಲಾ ಮಾಡಿಸುವುದು ಭಗವಂತನೆ. ನೀನೇ ನಮ್ಮನ್ನು ಸೈತಾನನಿಂದ ರಕ್ಷಿಸು. ನಾವು ತೃಣ ಸಮಾನರು. ಸಾಗರದ ಒಂದು ಹನಿಗೆ ಸಮಾನ. ನೀನು ರಕ್ಷಿಸದಿದ್ದರೆ ಸೈತಾನ ನಮ್ಮನ್ನು ಸರ್ವನಾಶ ಮಾಡಿ ಬಿಡುತ್ತಾನೆ. ನೀನು ಮಹಾನ್ . ಎಲ್ಲವೂ ನಿನ್ನಲಿದೆ. ನಿನ್ನ ದಯೆ ಇದ್ದರೆ ನಾವು ಉಳಿಯುತ್ತೇವೆ.'– ನಾನು ಹೇಳುವುದೇನೆಂದರೆ ನಾವು ಈ ಆಯತ್‌ನ್ನು ಎಷ್ಟು ಪಠಿಸಿದರೂ, ಎಷ್ಟು ಜಪಿಸಿದರೂ, ಅದರಂತೆ ಎಷ್ಟು ನಡೆದರೂ ಕಡಿಮೆಯೇ. ಇಡೀ ಪ್ರಪಂಚ ಇದರಂತೆಯೇ ನಡೆಯುತ್ತಿರುವುದು. ಇಷ್ಟು ಉತ್ತಮ ಬೋಧನೆ ಇದ್ದರೂ ಸಹ ಮುಸಲ್ಮಾನರ ನಡುವಳಿಕೆ ಏಕೆ ತಪ್ಪಾಗಿದೆ? ಎಂದು ನೀವು ಕೇಳಬಹುದು. ಆಗ ನಾನು ಹೇಳುತ್ತೇನೆ ಹಿಂದೂಗಳು ಗಾಯಿತ್ರಿಮಂತ್ರದಂತೆ ಎಲ್ಲಿ ನಡೆಯುತ್ತಾರೆ? ಎಷ್ಟು ದೊಡ್ಡ ಮಂತ್ರ ನಾವು ಯಾವಾಗಲೂ 'ಈಶಾವಾಸ್ಯಮಿದಂ ಸರ್ವಂ' ಎಂಬ ಉಪನಿಷತ್ತಿನ ಮಂತ್ರವನ್ನು ಓದುತ್ತೇವೆ. ಅಂದರೆ ಪ್ರಪಂಚದಲ್ಲೆಡೆ ಈಶ್ವರ ವ್ಯಾಪಿಸಿದ್ದಾನೆ. ಎಲ್ಲವನ್ನು ಕೊಡುವವನು ಅವನೇ. ನಮ್ಮ ಬಳಿ ಇರುವುದೆಲ್ಲವೂ ಭಗವಂತನದ್ದೆ. ನಾವು ಎಲ್ಲವನ್ನು ತ್ಯಾಗ ಮಾಡಬೇಕು. ನಮ್ಮ ಪಾಲಿನದನ್ನು ಮಾತ್ರ ಅನುಭವಿಸಬೇಕು. ಯಾವುದು ನಮ್ಮದಲ್ಲ. (ಮನೆ–ಮಠ, ಆಸ್ತಿ–ಪಾಸ್ತಿ) ಭಗವಂತನಿಗೆ ಅರ್ಪಿಸಬೇಕು. ಇದು ಎಷ್ಟು ಒಳ್ಳೆಯ ಮಾತಲ್ಲವೇ?. ಬೇರೆಯವರ ಸಂಪತ್ತಿಗಾಗಿ, ಬೇರೆಯವರ ಆಸ್ತಿಗಾಗಿ ಆಸೆ ಪಡಬಾರದು. ಅದನ್ನು ಬಯಸಲುಬಾರದು. ಅದರಲ್ಲಿ ಈ ನೀತಿ ಪಾಠಗಳಿವೆ. ಪ್ರತಿಯೊಬ್ಬರೂ ಈ ಮಂತ್ರದಂತೆ ನಡೆದರೆ ಇಡೀ ಪ್ರಪಂಚ ಸರಿಯಾಗುವುದು. ಈ ಮಂತ್ರದಲ್ಲಿ ಹಿಂದೂಗಳ ಹೆಸರು ಸಹ ಇಲ್ಲ, ಸಿಖ್ಖರು ಇದರಂತೆ ನಡೆಯಲಿ. ಅವರು ಒಪ್ಪುವುದಿಲ್ಲ ಎಂದರೆ ಹೇಗೆ? ಇಂದು ನಾವು ಪ್ರಪಂಚದಲ್ಲಿ ಎಷ್ಟು ಭಯಂಕರ ದೃಶ್ಯಗಳನ್ನು ನೋಡುತ್ತಿದ್ದೇವೆ? ಅವು ಜರುಗಬೇಕಿತ್ತೇ? ಅವನ ಅಪ್ಪಣೆಯಂತೆ ಪ್ರಪಂಚ ನಡೆಯದಿದ್ದರೆ ಹೇಗೆ? ಪ್ರಪಂಚದಲ್ಲಿರುವವರೆಲ್ಲ ಕೆಟ್ಟವರು ಎಂದು ನಾನು ಹೇಳುವುದಿಲ್ಲ. ಹಿಂದೂಗಳೇನು ದೇವದೂತರಲ್ಲ, ಸಿಖ್ಖರೆಲ್ಲಾ

ಕೆಟ್ಟವರಲ್ಲ ಮತ್ತು ಮುಸಲ್ಮಾನರೆಲ್ಲಾ ದೈವಪುರುಷರೇನಲ್ಲ. ಎಲ್ಲರಲ್ಲೂ ಒಳ್ಳೆಯತನ ಮತ್ತು ಕೆಟ್ಟತನ ಎರಡು ಇರುತ್ತದೆ (53)

ಕೆಡುಕಿನ ಉತ್ತರ ಒಳಿತಿನಿಂದ

ಗಾಂಧೀಜಿಯು ಕೆಡುಕಿನ ಉತ್ತರವನ್ನು ಕೆಡುಕಿನಿಂದ ಕೊಡುವ ಸಿದ್ಧಾಂತವನ್ನೇ ಧರ್ಮ ವಿರೋಧಿ ಎಂದು ಪ್ರತಿಪಾದಿಸುತ್ತಾರೆ. ಒಂದು ವೇಳೆ ಪಾಕಿಸ್ತಾನದ ಮುಸಲ್ಮಾನರು ಹಿಂಸೆಯ ಕಾರಣಕರ್ತರಾದರೆ ಅದರ ಸೇಡನ್ನು ಹಿಂದೂಸ್ತಾನದ ಮುಸಲ್ಮಾನರಿಂದ ತೆಗೆದುಕೊಳ್ಳುವುದು ಯಾವ ನ್ಯಾಯ? ಎಂದು ಕೇಳುತ್ತಾರೆ. ಕೆಡುಕನ್ನು ಒಳಿತಿನಿಂದ ಉತ್ತರಿಸುವುದರಲ್ಲಿ ಗಾಂಧೀಜಿಗೆ ವಿಶ್ವಾಸವಿತ್ತು ಆದ್ದರಿಂದ ಅವರು ಸ್ಪಷ್ಟವಾಗಿ ಹೀಗೆ ಹೇಳಿದ್ದಾರೆ:-

"ಕೆಟ್ಟ ಕೆಲಸ ಮಾಡುವವನು, ದುಷ್ಟ ಮಾತುಗಳನ್ನಾಡಿ ಮೃಗವಾಗುತ್ತಾನೆ, ಅನಾಗರಿಕನಾಗುತ್ತಾನೆ. ಆಗ ನಾನು ಸಹ ಅವನಂತೆ ಅನಾಗರಿಕನಾಗಲೇ...? ಪಾಕಿಸ್ತಾನದವರು ಅನಾಗರಿಕರಾದರೆ ಅವರನ್ನು ನೋಡಿ ಇಲ್ಲಿಯ ಹಿಂದೂ ಮತ್ತು ಸಿಖ್‌ರು ಸಹ ಅನಾಗರಿಕರಾದರೆ, ಒಬ್ಬ ಅನಾಗರಿಕ ಮತ್ತೊಬ್ಬ ಅನಾಗರಿಕನಿಗೆ ಏನು ಹೇಳಲು ಸಾಧ್ಯ? ಆದ್ದರಿಂದ ನಾನು ನಿಮಗೆ ಹೇಳುವುದೇನೆಂದರೆ-ಹಿಂದೂಸ್ತಾನದ ಹಿಂದೂಗಳು, ಮುಸಲ್ಮಾನರು ಮತ್ತು ಸಿಖ್ಖರು, ಹಿಂದೂ ಧರ್ಮವನ್ನು, ಇಸ್ಲಾಂ ಧರ್ಮವನ್ನು, ಸಿಖ್ ಧರ್ಮವನ್ನು ಕಾಪಾಡುವ ಕೆಲಸ ಮಾಡಿ. ನಾವು ಸಭ್ಯರಾದರೆ ಪಾಕಿಸ್ತಾನದ ಮುಸಲ್ಮಾನರೂ ಸಭ್ಯರಾಗಬೇಕಾಗುತ್ತದೆ. ಇದು ದೇವರ ಕಾನೂನು. ಈ ಕಾನೂನನ್ನು ನಾವು ಬದಲಿಸಲು ಸಾಧ್ಯವಿಲ್ಲ. ಇದನ್ನು ಹೇಳುತ್ತಿರುವುದು ಧರ್ಮವನ್ನು ಪಾಲಿಸುವ ಒಬ್ಬ ವೃದ್ಧ ವ್ಯಕ್ತಿ. ಈತ ಎಲ್ಲರ ಒಳಿತಿಗಾಗಿ ದುಡಿದಿದ್ದಾನೆ. ಈತ ತನ್ನ ಜೀವನದ 79 ವರ್ಷಗಳಿಂದ ಸುಮಾರು ಅನುಭವವನ್ನು ಗಳಿಸಿದ್ದಾನೆ. ನಾನು ಕಣ್ಣು ಮುಚ್ಚಿ ಪ್ರಪಂಚವನ್ನು ಸುತ್ತಿಲ್ಲ. ಭಗವಂತನ ದಯೆ ಇದ್ದಿದ್ದರಿಂದಲೇ ನಾನು ದಕ್ಷಿಣ ಆಫ್ರಿಕಾದಂತಹ ಕಾಡಿನ ನಾಡಿನಲ್ಲಿರಲು ಸಾಧ್ಯವಾದದ್ದು ಆದ್ದರಿಂದ ನಾನು ನಿಮಗೆ ನನ್ನ ಅನುಭವದಿಂದ ಹೇಳುವುದೇನೆಂದರೆ ಕೆಡಕನ್ನು ಕೆಡಕಿನಿಂದ ಹೋಗಲಾಡಿಸುವುದು ನಮ್ಮ ಕೆಲಸವಲ್ಲ. ಕೆಡಕನ್ನು ಒಳಿತಿನಿಂದ ಹೋಗಲಾಡಿಸುವುದೇ ನಿಜವಾದ ಮಾನವೀಯತೆ. ಯಾರು ಒಳಿತಿನ ಬದಲಿಗೆ ಒಳಿತನ್ನು ಮಾಡುತ್ತಾನೋ ಅವನು ಒಬ್ಬ ವ್ಯಾಪಾರಿ. ಸುಳ್ಳು ವ್ಯಾಪಾರಿ. ನಾನು ಸಹ ಒಬ್ಬ ವ್ಯಾಪಾರಿ ಆದರೆ ನಿಜವಾದ ವ್ಯಾಪಾರಿ. ನೀವು ಸುಳ್ಳು ವ್ಯಾಪಾರಿಗಳಾಗಬೇಡಿ. ಯಾರು ಕೆಡಕಿನ ಬದಲಿಗೆ ಒಳಿತನ್ನು ಮಾಡುತ್ತಾರೋ ಅವರೇ ನಿಜವಾದ ವ್ಯಾಪಾರಿಗಳು. ಇದನ್ನು ನಾನು ಬಾಲ್ಯದಲ್ಲೇ ಕಲಿತೆ ಮತ್ತು ದೀರ್ಘ ಅನುಭವದಿಂದ ಇದೇ ಸತ್ಯ ಎಂದು

ತಿಳಿದುಕೊಂಡೆ ಆದ್ದರಿಂದ ನಾನು ನಿಮಗೆ ಹೇಳುವುದಿಷ್ಟೇ ಕೆಡಕಿಗೆ ಒಳತಿನಿಂದ ಉತ್ತರಿಸಿ. (54)

ಇದೇ ಮಾತನ್ನು ಗಾಂಧೀಜಿ ಎರಡು ದಿನಗಳ ನಂತರ ಸ್ಪಷ್ಟವಾಗಿ ಮತ್ತೆ ಪುರ್ನರುಚ್ಚರಿಸಿದರು:–

ನಾನು ದೆಹಲಿಗೆ ಬಂದಿದ್ದೇನೆ. ಈ ಮೊದಲೇ ನಾನು ನಿಮಗೆ ಹೇಳಿದ್ದೇನೆ. ನಾನು ಇಲ್ಲಿಗೆ ಬಂದಿರುವುದು ಸಾಯುವುದಕ್ಕೆ. ಒಂದು ವೇಳೆ ಹಿಂದೂಗಳು ಮತ್ತು ಸಿಖ್ಖರು ಹುಚ್ಚರಂತೆ ಮುಸಲ್ಮಾನರನ್ನು ಕೊಂದರೆ ನಾನು ಅದಕ್ಕೆ ಸಾಕ್ಷಿಯಾಗಲು ಬಯಸುವುದಿಲ್ಲ. ಒಂದು ವೇಳೆ ಮುಸಲ್ಮಾನರು ಎಲ್ಲಾ ಹಿಂದೂಗಳನ್ನು ಮತ್ತು ಸಿಖ್ಖರನ್ನು ಅಪರಾಧಿಗಳೆಂದು ಮತ್ತು ಹಿಂದೂಗಳು ಮತ್ತು ಸಿಖ್ಖರು ಮುಸಲ್ಮಾನರನ್ನು ಅಪರಾಧಿಗಳೆಂದು ಭಾವಿಸಿದರೆ ಇಬ್ಬರೂ ತಪ್ಪು ಮಾಡಿದಂತೆ. ನನಗೆ ಎಲ್ಲರೂ ಒಂದೇ. ನನ್ನ ದೃಷ್ಟಿಯಲ್ಲಿ ಹಿಂದೂ ಇರಲಿ, ಸಿಖ್ ಇರಲಿ, ಮುಸಲ್ಮಾನನಿರಲಿ ಎಲ್ಲರೂ ಸಮಾನರು. ಇವರಲ್ಲಿ ಯಾರು ಸತ್ಯವಂತರೋ ಅವರಿಗೆ ಈಶ್ವರ್–ಅಲ್ಲಾಹ ಗೌರವವನ್ನು ದಯಪಾಲಿಸುತ್ತಾನೆ. ದುಷ್ಟರ ದುಷ್ಟತನಕ್ಕೆ ಶಿಕ್ಷಿಸಲು ನೀವ್ಯಾರು? ದುಷ್ಟತನವನ್ನು ಶಿಕ್ಷಿಸುವನು ಆ ಪರ್ವರ್ದಿಗಾರ್. ದುಷ್ಟರು ತಮ್ಮಷ್ಟಕ್ಕೆ ತಾವೇ ಶಿಕ್ಷೆ ಅನುಭವಿಸಲಿದ್ದಾರೆ. ನಾನು ಪ್ರಪಂಚದ ಎಲ್ಲಾ ಧರ್ಮಗಳ ಮೂಲತತ್ವಗಳನ್ನು ಅರ್ಥಮಾಡಿಕೊಂಡಿದ್ದೇನೆ ಆದ್ದರಿಂದ ಹಿಂದೂಗಳಿಗೆ ಮತ್ತು ಸಿಖ್ಖರಿಗೆ ನಾನು ಕೇಳಿಕೊಳ್ಳುವುದೇನೆಂದರೆ ಪಾಕಿಸ್ತಾನದ ಮುಸಲ್ಮಾನರು ಎಷ್ಟೇ ದೊಡ್ಡ ದುಷ್ಟತನ ತೋರಿದರು ನೀವು ಹಿಂದೂಸ್ತಾನದ ಮುಸಲ್ಮಾನರೊಂದಿಗೆ ಒಳ್ಳೆತನದಿಂದಲೇ ವರ್ತಿಸಿ. ಕನಿಷ್ಠ ಪಕ್ಷ ನಾನು ನಿಮ್ಮಿಂದ ಬಯಸುವುದು ಇಷ್ಟೇ ಒಂದು ವೇಳೆ ದುಷ್ಟತನದ ಸೇಡು ತೀರಿಸಿಕೊಳ್ಳಲೇ ಬೇಕೆಂದರೆ ಒಳ್ಳೆತನದಿಂದ ತೀರಿಸಿಕೊಳ್ಳಿ. ನಾವು ಹೀಗೆ ಮಾಡದಿದ್ದರೆ ನಮ್ಮ ಮನುಷ್ಯತ್ವವನ್ನು ಕಳೆದುಕೊಳ್ಳುತ್ತೇವೆ. (55)

ಪೋಲೀಸ್ ಮತ್ತು ಮಿಲಿಟರಿಗೆ ಎಚ್ಚರಿಕೆ

1946 ಮತ್ತು 1947ರ ನಡುವೆ ನೌಖಾಲಿ, ಕಲ್ಕತ್ತಾ, ಬಿಹಾರ್, ದೆಹಲಿ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳ ಪ್ರತಿಯೊಂದು ಕಡೆ ಪೊಲೀಸರ ವರ್ತನೆಯಲ್ಲಿ ಸಾಂಪ್ರದಾಯಿಕತೆ ಎದ್ದು ಕಾಣುತ್ತಿತ್ತು. ಇದರ ಬಗ್ಗೆ ಗಾಂಧೀಜಿಗೆ ಬಹಳ ದೂರುಗಳು ಬಂದವು. ಆಗ ಅವರು 18ನೇ ಸೆಪ್ಟೆಂಬರ್ 1947ರ ಪ್ರಾರ್ಥನಾ ಪ್ರವಚನದಲ್ಲಿ ಎಚ್ಚರಿಸುತ್ತಾ ಹೀಗೆ ಹೇಳಿದರು:–

ನಮ್ಮ ರಿಸರ್ವ್ ಪೊಲೀಸಿನಲ್ಲಿ, ಮಿಲಿಟರಿ ಸೈನಿಕರಲ್ಲಿ ಹಿಂದೂಗಳಿದ್ದಾರೆ, ಸಿಖ್‌ರಿದ್ದಾರೆ, ಕ್ರಿಸ್ತರಿದ್ದಾರೆ ಅವರೆಲ್ಲರು ರಕ್ಷಕರಾಗುವ ಬದಲು ಭಕ್ಷಕರಾಗಿದ್ದಾರೆ

ಎಂಬ ದೂರುಗಳು ನನಗೆ ಬಂದಿವೆ. ಇದು ಎಷ್ಟು ನಿಜ ಮತ್ತು ಎಷ್ಟು ಸುಳ್ಳು ಎಂದು ನನಗೆ ಗೊತ್ತಿಲ್ಲ ಆದರೆ ಆ ಪೋಲೀಸರಿಗೆ ಮತ್ತು ಅವರ ಅಧಿಕಾರಿಗಳಿಗೆ ನಾನು ಕೇಳಿಕೊಳ್ಳುವುದೇನೆಂದರೆ ಅವರು ಸಜ್ಜನರಾಗಲಿ. ಸೈನಿಕರಲ್ಲಿ ಕೆಲವರು ದರೋಡೆಕೋರರನ್ನು ತಡೆಯುವ ಬದಲು ದಂಗೆ-ದರೋಡೆಗಳಲ್ಲಿ ಭಾಗಿಯಾಗುತ್ತಿದ್ದಾರೆ ಎಂಬ ಸುದ್ದಿಯು ಬಂದಿದೆ. ಬಹುಶಃ ಇದು ತಪ್ಪಿರಬಹುದು, ಒಂದು ವೇಳೆ ಇದು ನಿಜವಾಗಿದ್ದರೆ ಅಂತಹ ಸೈನಿಕರಿಗೆ ನಾನು ಹೇಳುವುದಿಷ್ಟೆ, ಇಂದು ಅವರು ಸ್ವತಂತ್ರ ಭಾರತದ ಸೈನಿಕರಾಗಿದ್ದಾರೆ ಅವರು ಮುಸಲ್ಮಾನರ ಶತ್ರುಗಳಾಗಬಾರದು. ಅವರು ಮುಸಲ್ಮಾನರನ್ನು ರಕ್ಷಿಸಬೇಕಾಗಿದೆ. (56)

ಇದು ಧರ್ಮವಲ್ಲ ಅಧರ್ಮ

ಭಾರತ ಸರ್ಕಾರದ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರುವಿನಿಂದ ದೆಹಲಿಯ ಮುಸಲ್ಮಾನರ ಕಗ್ಗೊಲೆಯನ್ನು ನಿಲ್ಲಿಸಲಾಗಲಿಲ್ಲ. ಗಾಂಧೀಜಿಯ ನೋವು ದಿನದಿಂದ ದಿನಕ್ಕೆ ಹೆಚ್ಚಾಯಿತು. ಪರಸ್ಪರ ಕಗ್ಗೊಲೆಗಳ ನಡುವೆ ಒಬ್ಬ ಸಹೋದರ ಮತ್ತೊಬ್ಬ ಸಹೋದರನ ರಕ್ತದಾಹಿಯಾದಾಗ ಅವರಿಗೆ ತಮ್ಮ ಜೀವನದ ಜವಾಬ್ದಾರಿಯ ಸ್ವರೂಪದ ಅರಿವಾಯಿತು. ಪಾಕಿಸ್ತಾನ ಆದ ನಂತರ ಹಿಂದೂಸ್ತಾನದಲ್ಲಿ ಮುಸಲ್ಮಾನರು ಏಕೆ ಇರಬೇಕು ಎಂದು ಜನ ಸಾರ್ವಜನಿಕವಾಗಿ ಮಾತನಾಡತೊಡಗಿದರು ಆಗ ಗಾಂಧೀಜಿ ಹೀಗೆ ಹೇಳಿದರು:-

"ಇಂದು ನನಗೆ ಬಂದ ಪತ್ರದ ಒಕ್ಕಣೆ ಹೀಗಿದೆ. 'ಈಗ ಪಶ್ಚಿಮ ಪಾಕಿಸ್ತಾನದಲ್ಲಿ ಮುಸಲ್ಮಾನೇತರರು ವಾಸಿಸಲು ಸಾಧ್ಯವಿಲ್ಲ ಎಂದ ಮೇಲೆ ಹಿಂದುಸ್ತಾನದಲ್ಲಿ ಮುಸಲ್ಮಾನರೇಕಿರಬೇಕು? ಎಂದು ಬರೆಯಲಾಗಿತ್ತು. ಇದಕ್ಕೆ ನಾನು ಹೇಳುವುದೇನೆಂದರೆ:-

"ಒಬ್ಬ ಹೊಲಸು ಮಾಡಿದರೆ ನಾವು ಅದರ ನಕಲೇಕೆ ಮಾಡಬೇಕು. ಪಾಕಿಸ್ತಾನದಲ್ಲಿ ಒಬ್ಬ ಮುಸಲ್ಮಾನೇತರನು ಇರಬಾರದು ಎನ್ನುವುದನ್ನು ಇಸ್ಲಾಂ ತತ್ವಗಳು ಎಂದೂ ಸಮರ್ಥಿಸುವುದಿಲ್ಲ. ಪ್ರಪಂಚದಲ್ಲೆಡೆ ಇಸ್ಲಾಮಿ ರಾಜ್ಯಗಳ ಆಡಳಿತ ಹರಡಿದೆ. ಎಲ್ಲೂ ಸಹ ಮುಸಲ್ಮಾನೇತರರು ಇರಲೇಬಾರದೆಂಬ ಕಾನೂನಿಲ್ಲ. ಪ್ರಪಂಚದ ಎಲ್ಲಾ ಇಸ್ಲಾಮಿ ರಾಜ್ಯಗಳಲ್ಲಿ ಮುಸಲ್ಮಾನೇತರರು ಸುಖ ಶಾಂತಿಯಿಂದ ಇದ್ದಾರೆ. ಅವರ ಬಳಿ ಸಕಲ ಸಂಪತ್ತಿದೆ ಅಂದ ಮೇಲೆ ಈಗ ಪಾಕಿಸ್ತಾನದಲ್ಲಿ ಹೊಸ ಇಸ್ಲಾಂ ಆರಂಭವಾಗಿದೆಯೇ? ಇಸ್ಲಾಂಗೆ 1300 ವರ್ಷಗಳ ಇತಿಹಾಸವಿದೆ. ಅದರ ಹಿಂದೆ ಸಾಕಷ್ಟು ತಪಸ್ಸು ನಡೆದಿದೆ. ಅನೇಕ ಬಲಿದಾನಗಳಾಗಿವೆ. ನನ್ನ ದೃಷ್ಟಿಯಲ್ಲಿ ಮುಸಲ್ಮಾನೇತರರನ್ನು ಶತ್ರುಗಳೆಂದು ಹೇಳುವ ಇಸ್ಲಾಂ ಧರ್ಮ ನಿಜವಾದ ಇಸ್ಲಾಂ ಧರ್ಮವೇ ಅಲ್ಲ. ನಿಜವಾದ

ಮುಸಲ್ಮಾನರು ಇದನ್ನು ಸರಿ ಎಂದು ಒಪ್ಪುವುದಿಲ್ಲ. ಯೋಚಿಸಿ! ಇದರರ್ಥ ಇಷ್ಟೇ ಹಿಂದೂವನ್ನು ಬಿಟ್ಟು ಬೇರೆ ಯಾರೂ ವಾಸಿಸಬಾರದು ಎಂದು ಹೇಳುವ ಹಿಂದೂ ಧರ್ಮ ನಿಜವಾದ ಹಿಂದೂ ಧರ್ಮವಲ್ಲ. ಕ್ರೈಸ್ತರನ್ನು ಬಿಟ್ಟು ಬೇರೆ ಯಾರೂ ವಾಸಿಸಬಾರದು ಎಂದು ಹೇಳುವ ಕ್ರೈಸ್ತ ಧರ್ಮ ನಿಜವಾದ ಕ್ರೈಸ್ತ ಧರ್ಮವಲ್ಲ. ನನ್ನ ದೃಷ್ಟಿಯಲ್ಲಿ ಇದು ಧರ್ಮವೇ ಅಲ್ಲ–ಅಧರ್ಮ. ನಾಗರಿಕತೆಯಲ್ಲ–ಅನಾಗರಿಕತೆ. ಪ್ರಪಂಚ ಹೀಗೆ ನಡೆದೂ ಇಲ್ಲ, ನಡೆಯುತ್ತಲೂ ಇಲ್ಲ, ಮುಂದೆ ನಡೆಯುವುದೂ ಇಲ್ಲ. ಹಾಗಾದರೆ ನಾವು ಹೊಸ ಇತಿಹಾಸ ಬರೆಯುವ ಗುಂಗಿನಲ್ಲೇಕಿದ್ದೇವೆ? ಹೀಗೆ ಮಾಡಿ ನಾವು ಹಿಂದೂಸ್ತಾನವನ್ನು ಹಾಳು ಮಾಡಬಾರದು ಮತ್ತು ಪಾಕಿಸ್ತಾನವನ್ನು ಸಹ ಹಾಳಾಗಲು ಬಿಡಬಾರದು. ಇಂದು ಇಲ್ಲಿ ನಾಲ್ಕುವರೆ ಕೋಟಿ ಮುಸಲ್ಮಾನರಿದ್ದಾರೆ ಅವರು ಇಲ್ಲಿಂದ ಹೊರಟು ಹೋಗಬೇಕೆ? ಜಾಮಿಯಾ ಮಸೀದಿ ಇದೆ ಅದನ್ನು ತೆಗೆದುಕೊಂಡು ಹೋಗ ಬೇಕೆ? ಅಲಿಗಢ ಯುನಿವರ್ಸಿಟಿ ಇದೆ ಅದನ್ನು ತೆಗೆದುಕೊಂಡು ಹೋಗಬೇಕೆ? ಇಲ್ಲಿರುವ ಎಲ್ಲಾ ಗೋರಿ ಸ್ಮಾರಕಗಳನ್ನು ಪಾಕಿಸ್ತಾನಕ್ಕೆ ತೆಗೆದುಕೊಂಡು ಹೋಗಬೇಕೆ? ಅಲ್ಲಿ ವೆಸ್ಟ್ ಪಂಜಾಬಿನಲ್ಲಿರುವ ಗುರುದ್ವಾರವನ್ನು ಈಸ್ಟ್ ಪಂಜಾಬಿಗೆ ತರ ಬೇಕೆ? ಪಾಕಿಸ್ತಾನದಲ್ಲಿರುವ ಹಿಂದೂಗಳ ದೇವಸ್ಥಾನಗಳನ್ನು ಮತ್ತು ಸಿಖ್‌ರ ಗುರುದ್ವಾರಗಳನ್ನು ಇಲ್ಲಿ ಹಿಂದೂಸ್ತಾನಕ್ಕೆ ತಂದು ಬಿಡಬೇಕೆ? ಇದರ ಅರ್ಥ ಏನೆಂದರೆ ನಾವು ನಮ್ಮನ್ನು ನಾಶ ಮಾಡಿಕೊಳ್ಳುವುದು. ನಮ್ಮ ಧರ್ಮವನ್ನು ನಮ್ಮ ಜಾತಿಯನ್ನು ಧ್ವಂಸಗೊಳಿಸುವುದು. ನಾನು ಈ ಧ್ವಂಸದ ಸಾಕ್ಷಿಯಾಗಲು ಬಯಸುವುದಿಲ್ಲ. ಅದಕ್ಕೂ ಮುಂಚೆ ಭಗವಂತ ನನ್ನನ್ನು ಕರೆದುಕೊಳ್ಳಲಿ. ನಾನು ಸತ್ತ ನಂತರ ಹಿಂದುಸ್ತಾನದಲ್ಲಿರುವ ನನ್ನ ಆಲೋಚನೆಯುಳ್ಳ ಜನರು ಈ ಹುಚ್ಚುತನದ ವಿರುದ್ಧ ಹೋರಾಡುತ್ತಾ ಸಾಯಲಿ. (57)

ಗತಕಾಲದ ನೆನಪುಗಳು

ಈ ಪ್ರವಚನದ ಮಾರನೇ ದಿನವೇ ಅವರು ಜಲಿಯನ್ ವಾಲಾಬಾಗ್‌ನ ದಿನಗಳನ್ನು ಮೆಲಕು ಹಾಕುತ್ತಾ ಅಲ್ಲಿ ಹಿಂದೂ–ಮುಸಲ್ಮಾನ ಮತ್ತು ಸಿಖ್ಖರೆಲ್ಲರ ರಕ್ತ ಹೇಗೆ ಒಂದಾಯಿತು ಎಂದು ಪ್ರಾರ್ಥನಾ ಸಭೆಯನ್ನು ಉದ್ದೇಶಿಸುತ್ತಾ ಗದ್ಗದಿತರಾಗಿ ಗಾಂಧೀಜಿ ಹೀಗೆ ಹೇಳಿದರು:–

ಜಲಿಯನ್ ವಾಲಾಬಾಗ್‌ನಲ್ಲಿ ಕಗ್ಗೊಲೆಯಾದಾಗ ಜಲಿಯನ್ ವಾಲಾಬಾಗ್‌ನ ಭೂಮಿಯಲ್ಲಿ ಹಿಂದೂ–ಮುಸಲ್ಮಾನ ಮತ್ತು ಸಿಖ್ಖರ ರಕ್ತ ಒಂದಾಯಿತು. ಈ ರಕ್ತವನ್ನು ಯಾರು ಬೇರ್ಪಡಿಸಲಾರರು ಎಂದು ಎಲ್ಲರೂ ಜೋರಾಗಿ ಹೇಳುತ್ತಿದ್ದರು. ಈಗ ಆ ರಕ್ತ ಹೇಗೆ ಬೇರೆಯಾಯಿತು? ಇಂದು ಹಿಂದೂ ಮುಸಲ್ಮಾನ ಮತ್ತು ಸಿಖ್ಖರು

ಪರಸ್ಪರ ಒಬ್ಬರನ್ನೊಬ್ಬರು ಶತ್ರುಗಳೆಂದು ಭಾವಿಸುತ್ತಿದ್ದಾರೆ. ಅದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಗುತ್ತದೆ. ನನಗೆ ತಿಳಿದಿರುವ ಹಾಗೆ ಇಂದಿಗೂ ಈ ಮೂವರ ರಕ್ತ ಒಂದೇ. ಭಗವಂತನ ಮುಂದೆ ನಾನು ಇದನ್ನು ಸಾಬೀತು ಪಡಿಸಲು ಇಚ್ಛಿಸುತ್ತೇನೆ. ಮನುಷ್ಯರ ಮುಂದೆ ನಾನು ಅಳುವುದಿಲ್ಲ ಆದರೆ ಭಗವಂತನ ಮುಂದೆ ಅಳುತ್ತೇನೆ. ಅವನಲ್ಲಿ ಬೇಡಿಕೊಳ್ಳುತ್ತೇನೆ. ನಾನಂತೂ ಅವನ ಗುಲಾಮ. ಯಾರು ಅಲ್ಲಾಹುನ ಗುಲಾಮರಾಗುತ್ತಾರೋ ಅವರಿಗೆ ಬೇರೆ ಯಾರ ಗುಲಾಮರಾಗುವ ಅವಶ್ಯಕತೆ ಇಲ್ಲ. ನಾನು ಹೀಗೆ ಮಾಡಿದರೆ ಮಾತ್ರ ಬದುಕಲು ಸಾಧ್ಯ. ಇಲ್ಲ ಅಂದರೆ ಭಗವಂತ ನನ್ನನ್ನು ಕರೆದುಕೊಳ್ಳಲಿ. ನಾಚಿಕೆಯಿಂದ ನನ್ನ ತಲೆ ತಗ್ಗುತ್ತದೆ. ನಿನ್ನೆಯವರೆಗೆ ಯಾವ ಹಿಂದೂಗಳು, ಸಿಖ್ಖರು, ಮುಸಲ್ಮಾನರು ಒಬ್ಬರನ್ನೊಬ್ಬರು ಸಹೋದರರೆಂದು ಭಾವಿಸಿದ್ದರೋ ಅವರೇ ಇಂದು ಪರಸ್ಪರ ವೈರಿಗಳಾಗಿದ್ದಾರೆ ಎಂದು ಹೇಳಲು ನಾಚಿಕೆಯಾಗುತ್ತಿದೆ. ಸ್ವಲ್ಪ ಅರ್ಥಮಾಡಿಕೊಳ್ಳಿ ಸಹೋದರರಾದ ಮೇಲೆ ಪರಸ್ಪರ ವೈರಿಗಳಾಗಲು ಹೇಗೆ ಸಾಧ್ಯ?

ಮುಸಲ್ಮಾನರು ಕೃತಘ್ನರಾಗಲು ಸಾಧ್ಯವಿಲ್ಲ

ನಾಲ್ಕೈದು ಸಹೋದರರು ನನ್ನ ಬಳಿ ಬಂದು ಹೀಗೆಂದರು–ಇಲ್ಲಿ ನಾಲ್ಕುವರೆ ಕೋಟಿ ಮುಸಲ್ಮಾನರಿದ್ದಾರೆ. ಅವರು ಯಾವುದೇ ಸಂದರ್ಭದಲ್ಲಿ ವಿದ್ರೋಹಿಗಳಾಗಬಹುದು. ಒಂದು ವೇಳೆ ಹಿಂದುಸ್ತಾನ ಮತ್ತು ಪಾಕಿಸ್ತಾನಗಳ ನಡುವೆ ಯುದ್ಧವಾದರೆ ಅವರು ನಿಗೂಢವಾಗಿ ಪಾಕಿಸ್ತಾನಕ್ಕೆ ಸಹಾಯ ಮಾಡಬಹುದು? ನಾನು ಅವರಿಗೆ ಮತ್ತು ನಿಮಗೆ ಹೇಳುವುದೇನೆಂದರೆ–ನಾಲ್ಕುವರೆ ಕೋಟಿ ಮುಸಲ್ಮಾನರು ಎಂದೂ ಹೀಗೆ ಮಾಡುವುದಿಲ್ಲ. ಒಂದು ವೇಳೆ ನೀವು ಒಳ್ಳೆಯವರಾಗಿದ್ದರೆ, ನಾವು ಒಳ್ಳೆಯವರಾಗಿದ್ದರೆ ಮತ್ತು ಇಲ್ಲಿರುವ ಪ್ರತಿಯೊಬ್ಬ ಹಿಂದೂ ಮತ್ತು ಸಿಖ್ಖರು ಅವರೊಂದಿಗೆ ಒಳ್ಳೆಯತನದಿಂದಿದ್ದರೆ, ಮುಸಲ್ಮಾನರೊಂದಿಗೆ ದ್ವೇಷ ಮಾಡದೇ ಇದ್ದರೆ, ನಾನು ದಾವೆಯಿಂದ ಹೇಳಬಲ್ಲೆ ನಾಲ್ಕೂವರೆ ಕೋಟಿ ಮುಸಲ್ಮಾನರು ಎಂದು ಕೃತಘ್ನರಾಗುವುದಿಲ್ಲ. ನಾವು ವಿಶಾಲ ಹೃದಯಿಗಳಾಗಬೇಕು. ಬಹುಸಂಖ್ಯೆಯಲ್ಲಿದ್ದೇವೆಂದು ಹೇಡಿಗಳಾಗಬಾರದು. ಒಂದು ವೇಳೆ ನಾಲ್ಕುವರೆ ಕೋಟಿ ಮುಸಲ್ಮಾನರು ಹಿಂದೂಸ್ಥಾನಕ್ಕೆ ಕೃತಘ್ನರಾದರೆ ಅವರು ಇಸ್ಲಾಮಿಗೂ ಕೃತಘ್ನರಾದಂತೆ. ಇಸ್ಲಾಮನ್ನು ದ್ವೇಷಿಸಿದಂತೆ. ಒಂದು ವೇಳೆ ನಾವು ದುರುಳರಾಗಿ ಮುಸಲ್ಮಾನರನ್ನು ನಂಬದೇ ಅವರನ್ನು ಇಲ್ಲಿರಲು ಬಿಡದಿದ್ದರೆ ಹಿಂದೂಸ್ತಾನದ ಆಹಾರ ವಿಷವಾಗುತ್ತದೆ..... ಎಲ್ಲಾ ನಾಲ್ಕುವರೆ ಕೋಟಿ ಮುಸಲ್ಮಾನರು ಕೃತಘ್ನರಾಗಲು ಸಾಧ್ಯವೇ ಇಲ್ಲ ಎಂದು ನಾನು ಹೇಳಬಲ್ಲೆ. ಇಡೀ ನಾಲ್ಕುವರೆ ಕೋಟಿ ಮುಸಲ್ಮಾನರನ್ನು ಯಾರು ನೋಡಿದ್ದಾರೆ? ಅವರಲ್ಲಿ ಏಳು ಕೋಟಿ ಮುಸಲ್ಮಾನರು ಹಳ್ಳಿಗಳಲ್ಲಿದ್ದಾರೆ.

ಯು.ಪಿ., ಬಿಹಾರಿನ ಹಳ್ಳಿಗಳಲ್ಲಿ ಹರಿದು ಹಂಚಿ ಹೋಗಿದ್ದಾರೆ. ನಾನು ಅವರನ್ನು ಹಳ್ಳಿಗಳಲ್ಲಿ ನೋಡಿದ್ದೇನೆ. ಅವರು ಎಂದು ಕೃತಘ್ನರಾಗುವುದಿಲ್ಲ. ಸೇವಾಗ್ರಾಮದಲ್ಲೂ ಮುಸಲ್ಮಾನರು ಕೆಲಸ ಮಾಡುತ್ತಿದ್ದಾರೆ. ಸೇವಾಗ್ರಾಮದ ರಕ್ಷಣೆಗಾಗಿ ಪ್ರಾಣವನ್ನು ಪಣವಾಗಿಟ್ಟಿದ್ದಾರೆ. ಅವರು ಪರಸ್ಪರ ಸಹೋದರರರೆಂತೆ ಒಟ್ಟಾಗಿದ್ದಾರೆ. ನಾಲ್ಕುವರೆ ಕೋಟಿ ಮುಸಲ್ಮಾನರೆಲ್ಲರೂ ಕೃತಜ್ಞರಾಗುತ್ತಾರೆ. ಎಂದು ಯಾರಾದರು ಹೇಳಿದರೆ ಅದು ಸುಳ್ಳು. (58)

ನಿಜವಾದ ಕಾಫಿರ್ ಮತ್ತು ಕೃತಘ್ನ

ನಮ್ಮ ರೊಟ್ಟಿ ತಿಂದು ನಮ್ಮಲ್ಲಿ ನೌಕರರಾಗಿ ನಮ್ಮ ಶತ್ರುಗಳಂತೆ ಕೆಲಸ ಮಾಡಿ ನಮ್ಮ ಕತ್ತು ಕುಯ್ಯುವವರು ನಿಜವಾದ ಅರ್ಥದಲ್ಲಿ ಕಾಫಿರ್‌ಗಳು. ಹಿಂದುಗಳಲ್ಲೂ ಕಾಫಿರ್‌ಗಳಿದ್ದಾರೆ, ಸಿಖ್ಖರಲ್ಲೂ ಇದ್ದಾರೆ ಮತ್ತು ಮುಸಲ್ಮಾನರಲ್ಲೂ ಇದ್ದಾರೆ. ಇಲ್ಲಿರುವ ನಾಲ್ಕೂವರೆ ಕೋಟಿ ಮುಸಲ್ಮಾನರು ಕೃತಘ್ನರಾಗುತ್ತಾರೆ ಎಂದು ಹೇಳುವವರು ಹಿಂದೂಗಳೇ ಅಲ್ಲ. ಒಂದು ವೇಳೆ ನೀವು ನಿಮ್ಮ ಮನಸ್ಸಿನಿಂದ ದ್ವೇಷದ ಕಿಚ್ಚನ್ನು ತೆಗೆದು ಹಾಕಿದರೆ ನಾನು ನಿಮಗೆ ಪ್ರಮಾಣ ಮಾಡಿ ಹೇಳುತ್ತೇನೆ ಮುಸಲ್ಮಾನರ್‍ಯಾರೂ ತೊಂದರೆ ಕೊಡುವುದಿಲ್ಲ. ಒಂದು ವೇಳೆ ತೊಂದರೆ ಕೊಟ್ಟರು ಸಹ ಅವನು ಅಲ್ಲಾಹನಿಗೆ ಉತ್ತರಿಸಬೇಕಾಗುತ್ತದೆ. ಅವನೇ ನಮ್ಮನ್ನು ರಕ್ಷಿಸುತ್ತಾನೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. (59)

ಗಾಂಧೀಜಿ ದೇಶದ ಪ್ರಜೆಗಳಿಗೆ ಆಗ್ರಹಪಡಿಸಿದರೇನೆಂದರೆ ಒಂದು ವೇಳೆ ಹಿಂದು-ಮುಸಲ್ಮಾನರ ವೈಮನಸ್ಸು ದೂರವಾಗದಿದ್ದರೆ ಇದಕ್ಕಿರುವುದು ಒಂದೇ ಒಂದು ಉಪಾಯ ಅದೇನೆಂದರೆ ಪಾಕಿಸ್ತಾನ-ಹಿಂದುಸ್ತಾನದ ಯುದ್ಧ. ಗಾಂಧೀಜಿ ಬಹಳ ನೋವಿನಿಂದ ಜನರಿಗೆ ತಿಳಿ ಹೇಳಿದ್ದೇನೆಂದರೆ- ನಿನ್ನೆಯವರೆಗೂ ಸಹೋದರರಂತಿದ್ದ ಹಿಂದೂ-ಮುಸಲ್ಮಾನರು ಇದ್ದಕ್ಕಿದ್ದಂತೆ ಈಗ ಒಬ್ಬರನ್ನೊಬ್ಬರು ನಂಬದೆ ಪರಸ್ಪರ ಶತ್ರುಗಳಾಗಿದ್ದಾರೆ ಎಂದು ನಂಬುವುದಕ್ಕೇ ಆಗುವುದಿಲ್ಲ ಇಬ್ಬರೂ ಹೋರಾಡುತ್ತಿದ್ದಾರೆ. ಯಾರ ಬಳಿ ದೊಡ್ಡ ಸೈನ್ಯವಿದೆಯೋ, ಪೋಲಿಸ್ ಇದೆಯೋ ಅವರು ಯುದ್ಧ ಮಾಡಿದರೆ ಏನು ಪ್ರಯೋಜನ? ಯುದ್ಧ ನಮಗೆ ನೋಟಿಸ್ ಕೊಟ್ಟು ಬರುವುದಿಲ್ಲ. ಯಾರು ಸಹ ಯುದ್ಧ ಮಾಡಲು ಮುಂದಾಗಬಾರದು. ಒಂದು ವೇಳೆ ಯಾರಾದರೂ ಯುದ್ಧ ಮಾಡಲು ಮುಂದಾದರೆ ಎರಡು ರಾಷ್ಟ್ರಗಳು ಸರ್ವನಾಶವಾಗುತ್ತವೆ. ಯುದ್ಧ ಮಾಡುವುದು ಸಾಮಾನ್ಯ ವಿಷಯವಲ್ಲ. ನಾನು ಎಷ್ಟೋ ಬಾರಿ ಹೇಳಿದ್ದೇನೆ ಇಬ್ಬರು ಸೌಹಾರ್ದತೆಯಿಂದ ಇರಬೇಕೇ ವಿನಃ ದ್ವೇಷಿಸಿಕೊಂಡಲ್ಲ. ನಾವು ಸಹ ನ್ಯಾಯದಿಂದಿರಬೇಕು. ಹಿಂದೂ-ಮುಸಲ್ಮಾನರೆಲ್ಲರು

ನ್ಯಾಯ ಮಾರ್ಗದ ಮೇಲೆ ಬಲಿಯಾದರೂ ನನಗೆ ಚಿಂತೆಯಿಲ್ಲ. ಒಂದು ವೇಳೆ ನಾವು ಇಲ್ಲಿಯ ನಾಲ್ಕೂವರೆ ಕೋಟಿ ನಮ್ಮ ಮುಸಲ್ಮಾನರನ್ನು ಮೋಸಗಾರ ಮತ್ತು ದೇಶದ್ರೋಹಿಗಳೆಂದು ಹೇಳಿದರೆ ಪಾಕಿಸ್ತಾನದಲ್ಲಿರುವ ಹಿಂದುಗಳು ಮತ್ತು ಸಿಖ್ಖರನ್ನು ನಾವು ದೇಶದ್ರೋಹಿಗಳೆಂದು ಹೇಳಲಾಗುತ್ತದೆಯೇ? ಇದು ಸತ್ಯ. ಯಾರು ಪಾಕಿಸ್ತಾನದಲ್ಲಿ ಇರಲು ಬಯಸುವುದಿಲ್ಲವೋ ಅವರು ಸಂತೋಷವಾಗಿ ಇಲ್ಲಿಬಂದು ಬಿಡಲಿ ಆದರೆ ಅಲ್ಲಿದ್ದು ಗೂಡಚಾರಿಗಳಾಗಿ ಪಾಕಿಸ್ತಾನದ ಕೆಲಸ ಮಾಡದೆ ನಮ್ಮ ಕೆಲಸ ಮಾಡುವುದು ಸರಿಯಲ್ಲ. ಇದಕ್ಕೆ ನಾನು ಹೊಣೆಯಾಗಲು ಸಿದ್ಧನಿಲ್ಲ... ಹಿಂದೂ ಇರಲಿ, ಸಿಖ್ ಇರಲಿ, ಪಾರ್ಸಿ ಇರಲಿ, ಯಾರೇ ಇರಲಿ ಹಿಂದೂಸ್ತಾನದಲ್ಲಿ ವಾಸಿಸಲು ಇಚ್ಚಿಸಿದರೆ ಅವರು ಹಿಂದುಸ್ತಾನದ ಪರವಾಗಿ ಹೋರಾಡಿ ಸಾಯಬೇಕು... ಹಿಂದೂ ಧರ್ಮವನ್ನು ಯಾರಿಂದಲೂ ನಾಶ ಮಾಡಲು ಸಾಧ್ಯವಿಲ್ಲ. ಅದನ್ನು ನಾಶ ಮಾಡುವುದು ಹಿಂದೂಸ್ತಾನದ ಹಿಂದೂಗಳೇ. ಹಾಗೆಯೇ ಇಸ್ಲಾಂ ನಾಶವಾಗಬೇಕಾದರೆ ಅದು ಹಿಂದೂಗಳಿಂದಲ್ಲ ಮುಸಲ್ಮಾನರೇ ಅದಕ್ಕೆ ಹೊಣೆ. (60)

ಸುಮಾರು ಪ್ರಯತ್ನಗಳ ನಂತರವೂ ದೆಹಲಿಯ ಮುಸಲ್ಮಾನರ ಜೀವ, ಆಸ್ತಿ-ಪಾಸ್ತಿಗಳನ್ನು ರಕ್ಷಿಸುವುದು ಕಷ್ಟವಾಗತೊಡಗಿತು. ಗಾಂಧೀಜಿಯಿಂದ ಇದನ್ನು ಸಹಿಸಿಕೊಳ್ಳಲಾಗಲಿಲ್ಲ. ಕೊನೆಗೆ ಅವರು ಉಪವಾಸ ಮಾಡಿ ತಮ್ಮನ್ನು ಮುಗಿಸಿಕೊಳ್ಳಲು ನಿರ್ಧರಿಸಿದರು. ಉಪವಾಸ ಆರಂಭಿಸಿದ ನಂತರ ತಮ್ಮ ಪ್ರಾರ್ಥನೆಯಲ್ಲಿ 14 ಜನವರಿ 1948ರಲ್ಲಿ ಅವರು ಹೀಗೆ ಹೇಳಿದರು:-

"ನಾನು ಯುವಕನಾಗಿದ್ದಾಗ ರಾಜಕಾರಣದ ಬಗ್ಗೆ ಏನೂ ಗೊತ್ತಿರಲಿಲ್ಲ ಅಂದಿನಿಂದಲೂ ನಾನು ಹಿಂದೂ-ಮುಸಲ್ಮಾನರ ಮತ್ತು ಬೇರೆಯವರ ಹೃದಯದಲ್ಲಿ ಒಗ್ಗಟ್ಟಿನ ಕನಸನ್ನು ನೋಡುತ್ತಾ ಬಂದಿದ್ದೇನೆ. ನನ್ನ ಜೀವನದ ಸಂಧ್ಯಾಕಾಲದಲ್ಲಿ ಈ ಕನಸು ನನಸಾಗುತ್ತಿರುವುದನ್ನು ನೋಡಿ ನಾನು ಒಂದು ಚಿಕ್ಕ ಮಗುವಿನಂತೆ ಕುಣಿದಾಡಿದೆ. ಮತ್ತೆ ಮನುಷ್ಯನ ಆಯಸ್ಸು 125 ವರ್ಷ ಎಂದು ನಮ್ಮ ಹಿರಿಯರು ಹೇಳಿದ್ದಾರೆ ಅದರಂತೆ ನನ್ನಲ್ಲಿ ಸಂಪೂರ್ಣ ಆಯಸ್ಸು ಜೀವಿಸುವ ಆಸೆ ಚಿಗುರಿತು.

ಇಂತಹ ಕನಸಿನ ಸಿದ್ಧಿಗಾಗಿ ಯಾರು ತಾನೇ ತಮ್ಮ ಜೀವನವನ್ನು ಬಲಿ ಕೊಡಲು ಇಷ್ಟಪಡುವುದಿಲ್ಲ? ನನ್ನ ಕನಸು ಸಾಕಾರಗೊಂಡಾಗ ನಮಗೆ ನಿಜವಾದ ಸ್ವಾತಂತ್ರ್ಯ ಸಿಕ್ಕಂತೆ. ಆಗ ಕಾನೂನಿನ ದೃಷ್ಟಿಯಲ್ಲಿ ಮತ್ತು ಭೌಗೋಳಿಕ ದೃಷ್ಟಿಯಲ್ಲಿ ಹಿಂದುಸ್ತಾನ ಮತ್ತು ಪಾಕಿಸ್ತಾನ ಬೇರೆ-ಬೇರೆ ರಾಷ್ಟ್ರಗಳಾಗಿದ್ದರಬಹುದು ಆದರೆ ನಾವು ನಮ್ಮ ದೈನಂದಿನ ಜೀವನದಲ್ಲಿ ಒಂದೇ ಆಗಿರುತ್ತೇವೆ. ಮನಸ್ಸುಗಳು ಬೆಸೆಯಲ್ಪಟ್ಟಿರುತ್ತವೆ. ನನಗೂ ಮತ್ತು ನಿಮಗೂ

ಈ ದೃಶ್ಯ ಎಷ್ಟು ಅದ್ಭುತವಾಗಿ ಕಾಣುತ್ತಿದೆ ಆದರೆ ಅದು ನಿಜವಾಗಲು ಸಾಧ್ಯವೇ ಇಲ್ಲ. ಆದರೂ ಒಂದು ಸುಂದರ ಚಿತ್ರದಲ್ಲಿ ತೋರಿಸಿರುವ ಮಗುವಿನಂತೆ ನನಗೂ ಅದನ್ನು ಪಡೆಯುವವರೆಗೂ ಸಮಾಧಾನವಾಗುವುದಿಲ್ಲ. ಇದನ್ನು ಬಿಟ್ಟು ನಾನು ಬದುಕುವುದೂ ಇಲ್ಲ ಮತ್ತು ಬದುಕಲು ಇಚ್ಛಿಸುವುದೂ ಇಲ್ಲ.

1896 ರಂದು ದೆಹಲಿಯ ಮತ್ತು ಆಗ್ರಾದ ಕೋಟೆ ನೋಡಲು ಹೋಗಿದ್ದೆ ಅಲ್ಲಿ ಬಾಗಿಲ ಮೇಲೆ ಒಂದು 'ಶಾಯರಿ' ಓದಿದೆ. 'ಒಂದು ವೇಳೆ ಸ್ವರ್ಗ ಇದೆ ಅಂದರೆ, ಅದು ಇಲ್ಲೇ, ಅದು ಇಲ್ಲೇ, ಅದು ಇಲ್ಲೇ.' ಆ ಕೋಟೆ ಅಷ್ಟು ಅದ್ಭುತವಾಗಿದ್ದರೂ ನನ್ನ ದೃಷ್ಟಿಯಲ್ಲಿ ಸ್ವರ್ಗವಾಗಿರಲಿಲ್ಲ. ಆದರೆ ಪಾಕಿಸ್ತಾನ ತನ್ನ ಪ್ರತಿಯೊಂದು ಬಾಗಿಲುಗಳ ಮೇಲೆ ಈ ಶಾಯರಿಯನ್ನು ಬರೆಸುವಷ್ಟು ಯೋಗ್ಯವಾದಾಗ ನನಗಾಗುವ ಸಂತೋಷಕ್ಕೆ ಮಿತಿ ಇರುವುದಿಲ್ಲ. ಇಂತಹ ಸ್ವರ್ಗದಲ್ಲಿ ಒಬ್ಬ ಬಡವನಾಗಲಿ, ಭಿಕ್ಷುಕನಾಗಲಿ, ಮೇಲು-ಕೀಳೆಂಬ ಭೇದವಾಗಲಿ, ಕೋಟ್ಯಾಧಿಪತಿ, ಮಾಲೀಕನಾಗಲಿ, ಅರ್ಧ ಹೊಟ್ಟೆಯ ನೌಕರನಾಗಲಿ, ಮಧ್ಯಪಾನವಾಗಲಿ, ಮಾದಕ ವಸ್ತುಗಳಾಗಲಿ ಇರುವುದಿಲ್ಲ. ಆ ಸ್ವರ್ಗ ಪಾಕಿಸ್ತಾನದಲ್ಲೇ ಇರಲಿ ಯುನಾನಿನಲ್ಲೇ ಇರಲಿ, ಅಲ್ಲಿ ಎಲ್ಲರೂ ಸಂತೋಷದಿಂದ ಮತ್ತು ಗೌರವದಿಂದ ತಮ್ಮ ಹೊಟ್ಟೆ ತುಂಬಿಸಿಕೊಳ್ಳಲು ಕಷ್ಟಪಟ್ಟು ದುಡಿಯುತ್ತಾರೆ. ಅಲ್ಲಿ ಮಹಿಳೆಯರು ಸಹ ಗಂಡಸರಂತೆ ಗೌರವಿಸಲ್ಪಡುತ್ತಾರೆ ಮತ್ತು ಮಹಿಳೆಯರ ಅಸ್ತಿತ್ವ ಮತ್ತು ಪವಿತ್ರತೆಯನ್ನು ರಕ್ಷಿಸಲಾಗುತ್ತದೆ. ಪ್ರತಿಯೊಂದು ಧರ್ಮದ ಪುರುಷರು ತಮ್ಮ ಹೆಂಡತಿಯನ್ನು ಬಿಟ್ಟು ಬೇರೆಲ್ಲ ಮಹಿಳೆಯರನ್ನು ಅವರ ವಯಸ್ಸಿಗನುಗುಣವಾಗಿ ತಾಯಿ ಮತ್ತು ಸಹೋದರಿಯಂತೆ ನೋಡುತ್ತಾರೆ. ಅಲ್ಲಿ ಅಸ್ಪೃಶ್ಯತೆ ಇರುವುದಿಲ್ಲ ಮತ್ತು ಎಲ್ಲಾ ಧರ್ಮಗಳು ಒಂದೇ ಎಂದು ಪರಿಗಣಿಸಲಾಗುತ್ತದೆ. ಜೀವ ಕೊಡುವ ಸೂರ್ಯ ದೇವತೆಯ ಬಿಸಿಲಿನಲ್ಲಿ ಬಿದ್ದುಕೊಂಡು ಕಿರಣಗಳ ಶಾಖವನ್ನು ಅಸ್ವಾದಿಸುತ್ತಾ ಕಾಲ್ಪನಿಕ ಆನಂದದ ಅಲೆಯಲ್ಲಿ ಕೊಚ್ಚಿ ಹೋದ ನನ್ನನ್ನು, ಇದನ್ನು ಓದುವ ಮತ್ತು ಕೇಳುವವರು ಕ್ಷಮಿಸುತ್ತಾರೆ ಎಂದು ಭಾವಿಸುತ್ತೇನೆ. ಸಂಶಯಪಡುವವರಿಗೆ, ನಾನು ಆಶ್ವಾಸನೆ ಕೊಡಲು ಇಚ್ಛಿಸುವುದೇನೆಂದರೆ ನನ್ನ ಉಪವಾಸ ಆದಷ್ಟು ಬೇಗ ಮುಗಿಯಲಿ ಎನ್ನುವ ಕಿಂಚಿತ್ತೂ ಆಸೆ ನನಗಿಲ್ಲ. ಒಂದುವೇಳೆ ನನ್ನಂತಹ ಮೂರ್ಖನ ಕಾಲ್ಪನಿಕ ಕನಸು ನನಸಾಗದಿದ್ದರೆ, ನನ್ನ ಉಪವಾಸ ಮುಗಿಯದೇ ಇದ್ದರೂ ಏನೂ ಚಿಂತೆ ಇಲ್ಲ... ಆದಷ್ಟು ನಿರೀಕ್ಷಿಸುವ ಸಂಯಮ ನನ್ನಲ್ಲಿದೆ ಆದರೆ ನನ್ನನ್ನು ಉಳಿಸಿಕ್ಕೊಳಲು ಜನ ಏನಾದರು ಮಾಡಿದರೆ ನನಗೆ ದುಃಖ:ವಾಗುತ್ತದೆ. ನನ್ನ ವಾದ ಏನೆಂದರೆ ಉಪವಾಸವು ಈಶ್ವರನ ಪ್ರೇರಣೆಯಿಂದ ಆರಂಭವಾಗಿದೆ ಮತ್ತು ಅದು ಕೊನೆಗೊಳ್ಳುವುದು ಈಶ್ವರನ ಇಚ್ಛೆಯಿಂದಲೇ. ಇಂದಿಗೂ ಯಾರು ಸಹ ಅವನ ಇಚ್ಛೆಯನ್ನು ಮೀರಿಲ್ಲ ಮತ್ತು ಮೀರುವುದಕ್ಕೆ ಆಗುವುದು ಇಲ್ಲ (61).

ಗಾಂಧೀಜಿಯ ಉಪವಾಸವು ಜನರ ಮನಸ್ಸನ್ನು ಸ್ವಲ್ಪ ಮಟ್ಟಿಗೆ ಕರಗಿಸಿತು. ಸಾಂಪ್ರದಾಯಿಕ ಕಗ್ಗೊಲೆಯನ್ನು ತಡೆಯಲು ಶತಪ್ರಯತ್ನಗಳನ್ನು ಮಾಡುತ್ತೇವೆ ಎಂದು ಹಿಂದೂ-ಮುಸಲ್ಮಾನ ನಾಯಕರು ಮತ್ತು ಸರಕಾರಿ ಅಧಿಕಾರಿಗಳು ಪ್ರಮಾಣ ಮಾಡಿದರು. ಉಪವಾಸವನ್ನು ಕೈಬಿಡಬೇಕೆಂದು ಗಾಂಧೀಜಿಯಲ್ಲಿ ಪ್ರಾರ್ಥಿಸಿದರು. ಉಪವಾಸವನ್ನು ಕೈ ಬಿಡುವ ಮೊದಲು ಗಾಂಧೀಜಿಯು ಒಂದುಪ್ರವಚನದಲ್ಲಿ ಹೀಗೆ ಹೇಳಿದರುಃ-ಈಗ ನಾನು ಯಾವುದೇ ಕಾರಣಕ್ಕೂ ಜೀವಂತವಾಗಿರಲು ಬಯಸುವುದಿಲ್ಲ. ಮನುಷ್ಯ ಬದುಕುವುದು ಮನುಷ್ಯತ್ವವನ್ನು ಉಳಿಸುವುದಕ್ಕಾಗಿ. ಈಶ್ವರ್ ಮತ್ತು ಅಲ್ಲಹ್‌ನ ಕಡೆ ಹೋಗುವುದೇ ಮನುಷ್ಯನ ಕರ್ತವ್ಯ. ಒಂದು ವೇಳೆ ಮನಸ್ಸಿನಲ್ಲಿ ಆ ಹೆಸರುಗಳಿಲ್ಲದೆ ಬಾಯಿಯಿಂದ ಈಶ್ವರ್ ಖುದಾ, ಸಶಿಯಕಾಂತ್ ಏನೇ ಹೇಳಿದರು ಅದೆಲ್ಲ ಸುಳ್ಳು. ಎಲ್ಲರ ಅಸ್ತಿತ್ವ ಒಂದೇ. ಇದನ್ನು ಮರೆತು ನಾವು ಪರಸ್ಪರ ಶತ್ರುಗಳೆಂದು ಭಾವಿಸುವುದರಲ್ಲಿ ಅರ್ಥವಿಲ್ಲ".

"ಇವತ್ತು ನಾನು ನಿಮಗೆ ಹೆಚ್ಚು ಏನು ಹೇಳುವುದಿಲ್ಲ. ಇಂದಿನಿಂದ ಹಿಂದೂಗಳು ಜಗಳ ಮಾಡುವುದಿಲ್ಲವೆಂದು ನಿರ್ಣಯಿಸಲಿ. ನಾನು ಬಯಸುವುದು ಕುರಾನನ್ನು ಹಿಂದೂಗಳು ಭಗವದ್ಗೀತೆ ಓದಿದಂತೆ ಓದಲಿ. ಸಿಖ್ಖರೂ ಹೀಗೆ ಮಾಡಲಿ ಮತ್ತು ಮುಸ್ಲಿಂ ಸಹೋದರರು ಮತ್ತು ಸಹೋದರಿಯರು ತಮ್ಮ ಮನೆಗಳಲ್ಲಿ ಗ್ರಂಥ ಸಾಹೇಬ ಮತ್ತು ಗೀತವನ್ನುಓದಿ ತಿಳಿದುಕೊಳ್ಳಲಿ ಎಂಬುದೇ ನನ್ನ ಆಸೆ. ನಾವು ಹೇಗೆ ನಮ್ಮ ಧರ್ಮವನ್ನು ನಂಬುತ್ತೇವೋ ಹಾಗೆ ಬೇರೆಯವರ ಧರ್ಮವನ್ನು ನಂಬಬೇಕು. ಉರ್ದು ಫಾರ್ಸಿ ಯಾವುದೇ ಭಾಷೆಯಲ್ಲಿ ಬರೆದಿರಲಿ ಒಳ್ಳೆಯ ಮಾತು ಒಳ್ಳೆಯ ಮಾತೇ. ಹೇಗೆ ಕುರಾನ್ ಷರೀಫೋ ಹಾಗೆ ಗೀತಾ ಮತ್ತು ಗ್ರಂಥ ಸಾಹೇಬ. (62)

ಗಾಂಧೀಜಿ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘ

1947ರ ಈ ಐತಿಹಾಸಿಕ ವರ್ಷದ ಕೊನೆಯ ತಿಂಗಳು ದುಃಖ ಮತ್ತು ಬೇಸರದ ಕಾರ್ಮೋಡಗಳು ಕವಿದಿದ್ದವು. ದೆಹಲಿಯ ನಿರಂಕುಶವಾದಿಗಳು ಮುಸಲ್ಮಾನರ ಪ್ರಾಣ ಮತ್ತು ಆಸ್ತಿಪಾಸ್ತಿಗಳನ್ನು ದರೋಡೆಕೋರರ ಕೈಗೆ ಕೊಟ್ಟಿದ್ದರೆನಿಸುತ್ತಿತ್ತು. ಕೋಮುದ್ವೇಷದ ಆ ಮರುಭೂಮಿಯಲ್ಲಿ ಗಾಂಧೀಜಿಯ ಒಂಟಿ ಧ್ವನಿಯು ಓಯಸಿಸ್‌ನಂತೆ ಗಾಯಗೊಂಡ ಹೃದಯಗಳಿಗೆ ಔಷಧಿಯ ಕೆಲಸ ಮಾಡುತ್ತಿತ್ತು. ಸುಮಾರು ತಿಂಗಳಿನಿಂದಲೂ ರಾಷ್ಟ್ರೀಯ ಸೇವಾ ಸಂಘದ ಗೋವಾಲ್ಕರ್ ದಿಲ್ಲಿಯಲ್ಲಿ ಕುಳಿತು ಇದರ ನಾಯಕತ್ವವನ್ನು ವಹಿಸಿ ಈ ಕಗ್ಗೊಲೆಗಳ ಸಂಚಾಲನೆ ಮಾಡುತ್ತಿರುವ ಸುದ್ದಿ ನಾಲ್ಕೂಕಡೆ ಹಬ್ಬಿತ್ತು. ಈ ಸುದ್ದಿ ಹೆಚ್ಚು ಬಲಗೊಂಡಾಗ ತಾನು ನಿರಪರಾಧಿ ಎಂದು ಸಾಬೀತುಪಡಿಸಲು ಶ್ರೀ ಗೋಲ್ವಾಲ್ಕರ್ ಗಾಂಧೀಜಿಯನ್ನು ಭೇಟಿ ಮಾಡಲು ಹೋದರು.

ಗೋಲ್ವಾಲ್ಕರ್‌ಗೆ ಗಾಂಧೀಜಿ ಕೇಳಿದರು– "ದೆಹಲಿ ಮತ್ತು ಹಿಂದೂಸ್ತಾನದ ಬೇರೆ ರಾಜ್ಯಗಳಲ್ಲಿ ಆಗುತ್ತಿರುವ ಕಗ್ಗೊಲೆಗಳಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕೈವಾಡವಿದೆಯೇ?"

ಶ್ರೀ ಗೋಲ್ವಾಲ್ಕರ್ ಈ ಆರೋಪವನ್ನು ಅಲ್ಲಗಳೆಯುತ್ತ ಗಾಂಧೀಜಿಗೆ ಹೇಳಿದರು "ನಮ್ಮ ರಾಷ್ಟ್ರೀಯ ಸ್ವಯಂ ಸೇವಾ ಸಂಘ ಇರುವುದು ಹಿಂದೂ ಧರ್ಮದ ರಕ್ಷಣೆಗಾಗಿ, ಮುಸಲ್ಮಾನರ ಕೊಲೆಗಾಗಲ್ಲ. ನಾವು ಯಾರ ವೈರಿಗಳೂ ಅಲ್ಲ. ನಾವು ಬಯಸುವುದು ಶಾಂತಿ ಮತ್ತು ಸೌಹಾರ್ದತೆ." ಗೋಲ್ವಾಲ್ಕರ್‌ನ ಈ ಮಾತುಗಳನ್ನು ಅಲ್ಲಿದ್ದವರು ನಂಬಲಿಲ್ಲ ಆದರೆ ಗಾಂಧೀಜಿಗೆ ಮಾನವನ ಒಳ್ಳೆಯ ಸ್ವಭಾವದ ಒಳ್ಳೆತನ ಮತ್ತು ಪ್ರಾಮಾಣಿಕತೆಯ ನಾಡಿಯ (ರೆಡೀಮ್) ಮೇಲೆ ವಿಶ್ವಾಸವಿತ್ತು ಆದ್ದರಿಂದ ಅವರು ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಪ್ರಾಮಾಣಿಕತೆಯನ್ನು ಸಾಬೀತುಪಡಿಸಲು ಅವಕಾಶ ನೀಡುತ್ತಿದ್ದರು. ಆರೆಸ್ಸೆಸ್ಸಿನ ನಾಯಕರು ಈ ಕಗ್ಗೊಲೆಯ ಮೇಲೆ ಅಭಿಮಾನ ಪಡೆದಿದ್ದರೆ ಸಾಕಿತ್ತು. ಗಾಂಧೀಜಿ, ಶ್ರೀ ಗೋಲ್ವಾಲ್ಕರ್‌ಗೆ ಹೇಳಿದರು– ನೀವು ಹೇಳುತ್ತಿರುವುದು ಒಂದು ವೇಳೆ ನಿಜವಾಗಿದ್ದರೆ ನಿಮ್ಮ ಮೇಲೆ ಹೊರಿಸಲಾಗಿರುವ ಆರೋಪವನ್ನು ತಿರಸ್ಕರಿಸುತ್ತ ದೆಹಲಿಯಲ್ಲಿ ಮುಸಲ್ಮಾನರ ಮೇಲೆ ಆಗುತ್ತಿರುವ ಕಗ್ಗೊಲೆಯನ್ನು ಸ್ಪಷ್ಟ ಶಬ್ದಗಳಿಂದ ಖಂಡಿಸಿ. ಗೋಲ್ವಾಲ್ಕರ್ ಮತ್ತು ಅವರ ಸ್ನೇಹಿತರು

ಹೀಗೆ ಉತ್ತರಿಸಿದರು. "ನಾವು ನಿಮಗೆ ಹೇಳಿದ್ದೇವೆ ಈ ಹೇಳಿಕೆಯ ಪ್ರಕಾರ ನೀವೇ ಸ್ವತಃ ಹೇಳಿಕೆ ನೀಡಬಹುದು." ಎಂದಾಗ ಗಾಂಧೀಜಿ ಗೋಲ್ವಾಲ್ಕರ್‌ಗೆ ಹೇಳಿದರು– "ನಾನು ಹೇಳಿಕೆ ನೀಡುತ್ತೇನೆ ಆದರೆ ಜನ ಬಯಸುವುದು ನಿಮ್ಮ ಖಂಡನೆಯನ್ನು" ಎಂದು. (63)

ಗಾಂಧೀಜಿಯ ಒಬ್ಬ ಕಾರ್ಯಕರ್ತ ಹೀಗೆ ಹೇಳಿದ:–

ಬಾಪು! ರಾಷ್ಟ್ರೀಯ ಸೇವಾ ಸಂಘದ ಜನರು ಅಲ್ಲಿ ಶರಣಾರ್ಥಿ ಶಿಬಿರಗಳಲ್ಲಿ ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಸಂಘದ ಸ್ವಯಂಸೇವಕರು ಶಿಸ್ತಿನಿಂದ, ಧೈರ್ಯದಿಂದ ಮತ್ತು ಕಷ್ಟಪಟ್ಟು ಕೆಲಸ ಮಾಡುತ್ತಿದ್ದಾರೆ." ಗಾಂಧೀಜಿ ಹೀಗೆ ಉತ್ತರಿಸಿದರು:–

"ಹಿಟ್ಲರಿನ ನಾಝಿಗಳು, ಮುಸಲೋನಿಯ ಫ್ಯಾಸಿಸ್ಟ್‌ಗಳು ಸಹ ಶಿಸ್ತುಬದ್ಧರಾಗಿ ಧೈರ್ಯದಿಂದ ಕಷ್ಟಪಟ್ಟು ಕೆಲಸ ಮಾಡಿರುವುದನ್ನು ಮರೆಯುವುದಕ್ಕಾಗುತ್ತದೆಯೇ?. ಇಲ್ಲಿ ಶಿಸ್ತಿನ, ಧೈರ್ಯದ ಮತ್ತು ಪರಿಶ್ರಮದ ಪ್ರಶ್ನೆಯಲ್ಲ, ರಾಷ್ಟ್ರೀಯ ಸ್ವಯಂಸೇವಕ ಸಂಘವು ನಿರಂಕುಶ ಪದ್ಧತಿಯನ್ನು ಅನುಸರಿಸುವ ಸಾಂಪ್ರದಾಯಿಕ ಸಂಘಟನೆಯೇ ಇಲ್ಲವೇ ಎಂಬುದೇ ಪ್ರಶ್ನೆ? (64)

ಸ್ವಲ್ಪ ದಿನಗಳ ನಂತರ ಸ್ವಯಂ ಸೇವಾ ಸಂಘದ ನಾಯಕನೊಬ್ಬ ಗಾಂಧೀಜಿಯನ್ನು ತನ್ನ ಸ್ವಯಂಸೇವಕರ ರ್‍ಯಾಲಿಯಲ್ಲಿ ಹರಿಜನ ಬಸ್ತಿಗೆ ಕರೆದುಕೊಂಡು ಹೋದ. ಗಾಂಧೀಜಿ ಅವರು ಶ್ರೀ ಗೋಲ್ವಾಲ್ಕರ್ ಪುಸ್ತಕದಲ್ಲಿ–" ಹಿಂದೂಗಳು ಈ ದೇಶದ ಮೂಲ ನಿವಾಸಿಗಳು. ಆರ್ಯರು ಹೊರಗಿನಿಂದ ಬಂದವರಲ್ಲ". ಎಂದು ಓದಿದ್ದರು. ಶ್ರೀ ಗೋವಾಲ್ಕರ್ ಅವರ ಪ್ರಕಾರ ಆರ್ಯರ ಮೂಲ ನಿವಾಸ ಉತ್ತರ ಧ್ರುವ ಮತ್ತು ಆರ್ಯರು ಪಶ್ಚಿಮೋತ್ತರ ದಾರಿಯಿಂದ ಭಾರತಕ್ಕೆ ಬಂದರು ಎಂಬ ಲೋಕಮಾನ್ಯ ತಿಲಕರ ಮಾನ್ಯತೆ ತಪ್ಪು. ಆರ್ಯರು ಹೊರಗಿನಿಂದ ಭಾರತಕ್ಕೆ ಬರಲಿಲ್ಲ ಆದರೆ ಉತ್ತರ ಧ್ರುವ ಭಾರತದಿಂದ ಹೊರಗಾಯಿತಷ್ಟೇ. ವೇದಗಳ ಕಾಲದಲ್ಲಿ ಉತ್ತರ ಧ್ರುವ ಭಾರತದ ಒಳಗೆ ಬಿಹಾರ್ ಮತ್ತು ಒಡಿಸ್ಸಾದಲ್ಲೇ ಇತ್ತು. (65)

ಶ್ರೀ ಗೋಲ್ವಾಲ್ಕರ್ ಪ್ರಕಾರ

"ಭಾರತ ಕೇವಲ ಹಿಂದೂಗಳ ದೇಶ. ಯಾರು ಹಿಂದೂ ಧರ್ಮ ಮತ್ತು ಹಿಂದೂ ಸಂಸ್ಕೃತಿಯಲ್ಲಿ ಒಂದಾಗುವುದಿಲ್ಲವೋ ಅವರು ವಿದೇಶಿಯರು ಮತ್ತು ವಿದೇಶಿ ಅಲ್ಪಸಂಖ್ಯಾತರ ಯೋಗ್ಯತೆಯಲ್ಲಿ ಇಲ್ಲಿ ಇರಬಹುದು. ಕಾಂಗ್ರೆಸ್ಸಿನ ಆಘಾತಕಾರಿ ಪ್ರಭಾವದಿಂದ ಈ ದೇಶದಲ್ಲಿ ವಾಸಿಸುತ್ತಿದ್ದ ಜನರೆಲ್ಲರಿಂದ ನಮ್ಮ

ದೇಶವಾಗಿದ್ದು. ಅವರು ನಮ್ಮ ಹಳೆಯ ದಾಳಿಕೋರರ ಮತ್ತು ಶತ್ರುಗಳ ಜೊತೆ ಸೇರಿ ಒಂದು ವಿಜಾತಿಯ ಶಬ್ದ 'ಇಂಡಿಯಾ'ದ ಬಾವುಟದ ಕೆಳಗೆ ಹೋರಾಡಲು ಬಯಸಿರುವುದು... 'ಜನತಾಂತ್ರಿಕ ರಾಜ್ಯ'ದ ಅಮಾನವೀಯತೆಯ ಹಿಂದೆ ನಾವು ನಮ್ಮ ಮೂಲ ಹಿಂದೂ ರಾಷ್ಟ್ರವಾದವನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದೇವೆ. (66)

ರಾಷ್ಟ್ರೀಯ ಸ್ವಯಂಸೇವಕ ಸಂಘದ ನಾಯಕ ತನ್ನ ರ್‍ಯಾಲಿಯಲ್ಲಿ ಗಾಂಧೀಜಿ ಅವರನ್ನು ಸ್ವಾಗತಿಸುತ್ತಾ ಹೀಗೆ ಹೇಳಿದ- 'ಹಿಂದೂ ಧರ್ಮದ ಒಂದು ಮಹಾನ್ ಆತ್ಮ.' ಗಾಂಧೀಜಿ ಇದಕ್ಕೆ ಉತ್ತರಿಸುತ್ತ ಹೀಗೆ ಹೇಳಿದರು:- "ನಾನು ಹಿಂದೂ ಎನ್ನುವುದರಲ್ಲಿ ನನಗೆ ಗರ್ವವಿದೆ. ನನ್ನ ಹಿಂದೂ ಧರ್ಮ ಸಾಂಪ್ರದಾಯಿಕವೂ ಅಲ್ಲ, ಅಸಹಿಷ್ಣುವೂ ಅಲ್ಲ ಮತ್ತು ವಿಚಿತ್ರವಾಗಿಯೂ ಇಲ್ಲ. ನಾನು ಹಿಂದೂ ಧರ್ಮವನ್ನು ಸ್ವಲ್ಪ ಅರ್ಥ ಮಾಡಿಕೊಂಡಿದ್ದೇನೆ ಬೇರೆ ಧರ್ಮಗಳಲ್ಲಿರುವ ಒಳ್ಳೆತನವನ್ನು ಹಿಂದೂ ಧರ್ಮವು ಮೈಗೂಡಿಸಿಕೊಂಡಿದೆ. ಹಿಂದುಸ್ತಾನದಲ್ಲಿ ಹಿಂದುಯೇತರರು ಹಿಂದುಗಳಿಗೆ ಸರಿಸಮನಾಗಿ ಗೌರವದಿಂದ ಇರುವುದಕ್ಕಾಗುವುದಿಲ್ಲ ಮತ್ತು ಒಂದು ವೇಳೆ ಮುಸಲ್ಮಾನರು ಹಿಂದುಸ್ತಾನದಲ್ಲಿರ ಬಯಸಿದರೆ ಕೆಳದರ್ಜೆಯಲ್ಲೇ ಇರಬೇಕು ಎಂದು ಹಿಂದೂಗಳು ಯೋಚಿಸಿದರೆ ಮತ್ತು ಪಾಕಿಸ್ತಾನದಲ್ಲಿ ಕೇವಲ ಒಂದೇ ಜಾತಿಯವರು ಮಾತ್ರ ಇರಬೇಕು ಎಂದು ಮುಸಲ್ಮಾನರು ಯೋಚಿಸಿದರೆ ಇದರಿಂದ ಹಿಂದೂ ಧರ್ಮ ಮತ್ತು ಇಸ್ಲಾಂ ಧರ್ಮಗಳೆರಡರ ಸರ್ವನಾಶವಾಗುತ್ತದೆ. ನಿಮ್ಮ ನೀತಿಗಳು ಇಸ್ಲಾಂ ವಿರೋಧಿಯಾಗಿಲ್ಲ ಎಂಬ ನಿಮ್ಮ ಭರವಸೆ, ನನಗೆ ಬಹಳ ಸಂತೋಷ ತಂದಿದೆ ಆದರೆ ನಿಮ್ಮ ಸಂಘಟನೆಯು ಮುಸಲ್ಮಾನರ ಕಗ್ಗೊಲೆಗೆ ಹೊಣೆಯಾಗಿದೆ ಎಂಬ ಆರೋಪ ನಿಜವಾದರೆ, ಬಹಳ ಹೀನಾಯವಾಗಿ ನಿಮ್ಮ ಸಂಘಟನೆಯ ನಾಶವಾಗುತ್ತದೆ ಎಂದು ನಾನು ಎಚ್ಚರಿಸುತ್ತೇನೆ. (67)

ಪ್ರಧಾನಮಂತ್ರಿ ಜವಾಹರಲಾಲ್ ನೆಹರು ಅವರಿಗೆ ಬರುತ್ತಿದ್ದ ಆರ್.ಎಸ್.ಎಸ್. ಕೆಲಸಗಳ ರಿಪೋರ್ಟ್ ಬಹಳ ಚಿಂತಾಜನಕವಾಗಿರುತ್ತಿತ್ತು. ಗೃಹ ಮಂತ್ರಿಗಳಾಗಿದ್ದ ಸರ್ದಾರ್ ವಲ್ಲಭಾಯಿ ಪಟೇಲರು ಸಮಾಧಾನದಿಂದ ಕೆಲಸ ಮಾಡುವುದರಲ್ಲಿ ನಂಬಿಕೆ ಇಟ್ಟಿದ್ದರು. ಆರ್.ಎಸ್.ಎಸ್‌ನೊಂದಿಗೆ ಹೇಗೆ ವರ್ತಿಸಬೇಕೆಂಬುದರ ಬಗ್ಗೆ ನೆಹರು ಮತ್ತು ಸರ್ದಾರ್‌ವಲ್ಲಭಾಯಿ ಪಟೇಲರ ನಡುವೆ ಒಮ್ಮತವಿರಲಿಲ್ಲ. ಸರ್ದಾರ್ ಪಟೇಲ್ ಸಂಘದವರನ್ನು 'ದಾರಿ ತಪ್ಪಿದ ದೇಶಭಕ್ತರು' ಎಂದು ಹೇಳುತ್ತಿದ್ದರು. ಸರ್ದಾರ್ ವಲ್ಲಬಾಯ್ ಪಟೇಲ್‌ರ ಮುನಿಸು ಸಂಘಿಗಳ ಮೇಲಿದ್ದದ್ದು 'ಇವರು ಧರ್ಮಾಂಧ ಕೋಮುವಾದಿಗಳಾಗಿದ್ದರೆಂದಲ್ಲ, ಬದಲಾಗಿ ಅವರು ಸರ್ಕಾರದ ಕೈ

ಗಟ್ಟಿಗೊಳಿಸುವ ಬದಲು ಕಾನೂನನ್ನು ಕೈಗೆತ್ತಿಕೊಂಡು ಆಡಳಿತದ ಚುಕ್ಕಾಣಿಯನ್ನು ದುರ್ಬಲಗೊಳಿಸಲು ಪ್ರಯತ್ನಿಸುತ್ತಿದ್ದರೆಂದು. (68)

ಸರ್ದಾರ್ ಪಟೇಲ್ ಬಯಸಿದ್ದು ಕಾಂಗ್ರೆಸ್ಸಿನವರು ಆರ್.ಎಸ್.ಎಸ್.ನವರನ್ನು ಪ್ರೀತಿಯಿಂದ ಅವರ ತಪ್ಪು ಕಲ್ಪನೆಯನ್ನು ದೂರಮಾಡಲಿ ಎಂದು. ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ನಿಷ್ಠೂರವಾಗಿ ಹತ್ತಿಕ್ಕುವುದು ಸರ್ದಾರ್ ಪಟೇಲ್‌ಗೆ ಇಷ್ಟವಿರಲಿಲ್ಲ. ತಮ್ಮ ಒಂದು ಭಾಷಣದಲ್ಲಿ ಸರ್ದಾರ್ ಪಟೇಲರು ಹೀಗೆ ಹೇಳಿದರು.

ರಾಷ್ಟ್ರೀಯ 'ಸ್ವಯಂಸೇವಕ ಸಂಘವನ್ನು ಲಾಠಿಯ ಬಲದಿಂದ ಹತ್ತಿಕ್ಕಬಹುದು ಎಂದು ಕೆಲ ಕಾಂಗ್ರೆಸ್ ನಾಯಕರು ಭಾವಿಸಿದ್ದಾರೆ ಆದರೆ ನೀವು ಯಾವುದೇ ಸಂಘಟನೆಯನ್ನು ಲಾಠಿಯ ಬಲದಿಂದ ಹತ್ತಿಕ್ಕಲು ಸಾಧ್ಯವಿಲ್ಲ. ಆರ್.ಎಸ್. ಎಸ್.ನವರು ದರೋಡೆಕೋರ ಕಳ್ಳರೇನಲ್ಲ. ಅವರು ಸಹ ದೇಶಭಕ್ತರೇ. ಅವರಿಗೂ ದೇಶದ ಮೇಲೆ ಪ್ರೀತಿ ಇದೆ. ಆದರೆ ಅವರು ಕೆಲಸ ಮಾಡುವ ರೀತಿ ದಿಕ್ಕುತಪ್ಪಿದೆ ಅಷ್ಟೇ. (69)

ಸರ್ದಾರ್ ವಲ್ಲಭಾಯಿ ಪಟೇಲರ ಈ ಭಾಷಣ ಬಹಳ ದುರ್ಭಾಗ್ಯ ಪೂರ್ಣವಾಗಿತ್ತು. ಇದರರ್ಥ ದೇಶಭಕ್ತ ಯಾರೇ ಇರಲಿ ಅವನು ದೇಶಭಕ್ತನೆಂದ ಮಾತ್ರಕ್ಕೆ ಅವನ ಕುಕರ್ಮ(ಪಾಪ)ಗಳನ್ನು ಮುಚ್ಚುವುದಲ್ಲ. ಆರ್.ಎಸ್.ಎಸ್. ಬಗ್ಗೆ ಸರ್ದಾರ್ ಪಟೇಲರಿಗಿದ್ದ ಮೃದು ಧೋರಣೆಯಿಂದಾಗಿ ಪ್ರಪಂಚ ಮತ್ತು ದೇಶ ಬಹಳ ದೊಡ್ಡ ಬೆಲೆ ತೆರಬೇಕಾಗುತ್ತದೆ ಎಂಬ ಊಹೆ ಇರಲಿಲ್ಲ. ಆದರೆ ಯಾವಾಗ ಆರ್.ಎಸ್.ಎಸ್.ನವರು ತಮ್ಮ ಮುಖವಾಡವನ್ನು ಕಳಚಿ ನಿಜ ಬಣ್ಣ ತೋರಿಸತೊಡಗಿದರೋ ಆಗ ಸರ್ದಾರ್ ಪಟೇಲರು ದಿಗ್ಭ್ರಾಂತರಾದರು. ಅವರು ಆರೆಸ್ಸೆಸ್ಸಿನ ವಿರುದ್ಧ ಕ್ರಮ ಕೈಗೊಳ್ಳುವಷ್ಟರಲ್ಲಿ ಇಡೀ ದೇಶ ರಾಷ್ಟ್ರಪಿತರ ಹತ್ಯೆಯ ಶೋಕದಲ್ಲಿ ಮುಳುಗಿಹೋಗಿತ್ತು. (70)

ರಾಷ್ಟ್ರಪಿತರ ಮಹಾ ಪರಿನಿರ್ವಾಣ

ಪುರಾಣ ಕಥೆಗಳ ಪ್ರಕಾರ ಸಮುದ್ರ ಮಂಥನವಾದಾಗ ಅಮೃತವು ಬಂತು, ವಿಷವು ಬಂತು. ಆ ವಿಷದಿಂದ ಜಲಚರಗಳು ಭಸ್ಮವಾದವು. ಜಗತ್ತನ್ನು ಹೇಗೆ ರಕ್ಷಿಸಬೇಕು ಎಂದು ಸುರರು ಮತ್ತು ಅಸುರರು ಚಿಂತೆಗೊಳಗಾದರು. ಭಗವಂತ ಶಿವ ಮುಂದೆ ಬಂದು ಆ ವಿನಾಶಕಾರಿ ವಿಷವನ್ನು ಕುಡಿದು ಜಲಚರ ಜಗತ್ತನ್ನು ರಕ್ಷಿಸಿದ್ದ.

ಹಾಗೆಯೇ ಹಿಂದೂಸ್ತಾನದ ಸಮುದ್ರಮಂಥನದಿಂದ ಒಂದು ಕಡೆ ಸ್ವಾತಂತ್ರ್ಯದ ಅಮೃತ ಚಿಮ್ಮಿದರೆ ಮತ್ತೊಂದೆಡೆ ಕೋಮು ದ್ವೇಷದ ಭಯಂಕರ ವಿಷ ಚಿಮ್ಮಿತು. ಭಾರತ ಮತ್ತು ಪಾಕಿಸ್ತಾನದಲ್ಲಿ ಲಕ್ಷಾಂತರ ನಿರಪರಾಧಿ ಸ್ತ್ರೀ ಪುರುಷರು ಮತ್ತು ಮಕ್ಕಳು ಧರ್ಮಾಂಧ ಭಯೋತ್ಪಾದಕರ ಖಡ್ಗಕ್ಕೆ ಬಲಿಯಾದರು. ಅಹಿಂಸೆ ಮತ್ತು ರಕ್ತಪಾತದಿಂದ ನಿರಪರಾಧಿಗಳನ್ನು ಹೇಗೆ ರಕ್ಷಿಸಬೇಕು ಎಂಬುದೇ ದೊಡ್ಡ ಪ್ರಶ್ನೆಯಾಗಿತ್ತು. ಬಾಪು ಅವರ ಒಂಟಿ ಧ್ವನಿಯು ಭಾರತ ಮತ್ತು ಪಾಕಿಸ್ತಾನದಲ್ಲಿ ಪ್ರತಿಧ್ವನಿಸಿತು. "ಈ ಬೆಂಕಿಯನ್ನು ನಂದಿಸಿ' ಇಲ್ಲ ಅಂದರೆ ಇಬ್ಬರೂ ಸುಟ್ಟು ಭಸ್ಮರಾಗುತ್ತಾರೆ. ಬಾಪು ವ್ಯಾಕುಲರಾಗಿ ಈಶ್ವರನಿಗೆ ಪ್ರಾರ್ಥಿಸಿದರು– ಹೇ ಈಶ್ವರ! ಈ ಜ್ವಾಲೆಯನ್ನು ನಂದಿಸು. ಇಲ್ಲ ಅಂದರೆ ನನಗೂ ಜ್ವಾಲೆಯಲ್ಲಿ ಭಸ್ಮ ಮಾಡಿಬಿಡು. ನಾನು ಇದಕ್ಕೆ ಸಾಕ್ಷಿಯಾಗಲಾರೆ".

ಶುಕ್ರವಾರ 30 ಜನವರಿ 1938ರ ಸಾಯಂಕಾಲ ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ದಾರಿ ತಪ್ಪಿದ ತಮ್ಮ ದೇಶದ ಪ್ರಜೆಯ ಪಿಸ್ತೂಲಿನ ಗುಂಡಿಗೆ ಬಲಿಯಾಗಿ ಚಿರನಿದ್ರೆಗೆ ಜಾರಿದರು. ಹಿಂದೂಸ್ತಾನ ಉಳಿಯಲೆಂದು ಕೋಮುವಾದದ ವಿಷವನ್ನು ಅವರೊಬ್ಬರೇ ನುಂಗಿದರು.

'ಶ್ರೀಮತಿ ಬರಲೇ' ಅವರು ಹೇಳುವಂತೆ– "ಪ್ರಪಂಚ ಎರಡನೇ ಬಾರಿಗೆ ಏಸುವನ್ನು ಶಿಲುಬೆಗೆ ಏರುವುದನ್ನು ನೋಡಿದೆ."

ಬಾಪುಗೆ ಗುಂಡುಗಳು ತಾಗಿ ಧರೆಗುರುಳಿದಾಗ ಅವರ ಬಾಯಿಯಿಂದ ಬಂದ ಎರಡೇ ಎರಡು ಶಬ್ದಗಳು "ಹೇ ರಾಮ್" ಅವರು ಪ್ರಾಣ ಬಿಡುತ್ತಾ ಗುಂಡು ಹಾರಿಸಿದ ಹಂತಕನಿಗೆ ಕೈಜೋಡಿಸಿ ನಮಸ್ಕರಿಸಿದರು.

ನಿಗದಿತ ಸಮಯಕ್ಕೆ ಶುಕ್ರವಾರದ ಸಂಜೆ, ರೇಡಿಯೋ ಮತ್ತು ಟೆಲಿಪ್ರಿಂಟರ್‌ಗಳಲ್ಲಿ ಈ ವಾರ್ತೆಯನ್ನು ಪ್ರಸಾರವಾದಾಗ ದೇಶದ ಹೃದಯ ಬಡಿತವೇ ನಿಂತು ಹೋಯಿತು.

ಸ್ವಲ್ಪ ಹೊತ್ತು ದೇಶದ ಮೂಲೆ ಮೂಲೆಯಲ್ಲಿ ಭಯಂಕರ ಮೌನ ಮತ್ತು ಶೋಕ ಆವರಿಸಿತು. ಮೌನ ಮುರಿದ ನಂತರ ಕೋಟ್ಯಾಂತರ ಹೃದಯಗಳು ರೋಧಿಸಿದವು. ಇಡೀ ದೇಶ ದುಃಖಸಾಗರದಲ್ಲಿ ಮುಳುಗಿ ಹೋಯಿತು. ಇನ್ನು ಸಂಜೆ ಕಳೆದಿರಲಿಲ್ಲ ದುಃಖದ ಧ್ವನಿ ತರಂಗಗಳು ಇಡೀ ಪ್ರಪಂಚವನ್ನೇ ರೋಧನದಲ್ಲಿ ಮುಳುಗಿಸಿತು. ಆ ರಾತ್ರಿ ಭಾರತ ಮಾತ್ರವಲ್ಲದೆ, ಇಡೀ ಪ್ರಪಂಚ ರೋಧಿಸುತ್ತಿತ್ತು.

ರೂಮ್ ರೋಲಾ, ಐನ್‌ಸ್ಟೀನ್, ಬರ್ನಾರ್ಡ್ ಷಾರಂತಹ ಮಹನೀಯರು ದಿಗ್ಭ್ರಾಂತರಾದರೆ ಮೈಕ್ ಆರ್ಥರ್‌ರಂತಹ ಸೇನಾಧಿಪತಿ ದುಃಖತಪ್ತನಾಗಿ ಹೀಗೆ ಹೇಳಿದ:–

"ಆಧುನಿಕ ಇತಿಹಾಸದಲ್ಲಿ ಪವಿತ್ರಾತ್ಮ ಗಾಂಧೀಜಿಯನ್ನು ಮೃಗೀಯವಾಗಿ ಹತ್ಯೆ ಮಾಡುವುದಕ್ಕಿಂತ ನಾಚಿಕೆಗೇಡು ಮತ್ತು ಮೂರ್ಖತನದ ಪಾಪ ಮತ್ತೊಂದಿಲ್ಲ. ತಮ್ಮ ಜೀವನ, ತಮ್ಮ ಕೆಲಸ ಮತ್ತು ವಿಚಾರಗಳ ಮೂಲಕ ಅವರು ಏನು ಸಾಧಿಸಿ ತೋರಿಸಿದ್ದಾರೋ ಅದಕ್ಕೆ ನಾವು ಅವರಿಗೆ "ಶಾಂತಿಯ ಅವತಾರ" ಎಂದು ಹೇಳಬೇಕು. ಶಾಂತಿಯ ಯುಗಪುರುಷ ಗುಂಡಿಗೆ ಬಲಿಯಾಗಿರುವುದು ಮಾನವತೆಯ ದುರ್ಭಾಗ್ಯ. ಒಂದು ವೇಳೆ ಪ್ರಪಂಚದಲ್ಲಿ ಶಾಂತಿ ನೆಲಸಿ ಅಭಿವೃದ್ಧಿಯ ಸಮನ್ವಯ ಆಗಬೇಕೆಂದರೆ ಗಾಂಧೀಜಿಯ ತತ್ವಗಳನ್ನು ಪಾಲಿಸಬೇಕು. ಹಿಂಸೆಯಿಂದ ವಿಚಾರಗಳನ್ನು ಹರಡುವುದು ಸೈದ್ಧಾಂತಿಕವಾಗಿ ತಪ್ಪು. ಅಲ್ಲದೆ ಅದರ ಮೂಲ ಆತ್ಮಹತ್ಯೆ ಆಗಿರುತ್ತದೆ. ಯಾರು ತಮ್ಮ ಸಮಯಕ್ಕೂ ಮುಂಚೆ ಹುಟ್ಟುತ್ತಾರೋ ಗಾಂಧೀಜಿ ಅಂತಹ ಮಹಾಪುರುಷರಲ್ಲಿ ಒಬ್ಬರು."

ಪಾಕಿಸ್ತಾನದ ದಿನಪತ್ರಿಕೆ ಡಾನ್ ಪ್ರಕಾರ– 'ಈ ಮಹಾನ್ ವೃದ್ಧ ಪಾಕಿಸ್ತಾನ ಮತ್ತು ಹಿಂದುಸ್ತಾನದ ಸಾಮಾನ್ಯ ಜನರ ಮನಸ್ಸಿನಲ್ಲಿ ಹಾಸುಹೊಕ್ಕಾಗಿದ್ದರು. ಅಫ್ಘಾನಿಸ್ತಾನ್, ಇರಾನ್, ತುರ್ಕಿ, ಇರಾಖ್, ಮತ್ತು ಇಂಡೋನೇಷಿಯಾ ಎಲ್ಲ ಇಸ್ಲಾಮಿ ರಾಷ್ಟ್ರಗಳ ರಾಜರು, ಪ್ರಜೆಗಳು, ಅಧಿಕಾರಿಗಳು ಮತ್ತು ಜನಸಾಮಾನ್ಯರು ದುಃಖತಪ್ತ ಹೃದಯಗಳಿಂದ 'ಯಾ ಅಲ್ಲಾಹ್ ಪ್ರಪಂಚದಲ್ಲಿ ಶಾಂತಿ ನೆಲೆಸಲು ನಮ್ಮೆಲ್ಲರನ್ನು ಗಾಂಧೀಜಿ ತೋರಿರುವ ಮಾರ್ಗದಲ್ಲಿ ನಡೆಯುವ ಬುದ್ಧಿ ಕೊಡು' ಎಂದು ಅಲ್ಲಾಹ್‌ನಿಗೆ ಮೊರೆಹೋದರು.

ಪ್ರಪಂಚದ ಅತಿ ಹೆಚ್ಚು ಪೀಡಿತ ಮತ್ತು ದಲಿತ ನೀಗ್ರೋ ಜಾತಿಯ ನಾಯಕ ಮಾರ್ಟಿನ್ ಲೂಥರ್ ಕಿಂಗ್ ತನ್ನ ಭಾಷಣದಲ್ಲಿ ಹೀಗೆ ಹೇಳಿದ:–

ಹೇಗೆ ಭಾರತದ ಶೋಷಿತ ಮತ್ತು ತಳಸಮುದಾಯದವರು ಮಹಾತ್ಮ ಗಾಂಧಿಯನ್ನು ತಮ್ಮ ಮಾರ್ಗದರ್ಶಕ ಎಂದು ಭಾವಿಸುತ್ತಾರೋ ಹಾಗೆಯೇ

ಪ್ರಪಂಚದ ಎಲ್ಲಾ ಶೋಷಿತ ಮತ್ತು ತಳಸಮುದಾಯದ ಜನರು ಗಾಂಧೀಜಿಯನ್ನು ತಮ್ಮ ಮಾರ್ಗದರ್ಶಕ ಮತ್ತು ಉದ್ಧಾರಕ ಎಂದು ಭಾವಿಸಿದ್ದಾರೆ. ನೀಗ್ರೋ ಜಾತಿಯು, ರಾಮನ ಸಂದೇಶದಿಂದ ಶಕ್ತಿ ಮತ್ತು ಪ್ರೇರಣೆಯನ್ನು ಪಡೆದಿದೆ. ಗಾಂಧೀಜಿಯ ಹತ್ಯೆಯಿಂದ ನಮಗೆ ಒಬ್ಬ ತಂದೆ, ಒಂದು ಆಸರೆ ಮತ್ತು ಒಬ್ಬ ಮಾರ್ಗದರ್ಶಕ ಇಲ್ಲದಂತಾಗಿದೆ. ಈಗ ನಾವು ಯಾರಿಂದ ಮಾರ್ಗದರ್ಶನದ ಆಸೆಯನ್ನಿಡುವುದು"(71)

ಗಾಂಧೀಜಿಯ ಮಹಾನ್ ಪ್ರಯಾಣದ ಬಗ್ಗೆ ಫ್ರಾನ್ಸಿನ ಪ್ರಸಿದ್ಧ ಸಮಾಜವಾದಿ ನಾಯಕ ಮತ್ತು ಒಂದು ಕಾಲದ ಪ್ರಧಾನಮಂತ್ರಿ ಮೋಷಿಯೋಬ್ಲೋಮ್ ಗಾಢವಾದ ಸಂವೇದನೆಯನ್ನು ವ್ಯಕ್ತಪಡಿಸುತ್ತಾ ತನ್ನ ಭಾಷಣದಲ್ಲಿ ಹೀಗೆ ಹೇಳಿದ:–

"ಪಿಸ್ತೂಲಿನ ಗುಂಡುಗಳು ಬರಿ ಗಾಂಧೀಜಿಯ ವೃದ್ಧ ಶರೀರವನ್ನು ಕೊಲ್ಲಲಿಲ್ಲ. ದೀರ್ಘ ಕಾಲದ ಭಾರತದ ನೈತಿಕತೆಯನ್ನೇ ಕೊಂದಿವೆ ಆ ಗುಂಡುಗಳು. ಕ್ರೈಸ್ತನ ಹತ್ಯೆಯ ಪಾಪದಿಂದ ಹೇಗೆ ಪ್ಯಾಲೆಸ್ತೀನಿಗಳು ಮುಕ್ತರಾಗಲಿಲ್ಲವೋ ಹಾಗೆ ಗಾಂಧೀಜಿಯ ಹತ್ಯೆಯಿಂದ ಸಂಘದವರು ಸಹ ತಮ್ಮನ್ನು ಮುಕ್ತಗೊಳಿಸಲು ಸಾಧ್ಯವಿಲ್ಲ ಎಂದು ನಾನು ಭಾವಿಸುತ್ತೇನೆ. "

ಅವರ ಬಲಿದಾನಕ್ಕೂ ಎರಡು ದಿನಗಳ ಹಿಂದೆ ಗಾಂಧೀಜಿ ಅವರು ಹೀಗೆ ಹೇಳಿದ್ದರು:–

"ನಾನು ನಗುನಗುತ್ತಾ ಗುಂಡಿನ ಸುರಿಮಳೆಯನ್ನು ಎದುರಿಸುವುದಕ್ಕಿಂತ ಅದೃಷ್ಟ ಬೇರೆ ಇಲ್ಲ". ಭಗವಂತ ಅವರ ಆಸೆಯನ್ನು ಪೂರೈಸಿದ.

ಗಾಂಧೀಜಿಯ ಬಲಿದಾನಕ್ಕೂ ಮುಂಚೆ ಭಾರತದಲ್ಲಿ ವೈಮನಸ್ಸಿನಿಂದ ವಿಚಾರಗಳಿಗಾಗಿ ಯಾವ ಮಹಾಪುರುಷನ ಹತ್ಯೆ ಆಗಿರಲಿಲ್ಲ. ಗೌತಮ ಬುದ್ಧ ಸಹ ಬಹಳ ಕಹಿ ಮತ್ತು ಕಠೋರ ಮಾತುಗಳಿಂದ ಸಮಾಜದ ಮೇಲೆದಾಳಿ ಮಾಡಿದ್ದರು ಆದರೂ ಸಹ ಅವರು ತಮ್ಮ ಇಡೀ ಆಯಸ್ಸನ್ನು ಮುಗಿಸಿದ ನಂತರ ಮುಕ್ತಿಯನ್ನು ಪಡೆದರು. ಮಹಾವೀರನ ವಿಚಾರದಲ್ಲೂ ಸಹ ಬಹಳಷ್ಟು ವಿರೋಧಗಳಿದ್ದರೂ ಜನ ಅವರನ್ನು ಹತ್ಯೆ ಮಾಡುವಂತಹ ಪಾಪ ಮಾಡಿರಲಿಲ್ಲ. ಇಂತಹ ಹೇಯ ಕೃತ್ಯ ನಮ್ಮ ಇಡೀ ಇತಿಹಾಸದಲ್ಲಿಲ್ಲ. ಭಾರತೀಯ ಸಂಸ್ಕೃತಿ ಯಾವುದರಿಂದ ಅಪರಿಚಿತವಾಗಿತ್ತೋ ಅದರ ಕಪ್ಪು ಮಸಿ ನಮ್ಮ ಇತಿಹಾಸಕ್ಕಂಟಿತು. (72)

ಬಾಪುವಿನ ಬಲಿದಾನದಿಂದ ಇಡೀ ದೇಶದಲ್ಲಿ ಪಶ್ಚಾತಾಪದ ಅಲೆ ಹರಡಿತು. ಇದನ್ನು ವರ್ಣಿಸುತ್ತಾ ಗುರುದೇವ ರವೀಂದ್ರನಾಥ ಠಾಕೂರರು ತಮ್ಮ ಕವಿತೆ "ಮಹಾಮೃತ್ಯುಂಜಯ"ದಲ್ಲಿ ಹೀಗೆ ಬರೆದಿದ್ದಾರೆ:–

ರಾಮ ರಹೀಮ (ಕವಿತೆ)

ಜನದಟ್ಟಣೆಯಿಂದ ಒಬ್ಬ ವ್ಯಕ್ತಿ ,
ಇದ್ದಕ್ಕಿದ್ದಂತೆ ಎದ್ದು ನಿಂತುಕೊಂಡು ,
ನಾಯಕನತ್ತ ಬೆಟ್ಟು ಮಾಡಿ ಹೇಳಿದ –
ನೀನು ನಮಗೆ ಮೋಸ ಮಾಡಿದ್ದೀಯ ,
ನೀನು ನಮಗೆ ಎಲ್ಲಿಗೆ ಕರೆದುಕೊಂಡು ಹೋಗುತ್ತಿದ್ದೀಯಾ?
ಜನದಟ್ಟಣೆಯ ತಿರಸ್ಕಾರ ತೀವ್ರವಾಗತೊಡಗಿತು,
ಒಬ್ಬ ಹೇಡಿ ಸೆಟೆದು ನಿಂತು, ಹಟಾತ್ತಾಗಿ ನಾಯಕನ ಮೇಲೆ ದಾಳಿ ಮಾಡಿದ;
ದಾಳಿಯ ಮೇಲೆ ದಾಳಿ, ಪ್ರಾಣವನ್ನು
ಕಳೆದುಕೊಂಡ ನಾಯಕನ ದೇಹ ಧರೆಗುರುಳಿತು.
ಕತ್ತಲು ಸರಿದ ಮೇಲೆ, ಬೆಳಕಿನ ಕಿರಣಗಳು,
ಸತ್ತ ನಾಯಕನ ಹಣೆಯನ್ನು ಚುಂಬಿಸಿದವು;
ಮಹಿಳೆಯರು: ಬಿಕ್ಕಿಬಿಕ್ಕಿ ಅಳುತ್ತಿದ್ದರು.
ಪುರುಷರು ದುಃಖದಿಂದ ಮುಖವನ್ನು ಮುಚ್ಚಿಕೊಂಡರು.
ಜನ ಪರಸ್ಪರ ಕೇಳಿದರು
ಈಗ ನಮಗೆ ದಿಕ್ಕು ತೋರಿಸುವವರು ಯಾರು?
ಒಂದು ಧ್ವನಿ ಕೇಳಿಸಿತು
"ನಾವು ಯಾರನ್ನು ಕೊಂದಿದ್ದೀವೋ ಅವನೇ ದಿಕ್ಕು ತೋರುತ್ತಾನೆ".
ಎಲ್ಲರೂ ತಲೆ ತಗ್ಗಿಸಿ, ಮೌನರಾದರು, ಆ ಧ್ವನಿ ಮತ್ತೆ ಹೇಳುತ್ತದೆ
'ಸಂದೇಹಕ್ಕೆ ಗುರಿಯಾಗಿ ನಾವು ಅವನನ್ನು ಒಪ್ಪಿಕೊಳ್ಳಲಿಲ್ಲ,
ಕೋಪಕ್ಕೆ ಗುರಿಯಾಗಿ ನಾವು ಅವನ ಹತ್ಯೆ ಮಾಡಿದೆವು!
ಈಗ ನಮಗೆ ಪ್ರೀತಿಯಿಂದ ಶ್ರದ್ಧೆಯಿಂದ,
ಅವನ ಮಾರ್ಗದರ್ಶನವನ್ನು ಒಪ್ಪಿಕೊಳ್ಳಬೇಕಾಗಿದೆ,
ಏಕೆಂದರೆ, ಅವನು ಸತ್ತು ನಮ್ಮ ವೈಯಕ್ತಿಕ ಜೀವನದಲ್ಲಿ
ಸಂಜೀವಿತನಾಗಿದ್ದಾನೆ. ಆತ ಮಹಾನ್ ಮೃತ್ಯುಂಜಯ."
ಎಲ್ಲರೂ ಎದ್ದು ನಿಂತರು,
ಎಲ್ಲರೂ ಒಟ್ಟಾಗಿ ಒಂದೇ ಸ್ವರದಲ್ಲಿ
ಜೈ! ಮಹಾತ್ಮ ಜೈ!"

ಮೂಲ : ಬಂಗಾಲಿ – ರವೀಂದ್ರನಾಥ ಠಾಗೂರ್
ಹಿಂದಿ ಅನುವಾದ : ಮಹಾತ್ಮ ಗಾಂಧಿ
ಹಿಂದಿಯಿಂದ ಕನ್ನಡಕ್ಕೆ : ಡಾ. ಷಾಕೀರ ಖಾನಂ

ಶ್ರೀಮತಿ ಸರೋಜಿನಿ ನಾಯ್ಡು ಅವರು ಇದೇ ಭಾವನೆಗಳನ್ನು ಶಬ್ದಗಳಲ್ಲಿ ಹೀಗೆ ಹೇಳಿದರು. ಒಂದು ವೇಳೆ ನಾವು ಗಾಂಧೀಜಿಯ ಸಾವಿನ ನಂತರ ನಾವೆಲ್ಲವನ್ನು ಕಳೆದುಕೊಂಡೆವು ಎಂದು ಭಾವಿಸಿದರೆ ನಾವು ನಮ್ಮ ರಾಷ್ಟ್ರಪಿತನಿಗೆ ದ್ರೋಹ ಬಗೆದಂತೆ. ನಮ್ಮಿಂದ ಅವರ ನಶ್ವರ ದೇಹ ಹೊರಟು ಹೋದ ನಂತರ ಅವರ ಮಾರ್ಗವೂ ನಷ್ಟವಾಯಿತೆಂದು ಯೋಚಿಸಿದರೆ ಅವರು ನೀಡಿರುವ ನಂಬಿಕೆ, ನಿಷ್ಠೆ ಮತ್ತು ಪ್ರಾಮಾಣಿಕತೆಗಳ ಅವರ ಶಿಕ್ಷಣಕ್ಕೆ ಬೆಲೆ ಇರುತ್ತದೆಯೇ? ನಾವು ಅವರ ವಾರಸುದಾರರು ಅವರ ಆಧ್ಯಾತ್ಮಿಕ ವಂಶಜರು ಅವರ ಮಹಾನ್ ಆದರ್ಶಗಳನ್ನು ಎತ್ತಿ ಹಿಡಿಯುವವರು ಮತ್ತು ಅವರ ಮಹಾತ್ಕಾರ್ಯಗಳನ್ನು ಅವರಿಲ್ಲದಾಗಲೂ ಮುಂದುವರಿಸಲು. ಅವರ ಶಿಷ್ಯ ಮತ್ತು ಶಿಷ್ಯೆಯರಾದ ನಾವು ಜೀವಂತವಾಗಿಲ್ಲವೇ? ನಾವು ಅವರ ಜೀವಂತ ಸಾಕ್ಷಿಗಳು. ನಾವು ಅವರ ಸೈನಿಕರು ಮತ್ತು ಯುದ್ಧದ ಕಾರ್ಮೋಡಗಳ ಪ್ರಪಂಚದಲ್ಲಿ, ನಾವು ಅವರ ಶಾಂತಿಯ ಪತಾಕೆಯನ್ನು ಹಾರಿಸಬೇಕು. ಸತ್ಯ ನಮ್ಮ ಬಾವುಟ. ನಮ್ಮ ಗುರಾಣಿ ಅಹಿಂಸೆ. ರಕ್ತಪಾತವಿಲ್ಲದೆ ಜಯಗಳಿಸುವ ಆತ್ಮವೇ ನಮ್ಮ ಖಡ್ಗ. ನಾವು ನಮ್ಮ ಗುರುವಿನ ದಾರಿಯನ್ನು ಅನುಸರಿಸಬೇಡವೇ? ನಾವು ನಮ್ಮ ತಂದೆಯ ಆಸೆಯನ್ನು ಪೂರೈಸಬಾರದೆ? ನಾವು ಅವರ ಆಹಿಂಸಾವಾದದ ಸೈನ್ಯದ ಸೈನಿಕರಲ್ಲವೇ? ನಾವು ಅವರ ಅಪೂರ್ಣ ಕೆಲಸವನ್ನು ಪೂರ್ಣಗೊಳಿಸುವುದಿಲ್ಲವೇ?ನಾವು ಅವರ ಕಲ್ಪನೆಯ ರಾಮರಾಜ್ಯವನ್ನು ಸ್ಥಾಪಿಸುವುದಿಲ್ಲವೇ? ಇಡೀ ಪ್ರಪಂಚಕ್ಕೆ ಗಾಂಧೀಜಿಯ ಸಂದೇಶವನ್ನು ಕೊಡುವುದಿಲ್ಲವೇ?"(73)

"ಗಾಂಧೀಜಿಯ ದುರ್ಬಲ ದೇಹವು ಬೆಂಕಿಯಲ್ಲಿ ಭಸ್ಮವಾಯಿತು ಆದರೆ ಪೈಗಂಬರ್, ಕ್ರೈಸ್ತರಂತೆ ಭಕ್ತರ ಕರೆಗೆ ಓಗೊಡುತ್ತ ಪ್ರೀತಿಯಿಂದ ಮಾರ್ಗದರ್ಶನ ಮಾಡುತ್ತ ಪ್ರೇರೇಪಿಸುತ್ತ ಮಹಾನ್ ಮೃತ್ಯುಂಜಯರಾಗಿ ಅವರು ಇಂದಿಗೂ ಭಾರತೀಯರ ಹೃದಯಗಳಲ್ಲಿ ಜೀವಂತವಾಗಿದ್ದಾರೆ".

ಗಾಂಧೀಜಿ ನಿಧನದ ನಂತರ ಗಣ್ಯರ ಸಂತಾಪ

"ಪ್ರಪಂಚದ ಪ್ರಸಿದ್ಧ ಶಾಂತಿದೂತನ ಈ ಕ್ರೂರ ಹತ್ಯೆಯಿಂದ ಇಡೀ ಹಿಂದುಸ್ತಾನಿಗಳು ದುಃಖದಲ್ಲಿದ್ದಾರೆ. ಈಗ ಈ ಪ್ರಪಂಚಕ್ಕೆ ಶಾಂತಿಯ ಸಂದೇಶವನ್ನು ಯಾರು ನೀಡುತ್ತಾರೆ".

ಆಫ್‌ಘಾನಿಸ್ತಾನದ ಪ್ರಧಾನಮಂತ್ರಿ

ಗಾಂಧೀಜಿಯ ಹತ್ಯೆಯಿಂದ ನನಗೆ, ನನ್ನ ಸರ್ಕಾರಕ್ಕೆ ಮತ್ತು ಇರಾನಿ ಪ್ರಜೆಗಳಿಗೆ ಬಹಳ ಆಘಾತವಾಗಿದೆ. ಭಗವಂತ ನಮಗೆ, ಅವರು ನಡೆದ ದಾರಿಯಲ್ಲಿ ನಡೆಯುವ ಸದ್ಬುದ್ಧಿ ನೀಡಲಿ. ಅವರು ನಡೆದ ದಾರಿಯಲ್ಲಿ ನಡೆದರೆ ಮಾತ್ರ ಪ್ರಪಂಚದಲ್ಲಿ ಶಾಂತಿ ನೆಲೆಸಲು ಸಾಧ್ಯ".

ಮೊಹಮ್ಮದ್ ರಜಾ ಪಹಲವೇ. (ಇರಾನ್)

ಮಹಾತ್ಮ ಗಾಂಧಿಯ ಸಾವು ಶಾಂತಿದೂತನ ಸಾವು ಇದರಿಂದ ಪ್ರತಿಯೊಬ್ಬ ತುರ್ಕಿಯ ಪ್ರಜೆ ದುಃಖಿತನಾಗಿವೆ".

ಇಸ್ಮತ್ ಹುನೇನ್ (ಟರ್ಕಿಯ ರಾಷ್ಟ್ರಪತಿ)

ಇಂಡೋನೇಷಿಯಾದ ಪ್ರತಿಯೊಬ್ಬ ಪ್ರಜೆಯೂ ಗಾಂಧೀಜಿಯ ಈ ಹತ್ಯೆಯಿಂದ ಬಹಳ ನೊಂದಿದ್ದಾನೆ. ಇಂದು ಭಾರತದ ದುಃಖ, ಮಾನವೀಯತೆಯ ದುಃಖವಾಗಿದೆ. ಇಂದು ಪ್ರಪಂಚ ಒಬ್ಬ ಯುಗಪುರುಷನನ್ನು ಕಳೆದುಕೊಂಡಿದೆ".

ಇಂಡೋನೇಷಿಯಾದ ರಾಷ್ಟ್ರಪತಿ

ಮಹಾತ್ಮಗಾಂಧಿ ಪ್ರಪಂಚದ ಅತಿದೊಡ್ಡ ಶಾಂತಿದೂತರಾಗಿದ್ದರು. ಇಂದು ಇರಾಕಿನ ಪ್ರತಿಯೊಬ್ಬ ಪ್ರಜೆಯ ಹೃದಯ ದುಃಖದಿಂದ ಹೆಪ್ಪುಗಟ್ಟಿದೆ. ಶಾಂತಿಯ ಮಾರ್ಗವನ್ನು ತೋರಿಸುವ ವ್ಯಕ್ತಿ ಪ್ರಪಂಚವನ್ನು ಬಿಟ್ಟುಹೋದ."

ರೀಜೆಂಟ್ ಇರಾಕ್


ಮಹಾತ್ಮ ಗಾಂಧಿಯ ನಿಧನದಿಂದ ಪ್ರಪಂಚವಿಂದು ಅನಾಥವಾಗಿದೆ. ಪ್ರಪಂಚದ ಅತಿ ಹಿರಿಯ ಶಾಂತಿಯ ಯುಗಪುರುಷ ಇಲ್ಲದಂತಾಗಿದೆ."

ಸಿರಿಯಾದ ರಾಷ್ಟ್ರಪತಿ

ಗಾಂಧೀಜಿಯ ಮರಣ ಪ್ರಪಂಚದ ಅತಿದೊಡ್ಡ ಶಾಂತಿದೂತನ ನಿಧನವಾಗಿದೆ. ಮನುಷ್ಯತ್ವದ ಮುಂದೆ ಇದಕ್ಕಿಂತ ದೊಡ್ಡ ಅಪರಾಧ ಬೇರೊಂದಿಲ್ಲ. ಇಂದು ಪ್ರತಿಯೊಬ್ಬ ಮಿಶ್ರಿ ದುಃಖದಲ್ಲಿದ್ದಾರೆ.

ಮಿಸ್ರನ ಪ್ರಧಾನಮಂತ್ರಿ

ಮೂಲ ಲೇಖಕರ ಪರಿಚಯ



ವಿಶ್ವಂಭರನಾಥ ಪಾಂಡೆ

(23.12.1906 – 1.06.1998)

ಒಡಿಸ್ಸಾದ ರಾಜಪಾಲರು (1983 1998)

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಭಾಗವಹಿಸಿದವರಲ್ಲಿ ವಿಶ್ವನಾಥ್ ಪಾಂಡೆ ಅವರು ಅಗ್ರಗಣ್ಯರಾಗಿದ್ದಾರೆ.. ಗಾಂಧೀಜಿ ಅವರ ತತ್ವ ಸಿದ್ಧಾಂತಗಳನ್ನು ಪಾಲಿಸಿ, ಭಾರತದಲ್ಲಿ ಕೋಮು ಸೌಹಾರ್ದತೆಯನ್ನು ಕಾಪಾಡಲು ಶ್ರಮಿಸಿ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಸಾಂಪ್ರದಾಯಿಕ ಸದ್ಭಾವನೆ, ಸಾಂಸ್ಕೃತಿಕ ಸಮನ್ವಯ ಇವರ ಜೀವನದ ಧ್ಯೇಯಗಳಾಗಿದ್ದವು. ಭಾರತ ಮತ್ತು ಮಾನವ ಸಂಸ್ಕೃತಿ ಎಂಬ ಪುಸ್ತಕವನ್ನು ಬರೆದಿದ್ದಾರೆ.

ಪಾಟ್ನಾದ ಗಂಗಾ ನದಿಯ ದಡದಲ್ಲಿರುವ ಖುದಾ ಬಕ್ಷ್ ಓರಿಯಂಟಲ್ ಪಬ್ಲಿಕ್ ಲೈಬ್ರರಿ ಭಾರತದ ಅತ್ಯಂತ ಹಳೆಯ ಲೈಬ್ರರಿಗಳಲ್ಲಿ ಒಂದು. ಇಲ್ಲಿ ಸುಮಾರು 21,000 ಹಸ್ತಪ್ರತಿಗಳೂ ಎರಡೂವರೆ ಲಕ್ಷ ಪುಸ್ತಕಗಳ ಸಂಗ್ರಹವೂ ಇದೆ. ಬಿಹಾರ್ ಖಾನ್ ಬಹದ್ದೂರ್ ಖುದ ಬಕ್ಷ್ ಅವರು ಇದನ್ನು 1891 ರಲ್ಲಿ ಸ್ಥಾಪಿಸಿದರು. ಈ ಲೈಬ್ರರಿಯ ನಿರ್ದೇಶಕಿಯಾಗಿದ್ದ ಶಾಯಿಸ್ತಾ ಬೇದಾರ್. ವಿಶ್ವಂಭರನಾಥ ಪಾಂಡೆ ಅವರ ಈ ಪುಸ್ತಕವನ್ನು ಖುದಾ ಬಕ್ಷ್ ಓರಿಯಂಟಲ್ ಲೈಬ್ರರಿಯ ವತಿಯಿಂದ ಪ್ರಕಟಿಸಿದ್ದಾರೆ.

ಅನುವಾದಕರ ಪರಿಚಯ



ಡಾ. ಷಾಕೀರ ಖಾನಂ

ಗಾಂಧೀಜಿ ಯವರ ಜೊತೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ ದಿವಂಗತ ಮುಸ್ಲಿಂ ವೆಲ್ಲೂರಿ ಅವರ ಮೊಮ್ಮಗಳಾದ ಇವರು ಸುಮಾರು ಮೂವತ್ತು ವರ್ಷಗಳಿಂದ ಬೆಂಗಳೂರಿನ ಅಲ್ ಅಮೀನ್ ಪದವಿ ಕಾಲೇಜಿನಲ್ಲಿ ಹಿಂದಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. "ನಿಷೆ" ಕವನಸಂಕಲನ", "ಮುಸ್ಲಿಂ ವೆಲ್ಲೂರಿಯ ವ್ಯಕ್ತಿತ್ವ ಮತ್ತು ಜೀವನ" ಎಂಬ ಕೃತಿ ರಚಿಸಿದ್ದಾರೆ. "ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಸ್ಲಿಂ ಮಹಿಳೆಯರ ಕೊಡುಗೆ", "ಇಂದಿರಾ ಗಾಂಧಿಯ ವ್ಯಕ್ತಿತ್ವ ಮತ್ತು ವರ್ಚಸ್ಸು", "ಕೆಂಡಗಳು", "ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಮತ್ತು ಸರ್ ಸಯ್ಯದ್ ಅಹಮದ್ ಖಾನ್", "ಔರಂಗಜೇಬ ಒಂದು ಹೊಸ ವಿಮರ್ಶೆ", "ಚಾರುವಸಂತ", "ಸಿರಿಗೆ ಸೆರೆ", "ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಮುಸ್ಲಿಂ ಮಹಿಳೆಯರಿಗೆ ಬರೆದ ಗಾಂಧೀಜಿಯ ಪತ್ರಗಳನ್ನು" ಅನುವಾದಿಸಿ ರಾಜ್ಯದ ಅತ್ಯುತ್ತಮ ಅನುವಾದಕರಲ್ಲಿ ಒಬ್ಬರಾಗಿದ್ದಾರೆ.

ಆಕರ ಗ್ರಂಥಗಳು

1. ಋಗ್ವೇದ 1–41–9.
2. ಸಾಮವೇದ–5.
3. ಈಶೋಪನಿಷತ್.
4. ಶ್ರೀಮದ್ ಭಗವದ್ಗೀತಾ– 2–38, 3–19, 25, 5–7, 16, 17, 25, 30, 6–29, 30, 31, 32, 11–15, 23–8, 15, 13– 17, 15–15, 6–2, 18–61.
5. ಅಥರ್ವವೇದ ಪೃಥಿವಿ ಸೂತ್ರ 12–1–1.
6. ಅಥರ್ವವೇದ, ಪೃಥ್ವಿ ಸೂತ್ರ–45.
7. ಅಥರ್ವವೇದಪೃಥ್ವಿ ಸೂತ್ರ, –13.
8. ಅಥರ್ವವೇದ, ಪೃಥ್ವಿ ಸೂತ್ರ, 39, 48, 34.
9. ಧಮ್ಮಪದ.
10. ಪುರಾಣ. (ಗಾಥ), 49–4.
11. ಸಹಿಃ ಬುಖರಿ.
12. ಕುರಾನ್ ಶರೀಫ್, 2–213.
13. ಕುರಾನ್ ಶರೀಫ್, 10–19.
14. ಕುರಾನ್ ಶರೀಫ್, 21–92–93.
15. ಸಹಿತಿರ್ಮಿಜಿ.
16. ಕುರಾನ್ ಶರೀಫ್, 10–47.
17. ಕುರಾನ್ ಶರೀಫ್, 13–7.
18. ಕುರಾನ್ ಶರೀಫ್, 14–4
19. ಕುರಾನ್ ಶರೀಫ್, 14–4.
20. ಕುರಾನ್ ಶರೀಫ್, 4–150, 151.
21. ಕುರಾನ್ ಶರೀಫ್, 3–91.
22. ಕುರಾನ್ ಶರೀಫ್, 41–43
23. ಕುರಾನ್ ಶರೀಫ್, 2–62.
24. ಕುರಾನ್ ಶರೀಫ್, 2–153.
25. ಕುರಾನ್ ಶರೀಫ್, 2–119.
26. ಕುರಾನ್ ಶರೀಫ್, 18–5.

27. ಕುರಾನ್ ಶರೀಫ್, 23–71.
28. ನಂತರ ಸೃಜನಾತ್ಮಕ ಕಾರ್ಯಕ್ರಮಗಳ ಸಂಖ್ಯೆ ಹೆಚ್ಚಾಗಿ ಹದಿನೆಂಟಕ್ಕೆ ತಲುಪಿತು.
29. ಕಾಸ್ಟ್ರಾಟಿಕ್ ಪ್ರೋಗ್ರಾಮ್, ಪುಟ–7.
30. ಹರಿಜನ ಸೇವಕ. 9–8–1942. ಪುಟ–269–50.
31. ಯಂಗ್ ಇಂಡಿಯಾ, 13–4–191. ಪುಟ–78.
32. ಕಾಸ್ಟ್ರಕ್ಟಿವ್ ಪ್ರೋಗ್ರಾಮ್ 4. ಡಿಸೆಂಬರ್, 23. 1941.
33. ಹರಿಜನ್ . 16 ಫೆಬ್ರವರಿ1934.
34. ಯಂಗ್ ಇಂಡಿಯಾ, 1–61931, ಪುಟ–170.
35. ಮಹಾತ್ಮ ಗಾಂಧಿ: ದ ಲಾಸ್ಟ್ ಸ್ಪೀಚ್ ಲೇಖಕ ಪ್ಯಾರೆಲಾಲ್ ಭಾಗ–2 ಪುಟ–101.
36. ಪ್ರಾರ್ಥನೆಯ ಪ್ರವಚನ 13 ಸೆಪ್ಟೆಂಬರ್ 1947.
37. ಪ್ರಾರ್ಥನೆಯ ಪ್ರವಚನ, 2–10–1947.
38. ಪ್ರಾರ್ಥನೆಯ ಪ್ರವಚನ, 19–10–1947.
39. ಯಂಗ್ ಇಂಡಿಯಾ, 9–1–1930.
40. ಯಂಗ್ ಇಂಡಿಯಾ, 24–9–1931.
41. ಹರಿಜನ್, 30–41938.
42. ಹರಿಜನ್, 5–8–1939.
43. ಯಂಗ್ ಇಂಡಿಯಾ, 10–3–1927.
44. ಹರಿಜನ್, 13–7–1940.
45. ಹರಿಜನ್, 13–7–1940.
46. ಹರಿಜನ್, 8–8–1946.
67. ಹರಿಜನ್, 30–3–1947.
48. ಹರಿಜನ್, 27–4–1947.
49. ಹರಿಜನ್ , 27–41947
50. ವಿಶ್ವವಾಣಿ ಡಿಸೆಂಬರ್ 1946. ಪುಟ–367.
51. ಪ್ರಾರ್ಥನಾ ಪ್ರವಚನ. 24–11–1947 ಪುಟ. 112. 113.
52. ಪ್ರಾರ್ಥನಾ ಪ್ರವಚನ. 10–9–1947.
53. ಪ್ರಾರ್ಥನಾ ಪ್ರವಚನ. 11–12–1947. ಪುಟ–191–92.
54. ಪ್ರಾರ್ಥನ ಪ್ರವಚನ. 12–9–1947.

55. ಪ್ರಾರ್ಥನ ಪ್ರವಚನ. 14–9–1947.
56. ಪ್ರಾರ್ಥನ ಪ್ರವಚನ. 18–9–1947.
57. ಪ್ರಾರ್ಥನ ಪ್ರವಚನ. 19–9–1947.
58. ಪ್ರಾರ್ಥನಾ ಪ್ರವಚನ, 20–9–1947.
59. ಪ್ರಾರ್ಥನಾ ಪ್ರವಚನ, 16–9–1947
60. 24 ಜನವರಿ1949 ಪ್ರಾರ್ಥನಾ ಸಭೆಯಲ್ಲಿ ಗಾಂಧೀಜಿ ಬರೆದಿರುವ ಸಂದೇಶ.
61. ಪ್ರಾರ್ಥನಾ ಪ್ರವಚನ 18 ಜನವರಿ 1948.
62. ಮಹಾತ್ಮ ಗಾಂಧಿ– ದ ಲಾಸ್ಟ್ ಪೇಜ್, ಲೇಖಕ– ಪ್ಯಾರೆಲಾಲ್, ಭಾಗ–2 ಪುಟ439.
63. ವಿ ಆರ್ ಅರ್ವರ್ ನ್ಯಾಷನಲ್ ಡಿಫೆನ್ಸ್, ಲೇಖಕರು ಶ್ರೀ. ಎಂ. ಎಸ್ ಗೋಲ್ವಾಲ್ಕರ್. ಪುಟ–23.
64. ಮೇಲಿನಂತೆ, ಪುಟ–19–20.
65. ಮಹಾತ್ಮ ಗಾಂಧಿ: ದ ಲಾಸ್ಟ ಫೆಸ್, ಲೇಖಕ, ಪ್ಯಾರೆಲಾಲ್ ಭಾಗ–1 ಪುಟ 440–41.
66. ಜನವರಿ 1948ಕ್ಕೆ ಲಕ್ನೋದಲ್ಲಿ ಸರ್ದಾರ್ ಪಟೇಲರ ಭಾಷಣ.
67. ಜನವರಿ 1948ಕ್ಕೆ ಲಕ್ನೋನಲ್ಲಿ ಸರ್ದಾರ್ ಪಟೇಲರ ಭಾಷಣ.
68. ಮಹಾತ್ಮ ಗಾಂಧಿ ದ ಲಾಸ್ಟ್ ಫೇಸ್. ಲೇಖಕ. ಪ್ಯಾರೆಲಾಲ್ –ಭಾಗ 1, ಪುಟ 363.
69. ನೀಗ್ರೋ ಜಾತಿಯ ಪ್ರಸಿದ್ಧ ನಾಯಕ ಮತ್ತು ಈ ಭಾಷಣದ 20 ವರ್ಷಗಳ ನಂತರ ಮನುಷ್ಯತ್ವವನ್ನು ರಕ್ಷಿಸುತ್ತಾ ಬಲಿಯಾದ.
70. ವಿಧಿ ನಿರ್ಣಯಿಸಿದ ಶುಕ್ರವಾರ" ಪ್ಯಾರೆಲಾಲ್. ವಿಶ್ವವಾಣಿ, ಫೆಬ್ರವರಿ–ಮಾರ್ಚ್ 1948 ಪುಟ 113.
71. ನಮ್ಮ ಇತಿಹಾಸಕ್ಕೆ ಅಂಟಿದ ಕಪ್ಪುಚುಕ್ಕೆ ರಾಹುಲ್ ಸಾಕೃತ್ಯಾಯನ, ಪುಟ–138.
72. ವಿಶ್ವವಾಣಿ, ಶ್ರದ್ಧಾಂಜಲಿ ಭಾಗ, ಫೆಬ್ರವರಿ 1948, ಪುಟ–80.
73. ವಿಶ್ವವಾಣಿ, ಶ್ರದ್ಧಾಂಜಲಿ ಭಾಗ, ಫೆಬ್ರವರಿ 1948.

ಗಾಂಧೀಜಿ ಅವರ ಜೀವನ ಘಟನಾವಳಿಗಳು

ಪೋರಬಂದರದಲ್ಲಿ ಜನನ	2. 10. 1869
ಕಸ್ತೂರ್‌ಬಾರೊಂದಿಗೆ ವಿವಾಹ	1883
ಮೆಟ್ರಿಕ್ಯುಲೇಶನ್ ಉತ್ತೀರ್ಣರಾದದ್ದು	1887
ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ	1888
ಬ್ಯಾರಿಸ್ಟರರಾಗಿ ದಾಖಲಾತಿ	1891
ಮರಳಿ ಭಾರತಕ್ಕೆ ಬೊಂಬಾಯಿ, ರಾಜ್‌ಕೋಟೆಯಲ್ಲಿ ವಕೀಲಿ ವೃತ್ತಿ	1891
ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣ	1893
ಬೋಯರ್ ಯುದ್ಧ ಮತ್ತು ಜೂಲು ದಂಗೆಯಲ್ಲಿ ಇಂಡಿಯನ್ ಅಂಬುಲೆನ್ಸ್ ಕೋರ್ ನೇತೃತ್ವ	1899
ಭಾರತಕ್ಕೆ ವಾಪಸ್ಸು	1901
ಭಾರತದಲ್ಲಿ ವ್ಯಾಪಕವಾದ ಪ್ರವಾಸ, ಕಲ್ಕತ್ತದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಭೆಯಲ್ಲಿ ಪಾಲ್ಗೊಂಡಿದ್ದು, ಬೊಂಬಾಯಿಲ್ಲಿ ಲಾಯರ್ ಆಫೀಸ್ ಪ್ರಾರಂಭ	1901
ಭಾರತೀಯರ ಕೋರಿಕೆಯಂತೆ ದಕ್ಷಿಣ ಆಫ್ರಿಕಾಕ್ಕೆ ಪ್ರಯಾಣ	1902
ಟ್ರಾನ್ಸ್‌ವಾಲ್ ಬ್ರಿಟಿಷ್ ಇಂಡಿಯಾ ಅಸೋಸಿಯೇಷನ್	1903
ಇಂಡಿಯನ್ ಒಪಿನಿಯನ್ ಪತ್ರಿಕೆಯ ಪ್ರಾರಂಭ	1904
ಫೀನಿಕ್ಸ್ ಆಶ್ರಮ ಸ್ಥಾಪನೆ	1904
ಸೆಪ್ಟಂಬರ್ ವೀರಾಗಾಂನಲ್ಲಿ ಸಮುದ್ರ ಪ್ರಯಾಣಿಕರ ಶೋಷಣೆಯ ವಿರುದ್ಧ ಸತ್ಯಾಗ್ರಹ ಮಾಡುವ ಬೆದರಿಕೆ	1905
ಟ್ರಾನ್ಸ್‌ವಾಲ್‌ನ ಭಾರತೀಯ ವಲಸೆಗಾರರ ಮೇಲೆ ಪ್ರಯೋಗಿಸಲಾಗುವ "ಏಸಿಯಾಟಿಕ್ ಆರ್ಡಿನೆನ್ಸ್ ವಿರುದ್ಧ ಚಳುವಳಿ	1906
ಬ್ರಹ್ಮಚರ್ಯ ವ್ರತ ಸ್ವೀಕಾರ	1906
ಇಂಗ್ಲೆಂಡಿಗೆ ಪ್ರಯಾಣ	1906
ಜೂನ್, ಸತ್ಯಾಗ್ರಹ ಪಿಪಿಯನ್ನರ ಬಲತ್ಕಾರದ ನೋಂದಾವಣೆ (ಕರಾಳ ಕಾನೂನು) ವಿರುದ್ಧ ಸತ್ಯಾಗ್ರಹ	1907

ಸತ್ಯಾಗ್ರಹ ನಡೆಸಿದ್ದಕ್ಕೆ ದಕ್ಷಿಣ ಆಫ್ರಿಕಾದ	
ಜೋಹಾನ್ಸ್‌ಬರ್ಗ್‌ನಲ್ಲಿ ಪ್ರಥಮ ಜೈಲುವಾಸ	1908
ಇಂಗ್ಲೆಂಡಿಗೆ ಪ್ರಯಾಣ, ಭಾರತೀಯ	
ವಲಸೆಗಾರರ ಪರವಾದಗಳು, ಸ್ತ್ರೀ ಸ್ವಾತಂತ್ರ್ಯ ಹೋರಾಟ ಪರಿಶೀಲನೆ	1909
ಮೇ ಜೋಹಾನ್ಸ್‌ಬರ್ಗ್‌ನಲ್ಲಿ ಟಾಲ್‌ಸ್ಟಾಯ್	
ಫಾರ್ಮ್ ಸ್ಥಾಪನೆ	1910
ದಕ್ಷಿಣ ಆಫ್ರಿಕಾದಲ್ಲಿ ಚಾರಿತ್ರಿಕ ಸತ್ಯಾಗ್ರಹ ಆರಂಭ	1913
ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಆಗಮನ	1914
ಮೇ ಅಹಮದಾಬಾದ್ ಬಳಿ ಸತ್ಯಾಗ್ರಹ	
ಆಶ್ರಮ ಸ್ಥಾಪನೆ	1915
ಸಬರಮತಿ ಆಶ್ರಮ ಸ್ಥಾಪನೆ	1917 ಫೆಬ್ರವರಿ
ಅಹಮದಾಬಾದ್ ಮಿಲ್	
ಕೂಲಿಗಾರರ ಪರ ಹೋರಾಟ, ಮೂರು ದಿನ ಉಪವಾಸ	
ಸತ್ಯಾಗ್ರಹ, ಭರತದಲ್ಲಿ ಇದೇ ಮೊದಲ ಉಪವಾಸ	
ಖೇಡಾದಲ್ಲಿ ಕರನಿರಾಕರಣೆ ಚಳುವಳಿ	1918
ಜಲಿಯನ್ ವಾಲಾಬಾಗ್ ಹತ್ಯಾಕಾಂಡ	
ವಿರೋಧಿಸಿ ಏಪ್ರಿಲ್ 13–14ರಂದು ಉಪವಾಸ	1919
ಯಂಗ್ ಇಂಡಿಯಾ ಮತ್ತು ನವಜೀವನ ಪತ್ರಿಕೆಗಳ ಆರಂಭ	1919
ಅಸಹಕಾರ ಚಳುವಳಿ, ಖಿಲಾಫತ್ ಚಳುವಳಿ	
ಅಖಿಲ ಭಾರತ ಹೋಂರೂಲ್ ಲೀಗ್ ಅಧ್ಯಕ್ಷತೆ	1920
ಖಾದಿಯ ಪಂಚೆ ಉಡುವ ನಿರ್ಧಾರ ಮತ್ತು	
ಖಾದಿ ಪ್ರಚಾರ ಆರಂಭ	1921
ಚೌರಿಚೌರಾ ಹತ್ಯಾಕಾಂಡ, ಅಸಹಕಾರ ಸತ್ಯಾಗ್ರಹ	
ನಿಲುಗಡೆ, ಬಾರ್ದೋಲಿಯಲ್ಲಿ ಐದು ದಿನದ	
ಉಪವಾಸ, ಯಂಗ್ ಇಂಡಿಯಾ	
ಲೇಖನಗಳಿಗಾಗಿ ರಾಜದ್ರೋಹದ ಆಪಾದನೆ	
ಮೇಲೆ ದಸ್ತಗಿರಿ ಭಾರತದಲ್ಲಿ ಪ್ರಥಮ ಜೈಲುವಾಸ	1922 ಫೆಬ್ರವರಿ
ಯರವಾಡಾ ಜೈಲಿನಿಂದ ಬಿಡುಗಡೆ	1924
ಹಿಂದೂ ಮುಸ್ಲಿಂ ಏಕತೆಗಾಗಿ 21 ದಿನ ಉಪವಾಸ	1924
ಬೆಳಗಾವಿ ಕಾಂಗ್ರೆಸ್ ಅಧಿವೇಶನ	1924

ಚರಖಾ ಸಂಘದ ಸ್ಥಾಪನೆ	1925
ಬಾರ್ದೋಲಿ ಸತ್ಯಾಗ್ರಹ ಅನ್ಯಾಯದ ತೆರಿಗೆ ವಿರುದ್ಧ	1928
ಮೂರನೇ ಅಖಿಲ ಭಾರತ ಸತ್ಯಾಗ್ರಹ	
ಜನವರಿ 26 ರಾಷ್ಟ್ರದಿನವೆಂದು ಸೂಚನೆ	
ಉಪ್ಪಿನ ಸತ್ಯಾಗ್ರಹ ಮತ್ತು ದಂಡೀಯಾತ್ರೆ	1930
ಯೂರೋಪು ಸಂದರ್ಶನ ಮತ್ತು	
ದುಂಡು ಮೇಜಿನ ಪರಿಷತ್ತು ವಿಫಲ	1931
ಹರಿಜನರಿಗೆ ಪ್ರತ್ಯೇಕ ಚುನಾವಣೆಗಳನ್ನು ಏರ್ಪಡಿಸುವ ಬ್ರಿಟಿಷ್	
ಯೋಜನೆಗಳನ್ನು ವಿರೋಧಿಸಿ ಉಪವಾಸ ಸತ್ಯಾಗ್ರಹ	
ಹರಿಜನ ವಾರ ಪತ್ರಿಕೆ ಆರಂಭ ಸೇವಾಗ್ರಾಮ ಆಶ್ರಮ ಸ್ಥಾಪನೆ	1933
ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ, ಮೂರು ಸಲ	
ಗಾಂಧೀಜಿಯ ಕೊಲೆಯ ಪ್ರಯತ್ನಗಳು	
ಅಖಿಲ ಭಾರತ ಗ್ರಾಮೋದ್ಯೋಗ ಸಂಘ ಆರಂಭ	1934
ವಾರ್ಧಾ ಸಮೀಪ ಸೇವಾಗ್ರಾಮ ಆಶ್ರಮ ಆರಂಭ	1936
ನಯೀ ತಾಲೀಂ ಶಿಕ್ಷಣ ಪದ್ಧತಿ ಪ್ರಾರಂಭ	1937
"ಭಾರತ ಬಿಟ್ಟು ತೊಲಗಿ" ಚಳುವಳಿ	1942
21 ದಿನಗಳ ಉಪವಾಸ ಸತ್ಯಾಗ್ರಹ ಆರಂಭ	1943
ಫೆ. 22 ಕಸ್ತೂರಬಾ ಮರಣ, 23ರಂದು	
ಆಗಾಖಾನ್ ಅರಮನೆ ಆವರಣದಲ್ಲಿ ದಹನ	1944
ಕೊನೆಯ ಬಾರಿಗೆ ಆಗಾಖಾನ್	
ಅರಮನೆಯಲ್ಲಿ ಸೆರೆವಾಸ	
ಕ್ಯಾಬಿನೆಟ್ ಮಿಷನ್, ಸಿಮ್ಲಾ ಸಮ್ಮೇಳನ	1945
ಕ್ಯಾಬಿನೆಟ್ ಅಂಗೀಕಾರ, ನೌಖಾಲಿ ಶಾಂತಿ ಪಾದಯಾತ್ರೆ	1946
ಭಾರತಕ್ಕೆ ಸ್ವಾತಂತ್ರ್ಯ ಮತ್ತು ದೇಶ ವಿಭಜನೆ	1947
ದೆಹಲಿಯಲ್ಲಿ ಕೋಮುವಾರು ಸೌಹಾರ್ದಕ್ಕಾಗಿ	
ಕೊನೆಯ ಉಪವಾಸ	1948
ಹಂತಕನ ಗುಂಡೇಟಿಗೆ ಹುತಾತ್ಮರು	30–1–1948
ರಾಜ್‌ಘಾಟದಲ್ಲಿ ದಹನ	31–1–1948

ಕಸ್ತೂರ್‌ಬಾ ಅವರ ಜೀವನ ಘಟನಾವಳಿಗಳು

ಪೋರಬಂದರದಲ್ಲಿ ಜನನ	11. 04. 1869
ಗಾಂಧಿ ಅವರೊಡನೆ ವಿವಾಹ	1888
ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣ	1896
ಗಾಂಧಿ ಅವರ ಮೇಲೆ ಆಕ್ರಮಣ ಖಂಡನೆ	1897
ಜೋಹನ್ಸ್‌ಬರ್ಗ್‌ನಲ್ಲಿ ಪ್ಲೇಗ್ ಪೀಡಿತರ ಸೇವೆ	1904
ಜೋಹನ್ಸ್‌ಬರ್ಗ್‌ನಲ್ಲಿ ಭಾರತೀಯ ಮಹಿಳೆಯರಿಗೆ ಸಂದೇಶ	1909
ಗುಜರಾತಿನ ಕೊಚಬರ್ಾದಲ್ಲಿ ಆಶ್ರಮ ಸ್ಥಾಪನೆ	25. 05. 1915
ಗಾಂಧೀಜಿ ಅವರೊಡನೆ ಭಾರತದಾದ್ಯಂತ ಪ್ರವಾಸ	1916
ಗಾಂಧೀಜಿ ಅವರೊಡನೆ ಚಂಪಾರಣ್ಯ ಚಳುವಳಿಯಲ್ಲಿ ಭಾಗಿ	1917
ಸಾಬರಮತಿ ಆಶ್ರಮದ ನಿರ್ವಹಣೆಯ ಜವಾಬ್ದಾರೆ	1920
ಗಾಂಧೀಜಿ ಅವರೊಡನೆ ವಿದೇಶಿ ವಸ್ತ್ರಗಳ ನಾಶ	1921
ವಿದೇಶಿ ವಸ್ತ್ರ ಬಹಿಷ್ಕಾರ ಮತ್ತು ನೂಲು ನೇಯಲು ಕರೆ	23. 03. 1922
ಅಸಹಕಾರ ಚಳುವಳಿಯಲ್ಲಿ ಭಾಗಿ	1930
ಭಾರತೀಯ ಮಹಿಳೆಯರಿಂದ ಕಸ್ತೂರ್‌ಬಾಗೆ ಹಣ ನೀಡಿಕೆ	1931
ಅಸಹಕಾರ ಚಳುವಳಿಗಾಗಿ 6 ವಾರಗಳ ಸೆರೆಮನೆ ವಾಸ	1932
ಬ್ರಿಟಿಷರಿಂದ ಬಂಧನ ಮತ್ತೆ ಸೆರೆವಾಸ	1933
ಸಾಬರಮತಿ ಆಶ್ರಮ ಮುತ್ತಿಗೆ	1933
ಗಾಂಧಿಯವರೊಡನೆ ಪೂನಾದ ಮುನಿಸಿಪಲ್ ಹಾಲ್‌ಗೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದಾಗ ನಾಡಬಾಂಬ್ ಎಸೆತ	1934
ಸೇವಾಗ್ರಾಮ ಆಶ್ರಮ ಸ್ಥಾಪನೆ	1936
ರಾಜ್‌ಕೊಟ್‌ನಲ್ಲಿ ಠಾಕೂರ ದಬ್ಬಾಳಿಕೆ ವಿರುದ್ಧ ಮಹಿಳಾ ಹೋರಾಟಗಾರರಿಗೆ ನೆರವು	1939
ಬಂಧನ, ಕತ್ತಲ ಜೈಲಿನಲ್ಲಿ ಸೆರೆಮನೆವಾಸ	03. 02. 1939
ಕಸ್ತೂರ್‌ಬಾ ಕುರಿತು ಹರಿಜನ ಪತ್ರಿಕೆಯಲ್ಲಿ ಗಾಂಧೀಜಿ ಅವರ ಲೇಖನ ಪ್ರಕಟ	06. 02. 1939
ಕಾಂಗ್ರೇಸ್ ಅಧಿವೇಶನಕ್ಕೆ ಗಾಂಧೀಜಿ ಅವರೊಡನೆ ಮುಂಬೈಗೆ ಪಯಣ	1942
ಶಿವಾಜಿ ಪಾರ್ಕ್‌ನಲ್ಲಿ ಬೃಹತ್ ಸಾರ್ವಜನಿಕ ಸಮಾವೇಶದಲ್ಲಿ ಮಾಡಿದ ಭಾಷಣಕ್ಕೆ ಬಂಧನ	09. 08. 1942
ಸೆರೆಮನೆಯಲ್ಲಿ 2 ಬಾರಿ ಹೃದಯಾಘಾತ	1944
ಸೆರೆಮನೆಯಲ್ಲಿ ತಮ್ಮ 74ನೇ ವಯಸ್ಸಿನಲ್ಲಿ ನಿಧನ	22.02.1944

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು

1.	ಆರೋಗ್ಯ ರಹಸ್ಯ	10–00
2.	ಕರ್ನಾಟಕದಲ್ಲಿ ಗಾಂಧೀ	5–00
3.	ರಾಮನಾಮ	6–00
4.	ಗಾಂಧೀ ಬಳಗದ ವಿದೇಶಿಯರು	40–00
5.	ಆರೋಗ್ಯ	8–00
6.	ಪ್ರಾರ್ಥನೆ	40–00
7.	ಸತ್ಯಾಗ್ರಹ	8–00
8.	ಮಹಿಳೆಯರಿಗಾಗಿ	8–00
9.	ಪಂಚಾಯತ್ ರಾಜ್	12–00
10.	ಆದರ್ಶಗಳು	12–00
11.	ನಮ್ಮ ಗಾಂಧೀ ತಾತ	22–00
12.	ದೇವನಗರಿಯಲ್ಲಿ ಗಾಂಧೀ ಧ್ವನಿ	2–00
13.	ನಮ್ಮ ಗಾಂಧೀ ತಾತ	15–00
14.	ಹೋರಾಟ ಶ್ರೀ	40–00
15.	ಮಹಾತ್ಮ ಗಾಂಧೀಜಿ ಅವರ ಜೀವನ ಮೈಲಿಗಲ್ಲುಗಳು	3–00
16.	ಗಾಂಧೀಜಿ ಜೀವನ ಚರಿತ್ರೆ	25–00
17.	ಕುವೆಂಪು ಕಂಡ ಗಾಂಧೀ	25–00
18.	ಉಪ್ಪಿನ ಸತ್ಯಾಗ್ರಹ	5–00
19.	ಹಿಂದ್ ಸ್ವರಾಜ್	50–00
20.	ಗಾಂಧೀ ಮತ್ತು ಆಧ್ಯಾತ್ಮಿಕ ಜೀವನ	25–00
21.	ನನ್ನ ಕನಸಿನ ಭಾರತ	30–00
22.	ಹಿಂದೂ ಧರ್ಮ	25–00
23.	ಮಹಿಳೆಯರು	63–00
24.	ಸ್ವಾತಂತ್ರ್ಯ	42–00
25.	ಅಸ್ಪೃಶ್ಯತೆ	45–00
26.	ಒಳ್ಳೆಯ ಜೀವನ	60–00
27.	ಗಾಂಧಿ ಮತ್ತು ಕರ್ನಾಟಕ	200–00
28.	ಸತ್ಯ	38–00
29.	ವಿದ್ಯಾರ್ಥಿಗಳಿಗಾಗಿ	30–00

30.	ಸರ್ವೋದಯ	30–00
31.	ಖಾದಿ ಗ್ರಾಮೋದ್ಯೋಗ	58–00
32.	ನನ್ನ ಬಾಲ್ಯದ ನೆನಪುಗಳು	52–00
33.	ಗ್ರಾಮರಾಜ್ಯ ಆಡಳಿತ	5–00
34.	ನನ್ನ ಕನಸಿನ ಸ್ವರಾಜ್ಯ	42–00
35.	ಹಾಸ್ಯ ಮತ್ತು ಗಾಂಧೀ	44–00
36.	ನನ್ನ ಆದರ್ಶಗ್ರಾಮ	5–00
37.	ಮಹಾತ್ಮ ಗಾಂಧೀ ವಿಚಾರಗಳು ಹಾಗೂ ವ್ಯವಸ್ಥಾಪನ ಪದ್ದತಿ	48–00
38.	ಸತ್ಯಾಗ್ರಹಿ	40–00
39.	ಗ್ರಾಮದಾನ ಗ್ರಾಮ ಸ್ವರಾಜ್ಯ	25–00
40.	ಗಾಂಧೀಜಿಯವರ ಪ್ರಾತ: ಸಾಯಂ ಪ್ರಾರ್ಥನೆ ಮತ್ತು ಭಜನೆ	
41.	ಉಪ್ಪಿನ ಸತ್ಯಾಗ್ರಹ ಮತ್ತು ಮೈಲಾರ ಮಹಾದೇವ	5–00
42.	ಸತ್ಯಾಗ್ರಹ	5–00
43.	ಹಿಂದ್ ಸ್ವರಾಜ್	5–00
44.	ಆರೋಗ್ಯ	5–00
45.	ಮಹಾತ್ಮ ಗಾಂಧಿ ಪ್ರಸ್ತುತತೆ	10–00
46.	ಬಹುರೂಪಿ ಗಾಂಧಿ	35–00
47.	ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ	30–00
48.	ಕೃತಯುಗಿ ವಿನೋಬಾ ಭಾವೆ	15–00
49.	ಮೋಹನ ತರಂಗ	40–00
50.	ನಮ್ಮ ಗಾಂಧಿ ತಾತ	22–00
51.	ಗೀತಾ ಪ್ರವಚನ	80–00
52.	ಜೆ.ಪಿ. ಜೀವನ ಹಾದಿ	45–00
53.	ಗಣ್ಯರು ಕಂಡಂತೆ ಗಾಂಧಿ	20.0
54.	ಗೀತಾಮಾತೆ	80.00
55.	ಲೋಕ ಚಿಂತಕರು	145.00
56.	ಕರ್ನಾಟಕದ ಕಸ್ತೂರ್‌ಬಾ ಯಶೋಧರಮ್ಮ ದಾಸಪ್ಪ	38.00
57.	ಮಹದೇವ ದೇಸಾಯಿ	63.00

58.	ಸಮಾಜವಾದ : ಗಾಂಧೀ ದೃಷ್ಟಿಕೋನ	15.00
59.	ಮಹಾತ್ಮ ಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ	28.00
60.	ಗಾಂಧೀ ಬಳಗದ ವಿದೇಶಿಯರು	89.00
61.	ಮಹಾತ್ಮ ಗಾಂಧೀ ಮತ್ತು ಸ್ವಚ್ಛ ಭಾರತ	33.00
62.	ಮಹಾತ್ಮ ಗಂಧೀಜಿ ಅವರ ಶೈಕ್ಷಣಿಕ ಸಿದ್ಧಾಂತ	80.00
63.	ಹುಕ್ಕೇರಿಕರ ರಾಮರಾಯರು	110.00
64.	ಮಹಿಳೆಯರು	63.00
65.	ನನ್ನ ಬಾಲ್ಯದ ನೆನಪುಗಳು	52.00
66.	ನಯೀ ತಾಲೀಂ	58.00
67.	ಚರಕ ಸಂಹಿತೆ	68.00
68.	ಸ್ವಚ್ಛ ಭಾರತಿ	82.00
69.	ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ	66.00
70.	ಗಾಂಧಿಯೊಳಗಿನ ಪತ್ರಕರ್ತ ಮರು ವೀಕ್ಷಣೆ	68.00
71.	ಅಂದಿಗೂ-ಇಂದಿಗೂ ಪ್ರಸ್ತುತ ಗಾಂಧೀಜಿ	94.00
72.	ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ	92.00
73.	ಆಧ್ಯಾತ್ಮಿಕ ಸುಸ್ಥಿರತೆ	72.00
74.	Nayi Talim	58.00
75.	Temple & Mosque	10–00
76.	Rastrapita Mahatma Gandhi	25–00
77.	Swarajya of My Dreams	5–00
78.	Gandhi My Grand Father	5–00
79.	Grand Pa Gandhi	5–00
80.	Relevance of Gandhi	20–00
81.	Vinoba Sage of the Age	20.00
82.	Kasturba	33.00
83.	Mahatma Gandhi and his Foreign Associates	87.00

ಕರ್ನಾಟಕದಲ್ಲಿ ಗಾಂಧೀಜಿ ಭೇಟಿ ನೀಡಿದ ಸ್ಥಳಗಳು

● ಬೆಂಗಳೂರು	ದಿ. 08-05-1915
● ಬೆಳಗಾವಿ	ದಿ. 27-04-1916 ರಿಂದ
	ದಿ. 01-05-1916 ರವರೆಗೆ
● ಬಿಜಾಪುರ (ವಿಜಯಪುರ)	ದಿ. 05-05-1918 ರಿಂದ
	ದಿ. 06-05-1918 ರವರೆಗೆ
● ಕಾಸರಗೋಡು	ದಿ. 19-08-1920
● ಮಂಗಳೂರು	ದಿ. 20-08-1920
● ಬೆಂಗಳೂರು	ದಿ. 21-08-1920
● ನಿಪ್ಪಾಣಿ, ಚಿಕ್ಕೋಡಿ, ಹುಕ್ಕೇರಿ, ಸಂಕೇಶ್ವರ, ಬೆಳಗಾವಿ	ದಿ. 08-11-1920
● ಬೆಳಗಾವಿ ಶಹಾಪುರ	ದಿ. 09-11-1920
ಖಾನಾಪುರ, ನಂದಗಢ, ಹಳ್ಯಾಳ	
● ಧಾರವಾಡ	ದಿ. 10-11-1920
● ಹುಬ್ಬಳ್ಳಿ, ಗದಗ	ದಿ. 11-11-1920
● ಸಾಂಗಲಿ	ದಿ. 12-11-1920
● ಬಾಗಲಕೋಟೆ	ದಿ. 27-05-1921
● ಬಿಜಾಪುರ (ವಿಜಯಪುರ), ಸೊಲ್ಲಾಪುರ	ದಿ. 28-05-1921
● ಬಳ್ಳಾರಿ	ದಿ. 30-09-1921
● ಬೆಳಗಾವಿ	ದಿ. 21-12-1924 ರಿಂದ
	ದಿ. 30-12-1924 ರವರೆಗೆ
● ಗುಲ್ಬರ್ಗಾ	ದಿ. 22-02-1927 ರಿಂದ
	ದಿ. 23-02-1927 ರವರೆಗೆ
● ನಿಪ್ಪಾಣಿ	ದಿ. 27-03-1927 ರಿಂದ
	ದಿ. 31-03-1927 ರವರೆಗೆ
● ಬೆಳಗಾವಿ	ದಿ. 01-04-1927
	ದಿ. 18-04-1027 ರಿಂದ
	ದಿ. 19-04-1927ರವರೆಗೆ

- ಬೆಂಗಳೂರು — ದಿ. 06-06-1927 ರಿಂದ
  ದಿ. 13-07-1927 ರವರೆಗೆ
- ತುಮಕೂರು — ದಿ. 14-07-1927
- ತುಮಕೂರು, ಮಧುಗಿರಿ — ದಿ. 15-07-1927
- ತುಮಕೂರು — ದಿ. 16-07-1927
- ಬೆಂಗಳೂರು — ದಿ. 17-07-1927
- ಬೆಂಗಳೂರು — ದಿ. 18-07-1927
- ಮೈಸೂರು — ದಿ. 19-07-1927 ರಿಂದ
  ದಿ. 21-07-1927 ರವರೆಗೆ
- ಕೃಷ್ಣರಾಜಸಾಗರ, ಯಡತೊರೆ ಶ್ರೀರಂಗಪಟ್ಟಣ, ದರಿಯಾದೌಲತ್ — ದಿ. 21-07-1927
- ಮೈಸೂರು — ದಿ. 23-07-1927
- ಬೆಂಗಳೂರು — ದಿ. 24-07-1927 ರಿಂದ
  ದಿ. 30-07-1927 ರವರೆಗೆ
- ಕ್ಲೋಸ್‌ಪೇಟೆ (ರಾಮನಗರ) ಕಾನಕಾನಹಳ್ಳಿ (ಕನಕಪುರ) — ದಿ. 31-07-1927
- ಬೆಂಗಳೂರು — ದಿ. 01-08-1927
- ಅರಸೀಕರೆ, ಹಾಸನ — ದಿ. 02-08-1927
- ಹಾಸನ — ದಿ. 03-08-1927
- ಹಾಸನ, ಹೊಳೆನರಸೀಪುರ — ದಿ. 04-08-1927
- ಬೆಂಗಳೂರು — ದಿ. 05-08-1927 ರಿಂದ
  ದಿ. 11-08-1927 ರವರೆಗೆ
- ದಾವಣಗೆರೆ — ದಿ. 12-08-1927
- ಹರಿಹರ, ಹೊನ್ನಾಳಿ, ಮಲೆಬೆನ್ನೂರು — ದಿ. 13-08-1927
- ಶಿವಮೊಗ್ಗ — ದಿ. 14-08-1927 ರಿಂದ
  ದಿ. 15-08-1927 ರವರೆಗೆ
- ಆಯ್ಯನೂರು, ಕುಂಸಿ, ಸಾಗರ, ಶಿವಮೊಗ್ಗ — ದಿ. 16-08-1927
- ಶಿವಮೊಗ್ಗ, ತೀರ್ಥಹಳ್ಳಿ, ಮಂದಗದ್ದೆ, ರಾಜನೂರು — ದಿ. 17-08-1927

- ಭದ್ರಾವತಿ, ತರೀಕೆರೆ, ಬೀರೂರು, ಕಡೂರು ದಿ. 18-08-1927
- ಚಿಕ್ಕಮಗಳೂರು ದಿ. 19-08-1927
- ಬೇಲೂರು, ಹಳೇಬೀಡು, ಅರಸೀಕೆರೆ ದಿ. 20-08-1927
- ತಿಪಟೂರು ದಿ. 21-08-1927
- ಬೆಂಗಳೂರು ದಿ. 22-08-1927
- ಬೆಂಗಳೂರು ದಿ. 23-08-1927
- ಹೊಸೂರು, ಸೂಳಗಿರಿ, ಕೃಷ್ಣಗಿರಿ ದಿ. 24-08-1927
- ಬೆಂಗಳೂರು ದಿ. 25-08-1927 ರಿಂದ
  ದಿ. 30-08-1927 ರವರೆಗೆ
- ಹಿಂದೂಪುರ, ವಿಧುರಾಶ್ವತ್ಥ ದಿ. 04-01-1934
  ಗೌರಿಬಿದನೂರು, ದೊಡ್ಡಬಳ್ಳಾಪುರ,
  ತುಮಕೂರು, ತ್ಯಾಮಗೊಂಡ್ಲು, ನೆಲಮಂಗಲ
  ಬೆಂಗಳೂರು, ಮೈಸೂರು
- ತಗಡೂರು, ಬದನವಾಳ, ನಂಜನಗೂಡು
  ಮೈಸೂರು ದಿ. 05-01-1934
- ಮಂಡ್ಯ, ಚನ್ನಪಟ್ಟಣ, ರಾಮನಗರ ದಿ. 06-01-1934
  ಕನಕಪುರ, ಬಿಡದಿ, ಕೆಂಗೇರಿ
- ಬೆಂಗಳೂರು ದಿ. 07-01-1934 ರಿಂದ
  ದಿ. 09-01-1934 ರವರೆಗೆ
- ಪೊನ್ನಂಪೇಟೆ, ಹುದಿಕೇರಿ ದಿ. 22-02-1934
- ವಿರಾಜಪೇಟೆ, ಬೆಳ್ಳೂರು ದಿ. 23-02-1934
  ಸೋಮವಾರ ಪೇಟೆ, ಗುಂಡುಕಟ್ಟೆ
- ಮಡಿಕೇರಿ, ಸಂಪಾಜೆ, ಸುಳ್ಯ, ಪುತ್ತೂರು, ದಿ. 24-02-1934
  ಉಪ್ಪಿನಂಗಡಿ, ವಿಠಲಗಬ್ಬ, ಕಲ್ಲಡ್ಕ, ಪಾಣೆ
  ಮಂಗಳೂರು, ಬಂಟ್ವಾಳ, ಮಂಗಳೂರು
- ಮಂಗಳೂರು, ಗುರುಪುರ, ಬಜ್ಪೆ, ಯಕ್ಕೂರು, ದಿ. 25-02-1934
  ಕಟೀಲು, ಕಿನ್ನಗೋಳಿ, ಮೂಲ್ಕಿ, ಪಡುಬಿದ್ರಿ,
  ಕಟಪಾಡಿ, ಗುರುಪುರ, ಉದ್ಯಾವರ
  ಉಡುಪಿ, ಬ್ರಹ್ಮಾವರ, ಸಿದ್ದಾಪುರ
- ಕುಂದಾಪುರ ದಿ. 26-02-1934

- ಕುಂದಾಪುರ, ಭಟ್ಕಳ, ಹೊನ್ನಾವರ, ಕಾರವಾರ — ದಿ. 27-02-1934
- ಕಾರವಾರ, ಕುಮುಟಾ, ಅಂಕೋಲ ಚಂದಿಯಾ, ಶಿರಸಿ — ದಿ. 28-02-1934
- ಶಿರಸಿ, ಸಿದ್ದಾಪುರ, ದಾಸನಕೊಪ್ಪ ಇಸಲೂರು, ಏಕಾಂಬಿ, ಆಲೂರು ಬ್ಯಾಡಗಿ, ಮೋಟೆಬೆನ್ನೂರು — ದಿ. 01-03-1934
- ಹಾವೇರಿ, ರಾಣೆಬೆನ್ನೂರು, ಹರಿಹರ ದಾವಣಗೆರೆ, ಹರಪನಹಳ್ಳಿ, ಕೊಟ್ಟೂರು ಕೂಡ್ಲಿಗೆ, ದುಗ್ಗಾವತಿ, ಕಣಿವೆಹಳ್ಳಿ ಸೊಂಡೂರು — ದಿ. 02-03-1934
- ಸೊಂಡೂರು, ಬಳ್ಳಾರಿ, ಹೊಸಪೇಟೆ ಭಾನಾಪುರ, ಗದಗ, ಜಕ್ಕಲಿ, ಹುಬ್ಬಳ್ಳಿ — ದಿ. 03-03-1934
- ಹುಬ್ಬಳ್ಳಿ, ಧಾರವಾಡ, ಅಮ್ಮಿನಭಾವಿ ಹಿರೇಉಳ್ಳಗೇರಿ, ಬೈಲಹೊಂಗಲ ಉಪ್ಪಿನ, ಬೆಟಗೇರಿ, ಸೌಂದತ್ತಿ ಸಂಪಗಾಂವ್, ಹೊಸೂರು, ಬೆಳಗಾವಿ — ದಿ. 04-03-1934
- ಬೆಳಗಾವಿ — ದಿ. 05-03-1934
- ಬೆಳಗಾವಿ — ದಿ. 06-03-1934
- ಬೆಳಗಾವಿ, ಯಮಕನಮರಡಿ, ವಂಟಮರಿ ಹುಕ್ಕೇರಿ, ಗೋಕಾಕ, ಸಂಕೇಶ್ವರ ನವಲೀಹಾಳ, ಚಿಕ್ಕೋಡಿ, ಅಂಕಲಿ — ದಿ. 07-03-1934
- ಶೆಡಬಾಳ, ಬನಹಟ್ಟಿ, ಅಥಣಿ, ಬಿಜಾಪುರ , ತಿಕೋಟ, ತೊರವಿ ಇಳಕಲ್ — ದಿ. 08-03-1934
- ನಂದಿ ಬೆಟ್ಟ — 10-05-1936 ರಿಂದ 30-05-1936 ರವರೆಗೆ
- ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಕೋಲಾರ, ಬಂಗಾರ ಪೇಟೆ, ಕೆ. ಜಿ. ಎಫ್ — 31-05-1936
- ಬೆಂಗಳೂರು — 01-06-1936 ರಿಂದ 12-06-1936 ರವರೆಗೆ
- ಬೆಳಗಾವಿ ಜಿಲ್ಲೆಯ ಹುದಲಿ — 16-04-1937 ರಿಂದ 21-04-1937 ರವರೆಗೆ

ಗಾಂಧಿ ಅವರ ನೀತಿ ಮಾರ್ಗ ಸೂಚಿ

ಏಕಾದಶ ವ್ರತಗಳು

ಸತ್ಯ	**Truth**
ಅಹಿಂಸೆ	**Ahimsa or Love**
ಅಸ್ತೇಯ (ಕದಿಯದಿರುವುದು)	**Non-Stealing**
ಬ್ರಹ್ಮಚರ್ಯ	**Brahmacharya or Chastity**
ಅಸಂಗ್ರಹ (ಅಪರಿಗ್ರಹ)	**Non-Possession**
ಶರೀರ ಶ್ರಮ	**Physical Labour**
ಅಸ್ವಾದ (ನಾಲಿಗೆ ಚಪಲ)	**Control on the Palate**
ಸರ್ವತ್ರ ಭಯವರ್ಜನ (ಅಭಯ)	**Fearlessness**
ಸರ್ವಧರ್ಮ ಸಮಾನತ್ವ	**Equality of Religion**
ಸ್ವದೇಶಿ	**Swadeshi**
ಸ್ಪರ್ಶ ಭಾವನೆ (ಅಸ್ಪೃಶ್ಯತಾ ನಿವಾರಣೆ)	**Removal of Untouchability**

ಏಳು ಸಾಮಾಜಿಕ ಪಾತಕಗಳು Seven Social Sins

ತತ್ವರಹಿತ ರಾಜಕಾರಣ	**Politics without Principles**
ದುಡಿಮೆ ಇಲ್ಲದ ಸಂಪತ್ತು	**Wealth without Work**
ಆತ್ಮಸಾಕ್ಷಿ ಇಲ್ಲದ ಸಂತೋಷ	**Pleasure without Conscience**
ಚಾರಿತ್ರ್ಯವಿಲ್ಲದ ಶಿಕ್ಷಣ	**Education without Character**
ನೀತಿ ಇಲ್ಲದ ವ್ಯಾಪಾರ	**Commerce without Morality**
ಮಾನವೀಯತೆ ಇಲ್ಲದ ವಿಜ್ಞಾನ	**Science without Humanity**
ತ್ಯಾಗ ಇಲ್ಲದ ಪೂಜೆ	**Worship without Sacrifice**

– ಮಹಾತ್ಮ ಗಾಂಧೀಜಿ

ಹದಿನೆಂಟು ರಚನಾತ್ಮಕ ಕಾರ್ಯಗಳು
18 CONSTRUCTIVE PROGRAMMES

ಮತೀಯ ಐಕ್ಯತೆ	**Communal Unity**
ಅಸ್ಪೃಶ್ಯತಾ ನಿವಾರಣೆ	**Removal of Untouchability**
ಪಾನನಿರೋಧ	**Prohibition**
ಖಾದಿ	**Khadi**
ಇತರೆ ಗ್ರಾಮೋದ್ಯೋಗಗಳು	**Other village industries**
ಗ್ರಾಮ ನೈರ್ಮಲ್ಯ	**Village Sanitation**
ಮೂಲ ಶಿಕ್ಷಣ	**Basic Education**
ವಯಸ್ಕರ ಶಿಕ್ಷಣ	**Adult Education**
ಮಹಿಳಾ ಸಬಲೀಕರಣ	**Women Empowerment**
ಆರೋಗ್ಯ ಮತ್ತು ಶುಚಿತ್ವ ಶಿಕ್ಷಣ	**Hygiene & Health Education**
ಪ್ರಾದೇಶಿಕ ಭಾಷೆ	**Provincial Languages**
ರಾಷ್ಟ್ರಭಾಷೆ	**National Language**
ಆರ್ಥಿಕ ಸಮಾನತೆ	**Economic Equality**
ರೈತರ ಸಬಲೀಕರಣ	**Empowerment of Farmers**
ಕಾರ್ಮಿಕರ ಸಬಲೀಕರಣ	**Empowerment of Labours**
ಆದಿವಾಸಿ ಸಬಲೀಕರಣ	**Tribal Empowerment**
ಕುಷ್ಠರೋಗ ನಿರ್ಮೂಲನೆ	**Cure of Lepracy**
ವಿದ್ಯಾರ್ಥಿಗಳು	**Students**

"ಹಿಂಸಿಸುವುದು ನೋಯಿಸುವುದು, ಪೀಡಿಸುವುದು, ಬಲತ್ಕಾರ ಇವು ಮನುಷ್ಯರ ಗುಣಗಳಲ್ಲ; ಇವು ಮೃಗೀಯ ಗುಣಗಳು". ಎಂದು ನಂಬಿದ್ದ ಮಹಾತ್ಮ ಗಾಂಧೀಜಿ "ಎಲ್ಲಾ ಧರ್ಮಗಳ ಮೂಲ ಕ್ಷಮೆ ಮತ್ತು ದಯೆ" ಎಂದಿದ್ದಾರೆ. ಹನ್ನೆರಡನೆಯ ಶತಮಾನದ ವಚನಕಾರ ಬಸವಣ್ಣ ದಯವಿಲ್ಲದ ಧರ್ಮ ಯಾವುದಯ್ಯ? ದಯವೇ ಬೇಕು ಸಕಲ ಪ್ರಾಣಿಗಳಲ್ಲಿ" ಎಂದರು.ಇಂತಹ ಶ್ರೇಷ್ಠ ಪರಂಪರೆಯಲ್ಲಿಯೇ ಹುಟ್ಟಿ ಬಂದಿರುವ ಕೆಲವರು ಧರ್ಮದ ಮೂಲ ಗುಣಕ್ಕೆ ಸಂಚಕಾರ ತರುವಂತೆ ವರ್ತಿಸುತ್ತಿದ್ದಾರೆ.

ಪ್ರಸ್ತುತ ಡಾ. ಷಾಕಿರಾ ಖಾನಂ ಹಿಂದಿಯಿಂದ ಅನುವಾದಿಸಿರುವ ವಿಶ್ವನಾಥ್ ಪಾಂಡೆಯವರ ಗಾಂಧೀಜಿ ಮತ್ತು ಹಿಂದೂ-ಮುಸಲ್ಮಾನರ ಸೌಹಾರ್ದತೆ ಎಂಬ ಪುಸ್ತಕದಲ್ಲಿ ಪ್ರಸ್ತಾಪಿಸಲಾಗಿರುವ ಸಂಗತಿಗಳನ್ನು ಗಾಂಧೀಜಿ ಅವರ ಬದುಕು ಮತ್ತು ಸಿದ್ಧಾಂತಗಳ ಹಿನ್ನೆಲೆಯಲ್ಲಿ ಪರಿಣಾಮಕಾರಿಯಾಗಿ ನಿರೂಪಿಸಲಾಗಿದೆ.

ಡಾ. ಕೆ. ಮರುಳಸಿದ್ದಪ್ಪ

ಗಾಂಧಿ ಅನುಯಾಯಿಯಾಗಿ, ಭಾರತ ಸ್ವಾತಂತ್ರ್ಯ ಹೋರಾಟದ ಅನೇಕ ಚಳುವಳಿಯಲ್ಲಿ ಗಾಂಧಿ ಅವರೊಂದಿಗೆ ಭಾಗವಹಿಸಿ, ಜೈಲುಶಿಕ್ಷೆ ಅನುಭವಿಸಿದ ಮಹಾನ್ ವ್ಯಕ್ತಿತ್ವದ ವಿಶ್ವಂಬರನಾಥ ಪಾಂಡೆ ಅವರಿಗೆ ನಾವೆಲ್ಲ ಋಣಿಗಳಾಗಿದ್ದೇವೆ. ಹದಿಮೂರು ವರ್ಷ ಜೈಲಿನಲ್ಲಿ ಕಳೆದಾಗ, ಜ್ಞಾನ, ವಿವೇಕಗಳು ಇವರ ಹೃದಯದಲ್ಲಿ ಮುಪ್ಪರಿಗೊಂಡು, ಸ್ವಾತಂತ್ರ ನಂತರ ಗಾಂಧಿ ಅವರ ರಚನಾತ್ಮಕ ಕಾರ್ಯದಲ್ಲಿ ತೊಡಗಿಕೊಂಡ ಇವರ ಘನವ್ಯಕ್ತಿತ್ವ ದೇಶವಾಸಿಗಳಿಗೆ ತಿಳಿಯಲೇ ಬೇಕೆಂದು ಗಾಂಧಿ ಭವನ ಈ ಕೃತಿಯನ್ನು ಪ್ರಕಟಿಸಿದೆ. ಗಾಂಧಿ ಅವರ ಸರ್ವಧರ್ಮ ಸಮಭಾವದ ಚಿಂತನೆಯನ್ನು ಮೈಗೂಡಿಸಿಕೊಂಡ ಪಾಂಡೆ ಅವರು ಅಜೀವ ಪರ್ಯಂತ ಅದಕ್ಕಾಗಿ ಶ್ರಮಿಸಿದರು. ಕೋಮು ಸೌಹಾರ್ಧತೆಯೇ ಭಾರತದ ಭದ್ರ ತಳಪಾಯ ಎಂಬುದನ್ನು ಈ ಕೃತಿಯಲ್ಲಿ ನಿರೂಪಿಸಿದ್ದಾರೆ.

ಇಂದಿರಾ ಕೃಷ್ಣಪ್ಪ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು - 560001
ISBN NO : 978-81-950785-2-3